# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 14, 2022

ಸಂಪುಟ : 49 ಸಂಚಿಕೆ : 31 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಎಲ್‌ಐಸಿ: ಏಷಿಯಾದಲ್ಲೇ ಎರಡನೇ ಮಹಾ ಪತನ

ನವದೆಹಲಿ, ಜೂ. 13 – ಬೃಹತ್ ಸಾಂಸ್ಥಿಕ ಹೂಡಿಕೆದಾರರಿಗೆ ವಿಧಿಸಲಾಗಿದ್ದ 30 ದಿನಗಳ ನಿರ್ಬಂಧದ ಅವಧಿ ಮುಗಿದ ದಿನದಂದು ಎಲ್.ಐ.ಸಿ. ಷೇರುಗಳ ಮೌಲ್ಯ 682 ರೂ.ಗಳಿಗೆ ಕುಸಿದಿದೆ. ಸೋಮವಾರದ ವಹಿವಾಟಿನಲ್ಲಿ ಎಲ್.ಐ.ಸಿ. ಷೇರುಗಳ ಮೌಲ್ಯ ಶೇ.4ರಷ್ಟು ಕುಸಿದಿದೆ. ಕಳೆದ ಹತ್ತು ದಿನಗಳ ವಹಿವಾಟಿನಲ್ಲಿ ಷೇರುಗಳ ಮೌಲ್ಯ ಶೇ.19ರಷ್ಟು ಕುಸಿದಿದೆ.

### ಐ.ಪಿ.ಓ. ನಂತರ ಷೇರು ಬೆಲೆ ಶೇ.28ರಷ್ಟು ಕುಸಿತ





ಐ.ಪಿ.ಓ. ವೇಳೆ ಪ್ರತಿ ಷೇರಿನ ಮೌಲ್ಯ 949 ರೂ.ಗಳಿಗೆ ನಿಗದಿಯಾಗಿತ್ತು. ಈ ಬೆಲೆಯಲ್ಲಿ ಸಾಂಸ್ಥಿಕ ಹೂಡಿಕೆದಾರರು 59.3 ಶತಕೋಟಿ ಷೇರುಗಳನ್ನು ಖರೀದಿಸಿದ್ದರು. ಇವುಗಳನ್ನು 30 ದಿನಗಳವರೆಗೆ ಮಾರಾಟ ಮಾಡುವಂತಿರಲಿಲ್ಲ. ಸೋಮವಾರದಂದು ಈ ಷೇರುಗಳು ಮಾರುಕಟ್ಟೆಗೆ ಮುಕ್ತವಾಗಿವೆ.

ಚಿಲ್ಲರೆ ಹಾಗೂ ಇತರೆ ಹೂಡಿಕೆದಾರರಿಗೆ ಅವಕಾಶ ನೀಡುವುದಕ್ಕೆ ಮುಂಚೆ ಉನ್ನತ ಸಾಂಸ್ಥಿಕ ಹೂಡಿಕೆದಾರರಿಗೆ ಷೇರುಗಳ ಖರೀದಿಗೆ ಅವಕಾಶ ನೀಡಲಾಗಿರುತ್ತದೆ. ಇವರು ನಿರ್ದಿಷ್ಟ ಅವಧಿಯವರೆಗೆ ಷೇರುಗಳನ್ನು ಮಾರುವಂತಿಲ್ಲ. ಜಾಗತಿಕ ಹೂಡಿಕೆದಾರರ ಜೊತೆಗೆ ಹೆಚ್.ಡಿ.ಎಫ್.ಸಿ. ಮುಚ್ಯುಯಲ್ ಫಂಡ್, ಎಸ್.ಬಿ.ಐ. ಸೇರಿದಂತೆ ಹಲವು ಸಂಸ್ಥೆಗಳು ಲಂಗರು ಹೂಡಿಕೆದಾರರಾಗಿ ಎಲ್.ಐ.ಸಿ. ಷೇರುಗಳನ್ನು ಖರೀದಿಸಿದ್ದವು. ಕಳೆದ ಮೇ 17ರಂದು ಎಲ್.ಐ.ಸಿ. ಷೇರುಗಳನ್ನು ಮಾರುಕಟ್ಟೆಗೆ ಬಿಡಲಾಗಿತ್ತು. 949 ರೂ.ಗಳಿಗೆ (2ನೇ ಪುಟಕ್ಕೆ)

# ಎರಡು ವಾರ ಕೊರೊನಾ ಏರಿಕೆ

## ಕಠಿಣ ಕ್ರಮ ಬೇಡ, ಮುನ್ನೆಚ್ಚರಿಕೆ ವಹಿಸಲು ಸರ್ಕಾರಕ್ಕೆ ತಾಂತ್ರಿಕ ತಜ್ಞರ ಸಲಹೆ



ಬೆಂಗಳೂರು, ಜೂ. 13 - ಕೋವಿಡ್-19 ಸೋಂಕು ಮುಂದಿನ ಎರಡು ವಾರಗಳ ಕಾಲ ಏರಿಕೆಯಾಗಲಿದ್ದು, ಇದನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮ ಜರುಗಿಸುವಂತೆ ತಾಂತ್ರಿಕ ತಜ್ಞರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಕಳೆದ ಒಂದು ವಾರದಿಂದ ರಾಜ್ಯದಲ್ಲಿ ಸೋಂಕಿನ ಪ್ರಮಾಣ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಸಚಿವ ಡಾ. ಸುಧಾಕರ್, ತಜ್ಞರು ಹಾಗೂ ಅಧಿಕಾರಿಗಳೊಟ್ಟಿಗೆ ಸಭೆ ನಡೆಸಿದ ಸಂದರ್ಭದಲ್ಲಿ ಸೋಂಕು ತಡೆಗಟ್ಟಲು ಸರ್ಕಾರಕ್ಕೆ ಹತ್ತು ಹಲವು ಸೂಚನೆಗಳನ್ನು ನೀಡಿದ್ದಾರೆ.

ಸಾಮಾಜಿಕ ಅಂತರ ಕಾಯ್ದುಕೊಂಡು ಮಾಸ್ಕ್ ಧರಿಸಿದಲ್ಲಿ ಸೋಂಕು ತಡೆಯಬಹುದು. 3ನೇ ಅಲೆಯ ನಂತರ ಕೋವಿಡ್ ನಿಯಮಾವಳಿಗಳನ್ನು ಗಾಳಿಗೆ ತೂರಿದ್ದಾರೆ. ಕೇಂದ್ರ ಸರ್ಕಾರ ಈಗಾಗಲೇ ನಾಲ್ಕನೇ ಅಲೆಯ ಬಗ್ಗೆ ಎಚ್ಚರಿಕೆ ನೀಡಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಕಠಿಣ ಕ್ರಮಗಳನ್ನು ಜರುಗಿಸಿದರೆ, ಈ ಹಿಂದೆ ಆದ ಕಹಿ ಅನುಭವಗಳನ್ನು ಮರುಕಳಿಸದಂತೆ ನೋಡಿಕೊಳ್ಳಬಹುದು.

ಈಗಲೇ ಕಠಿಣ ನಿಯಮಾವಳಿಗಳ ಜಾರಿ ಅಗತ್ಯವಿಲ್ಲ. ಆದರೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು. ಕೋವಿಡ್ ಟೆಸ್ಟ್‌ಗಳನ್ನು ಹೆಚ್ಚಿಸುವಂತೆಯೂ ಸಮಿತಿ ಸಲಹೆ ಮಾಡಿದೆ. ಬೂಸ್ಟರ್ ಡೋಸ್ ಯಾರು ಪಡೆದಿಲ್ಲವೋ ಅಂತಹವರಿಗೆ ಲಸಿಕೆ ಕೊಡುವುದು ಅವಶ್ಯವಿದೆ. ಮಕ್ಕಳಿಗೆ ಲಸಿಕೆ ಕಾರ್ಯವನ್ನು (3ನೇ ಪುಟಕ್ಕೆ)

### ಕೊರೊನಾ ಏರಿಕೆ ಕಳವಳಕಾರಿಯಲ್ಲ

ನವದೆಹಲಿ, ಜೂ. 13 – ಮುಂಬೈ ಹಾಗೂ ಮಹಾರಾಷ್ಟ್ರದ ಇತರೆ ಭಾಗಗಳಲ್ಲಿ ದಾಖಲಾಗುತ್ತಿರುವ ಕೊರೊನಾ ಸೋಂಕಿತರಲ್ಲಿ ಲಘು ಲಕ್ಷಣಗಳು ಮಾತ್ರ ಕಂಡು ಬಂದಿವೆ. ಸಾವಿನ ಪ್ರಮಾಣ ಬಹಳ ಕಡಿಮೆ ಇದೆ ಹಾಗೂ ಯಾವುದೇ ಹೊಸ ಕಳವಳದ ರೂಪಾಂತರಿ ಕಂಡು ಬಂದಿಲ್ಲ ಎಂದು ಆರೋಗ್ಯ ತಜ್ಞರು ತಿಳಿಸಿದ್ದಾರೆ.

ಮೊದಲ ಹಾಗೂ ಎರಡನೇ ಅಲೆಯಲ್ಲಿ ರೋಗಿಗಳಿಗೆ ರೆಮ್ಡಿಸಿವಿರ್ ನೀಡಲಾಗಿತ್ತು. ಈ ಬಾರಿ ಪ್ಯಾರಾಸೆಟಮಾಲ್ ನೀಡಲಾಗುತ್ತಿದೆ ಎಂದು ತಜ್ಞರು ಹೇಳಿದ್ದಾರೆ. ಆರೋಗ್ಯ ಇಲಾಖೆಯ ಮಾಹಿತಿಯ ಪ್ರಕಾರ ಮೇ ತಿಂಗಳಲ್ಲಿ (3ನೇ ಪುಟಕ್ಕೆ)

### ಜಿಲ್ಲೆಯಲ್ಲಿ ಮಾಸ್ಕ್ ಕಡ್ಡಾಯ

ದಾವಣಗೆರೆ, ಜೂ.13- ರಾಜ್ಯದಲ್ಲಿ ಕಳೆದ 10 ದಿನಗಳಿಂದ ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆ ನಿಧಾನಗತಿಯ ಏರಿಕೆ ಗಮನಿಸಿ ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.



ಸಾರ್ವಜನಿಕ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದೆ. ಶಾಪಿಂಗ್ ಮಾಲ್‌ಗಳು, ರೆಸ್ಟೋರೆಂಟ್‌ಗಳು, ಪಬ್‌ಗಳು, ಕೆಫೆಟೇರಿಯಾ ಅಥವಾ ಹೋಟೆಲ್‌ಗಳು, ಶೈಕ್ಷಣಿಕ ಸಂಸ್ಥೆಗಳು, ಹಾಸ್ಟೆಲ್‌ಗಳು, ಕಚೇರಿಗಳು, ಕಾರ್ಖಾನೆ ಇತ್ಯಾದಿ ಪ್ರದೇಶಗಳಲ್ಲಿ ಸಿಬ್ಬಂದಿಗಳು ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸುವುದು ಹಾಗೂ ಮಾಸ್ಕ್ ಧರಿಸಿ ಬರುವವರಿಗೆ ಮಾತ್ರವೇ ಪ್ರವೇಶ ನೀಡುವುದನ್ನು (2ನೇ ಪುಟಕ್ಕೆ)

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಅಕ್ರಮ

## ರಾಹುಲ್ ವಿಚಾರಣೆ ನಡೆಸಿದ ಇ.ಡಿ.



ನವದೆಹಲಿ, ಜೂ. 13 – ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಪ್ರಶ್ನೆಗೆ ಒಳಪಡಿಸಿದೆ. ಪಕ್ಷದ ನಾಯಕರು ಹಾಗೂ ಬೆಂಬಲಿಗರ ಜೊತೆಗೆ ರಾಹುಲ್ ವಿಚಾರಣೆಗಾಗಿ ಜಾರಿ ನಿರ್ದೇಶನಾಲಯದ ಕೇಂದ್ರ ಕಚೇರಿಗೆ ಬಂದಿದ್ದರು.

ಬೆಳಿಗ್ಗೆ 11.10ರ ಸಮಯದಲ್ಲಿ ರಾಹುಲ್ ಗಾಂಧಿ ವಿಚಾರಣೆಗೆ ಹಾಜರಾದರು. 20 ನಿಮಿಷಗಳ ಕಾಲ ಅವರನ್ನು ಪ್ರಶ್ನಿಸಲಾಯಿತು. ನಂತರ ಅವರು ಕೆಲ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದರು.

ಮಧ್ಯಾಹ್ನ 2.10ರ ಸಮಯದಲ್ಲಿ ಅವರ ಊಟಕ್ಕೆ ಅವಕಾಶ ನೀಡಲಾಯಿತು. ಮಧ್ಯಾಹ್ನ 3.30ಕ್ಕೆ ವಿಚಾರಣೆಗೆ (2ನೇ ಪುಟಕ್ಕೆ)

### ಮೋದಿ ಸರ್ಕಾರದಿಂದ ಪ್ರಜಾಪ್ರಭುತ್ವ ದಮನ: ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ, ಜೂ. 13 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜಾರಿ ನಿರ್ದೇಶನಾಲಯದ ಎದುರು ವಿಚಾರಣೆಗೆ ಹಾಜರಾದ ದಿನದಂದು ಪಕ್ಷದ ಹಿರಿಯ ನಾಯಕರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಕೇಂದ್ರದ ಮೋದಿ ಸರ್ಕಾರ ಪ್ರಜಾಪ್ರಭುತ್ವವನ್ನು ದಮನಗೊಳಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ರಾಜಧಾನಿ ದೆಹಲಿಯಲ್ಲಿ ಪಕ್ಷದ ಹಿರಿಯ ನಾಯಕರು ನಿಷೇಧಾಜ್ಞೆ ಉಲ್ಲಂಘಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಇತರೆ ನಗರಗಳಲ್ಲಿರುವ ಜಾರಿ ನಿರ್ದೇಶನಾಲಯದ ಕಚೇರಿಗಳ ಎದುರೂ ಪ್ರತಿಭಟನೆ ನಡೆಸಲಾಗಿದೆ.

ಶಾಂತಿಯುತ ಪ್ರತಿಭಟನೆಗೆ ಸರ್ಕಾರ ಅವಕಾಶ ನೀಡಿಲ್ಲ ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕರು, ಕೆಲವರನ್ನು ಪೊಲೀಸರು ಎಳೆದಾಡಿದ್ದಾರೆ ಎಂದು ದೂರಿದ್ದಾರೆ.

ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಛತ್ತೀಸ್‌ಘಡದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್, ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸುರ್ಜೇವಾಲಾ, ಕೆ.ಸಿ. ವೇಣುಗೋಪಾಲ್, ಅಧೀರ್ ರಂಜನ್ ಚೌಧರಿ, ದಿಗ್ವಿಜಯ್ ಸಿಂಗ್, ಮುಕುಲ್ ವಾಸ್ನಿಕ್, ಜೈರಾಮ್ ರಮೇಶ್ ಮತ್ತಿತರರನ್ನು ಪೊಲೀಸರು ಬಂಧಿಸಿದ್ದಾರೆ. ಬಿಜೆಪಿ ಸರ್ಕಾರ ತನಿಖಾ ಸಂಸ್ಥೆಗಳನ್ನು (2ನೇ ಪುಟಕ್ಕೆ)

### ಗಾಂಧಿ ಕುಟುಂಬದ ಆಸ್ತಿ ಉಳಿಸಲು ಕಾಂಗ್ರೆಸ್ ಹೋರಾಟ: ಬಿಜೆಪಿ ತರಾಟೆ

ನವದೆಹಲಿ, ಜೂ. 13 – ಜಾರಿ ನಿರ್ದೇಶನಾಲಯದ ಮೇಲೆ ಒತ್ತಡ ಹೇರುವ ಸಲುವಾಗಿ ಕಾಂಗ್ರೆಸ್ ಬಲ ಪ್ರದರ್ಶನ ಮಾಡುತ್ತಿದೆ. ಭ್ರಷ್ಟಾಚಾರಕ್ಕೆ ಬೆಂಬಲಿಸಲು ಹಾಗೂ ಗಾಂಧಿ ಕುಟುಂಬದ 2,000 ಕೋಟಿ ರೂ.ಗಳ ಆಸ್ತಿಯನ್ನು ಉಳಿಸಲು ಬೀದಿಗಿಳಿದು ಹೋರಾಟ ನಡೆಸಲಾಗುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ರಾಹುಲ್ ಗಾಂಧಿ ಸೇರಿದಂತೆ ಯಾರೂ ಕಾನೂನಿಗೆ ಹೊರತಾಗಿಲ್ಲ. ತನಿಖಾ ಸಂಸ್ಥೆಯನ್ನು ಒತ್ತೆಯಾಳಾಗಿಸಲು ಯಾವುದೇ ರಾಜಕೀಯ ಕುಟುಂಬ ಈ ರೀತಿಯ ಪ್ರಯತ್ನ ಹಿಂದೆಂದೂ ನಡೆಸಿರಲಿಲ್ಲ. ಅಕ್ರಮವಾಗಿ ಗಳಿಸಿದ ಹಣ ರಕ್ಷಿಸಲು ಈ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಕೇಂದ್ರ ಸಚಿವೆ ಹಾಗೂ ಬಿಜೆಪಿ ನಾಯಕಿ ಸ್ಮೃತಿ ಇರಾನಿ ಆರೋಪಿಸಿದ್ದಾರೆ.

ಜಾರಿ ನಿರ್ದೇಶನಾಲಯ ರಾಹುಲ್ ಗಾಂಧಿ ಅವರಿಗೆ ಸಮನ್ಸ್ ಕಳಿಸಿದ್ದನ್ನು ಪ್ರತಿಭಟಿಸಲು ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ಪಕ್ಷದ ನಾಯಕರಾದ ಪ್ರಿಯಾಂಕಾ ಗಾಂಧಿ ವಾದ್ರ, ರಣದೀಪ್ ಸುರ್ಜೇವಾಲ, ಕೆ.ಸಿ. ವೇಣುಗೋಪಾಲ್ ಹಾಗೂ ಅಧೀರ್ ರಂಜನ್ ಚೌಧರಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಮುಖ್ಯಮಂತ್ರಿಗಳಾದ ಅಶೋಕ್ ಗೆಹ್ಲೋಟ್ ಹಾಗೂ ಭೂಪೇಶ್ (2ನೇ ಪುಟಕ್ಕೆ)

## ಕಟ್ಟಡ ನಿಧಿಗಾಗಿ ಅನರ್ಹರ ಹೆಚ್ಚಳ

### ವರ್ಷದಲ್ಲಿ ಸಲ್ಲಿಕೆಯಾಗಿದ್ದ 13, 349 ಅರ್ಜಿಗಳ ಪೈಕಿ 6,869 ತಿರಸ್ಕೃತ


ಸಂಗ್ರಹ ಚಿತ್ರ

ದಾವಣಗೆರೆ, ಜೂ. 13 – ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಗೆ ಅನರ್ಹರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಯಾಗುವ ಹಾಗೂ ಸೌಲಭ್ಯಗಳನ್ನು ಪಡೆಯಲು ಯತ್ನಿಸುವ ಪ್ರವೃತ್ತಿ ಹೆಚ್ಚಾಗಿದೆ.

ಕೊರೊನಾ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರಿಗೆ ಹಣಕಾಸು ಹಾಗೂ ಕಿಟ್‌ಗಳ ನೆರವು ನೀಡಲಾಗಿತ್ತು. ಇದನ್ನು ನೋಡಿ ಕಟ್ಟಡ ಕಾರ್ಮಿಕರಲ್ಲದವರೂ ಸಹ ನೋಂದಣಿಯಾಗುವ ಪ್ರವೃತ್ತಿ ಹೆಚ್ಚಾಗಿದೆ.

ಕಳೆದ ಮಾರ್ಚ್ 31ಕ್ಕೆ ಅಂತ್ಯವಾದ ವರ್ಷದಲ್ಲಿ ಮಂಡಳಿಯಿಂದ ನೆರವು ಪಡೆಯಲು 13,349 ಜನರು ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಗಳಲ್ಲಿ 6,869 ತಿರಸ್ಕೃತಗೊಂಡಿವೆ.

ಕಟ್ಟಡ ಕಾರ್ಮಿಕರಲ್ಲದೇ ಇತರೆ ವೃತ್ತಿಯಲ್ಲಿರುವವರು ನೆರವಿಗಾಗಿ ಕ್ಲೇಮುಗಳನ್ನು ಸಲ್ಲಿಸುತ್ತಿದ್ದಾರೆ. ಇಂತಹ ಪ್ರಕರಣಗಳನ್ನು ಪರಿಶೀಲಿಸಿ ತಿರಸ್ಕರಿಸಲಾಗುತ್ತಿದೆ ಎಂದು ದಾವಣಗೆರೆ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ತಿಳಿಸಿದ್ದಾರೆ.

ಕಾರ್ಮಿಕ ಇನ್ಸ್‌ಪೆಕ್ಟರ್, ಪಿಡಿಒ, ಕಾರ್ಮಿಕ ಸಂಘಟನೆ ಇಲ್ಲವೇ ಕಟ್ಟಡ ನಿರ್ಮಾಣದ ಗುತ್ತಿಗೆದಾರರ ಮೂಲಕ ಕಟ್ಟಡ ಕಾರ್ಮಿಕರಾಗಿ ನೋಂದಣಿಯಾಗಲು ಅವಕಾಶ ಕಲ್ಪಿಸಲಾಗಿದೆ. ಕೆಲ ಸಂಘಟನೆಗಳು ಹಾಗೂ ಗುತ್ತಿಗೆದಾರರು ಈ ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿರುವುದರಿಂದ ಅನರ್ಹರು ನೋಂದಣಿಯಾಗುತ್ತಿದ್ದಾರೆ ಎಂದಿದ್ದಾರೆ.

ನೆರವಿಗಾಗಿ (3ನೇ ಪುಟಕ್ಕೆ)

**ಕೊರೊನಾ ಕಾಲದಲ್ಲಿ ಹಣಕಾಸು ನೆರವು ನೀಡಿದ ನಂತರ ನೋಂದಣಿ ಎರಡು ಪಟ್ಟು ಹೆಚ್ಚಳ**

**ಕೆಲ ಕಾರ್ಮಿಕ ಸಂಘಟನೆಗಳು ಹಾಗೂ ಗುತ್ತಿಗೆದಾರರ ಕಡೆಯಿಂದ ಹೆಚ್ಚಿದ ಸಮಸ್ಯೆ**

### ಶ್ರಮಕ್ಕೆ ಒಲವು, ಮಾನ್‌ಧನ್‌ಗೆ ನಿರಾಸಕ್ತಿ

ದಾವಣಗೆರೆ, ಜೂ. 13 - ಇ-ಶ್ರಮ ವೆಬ್ ತಾಣದಲ್ಲಿ ಅಸಂಘಟಿತ ಕಾರ್ಮಿಕರು ನೋಂದಣಿ ಮಾಡಿಸಿಕೊಳ್ಳಲು ಜಿಲ್ಲೆಯಲ್ಲಿ ಹೆಚ್ಚಿನ ಆಸಕ್ತಿ ಕಂಡು ಬಂದಿದೆ. ಇದುವರೆಗೂ ಇ-ಶ್ರಮ 2.26 ಲಕ್ಷ ಜನರು ನೋಂದಾಯಿಸಿಕೊಂಡಿದ್ದಾರೆ.

ಮತ್ತೊಂದೆಡೆ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಗೆ ಸೇರ್ಪಡೆಯಾಗಲು ಹೆಚ್ಚಿನ ಉತ್ಸಾಹ ಕಂಡು ಬರುತ್ತಿಲ್ಲ. ಜಿಲ್ಲೆಯಲ್ಲಿ ಇದುವರೆಗೂ ಕೇವಲ 3,167 ಜನ ಮಾತ್ರ ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ. ಈ ಯೋಜನೆಗೆ ಸೇರ್ಪಡೆಯಾಗಲು ಬಯಸುವ 18ರಿಂದ 40 ವರ್ಷದ ವ್ಯಕ್ತಿಗಳು ತಿಂಗಳಿಗೆ 55 ರಿಂದ 200 ರೂ.ಗಳವರೆಗೆ ಪಾವತಿಸಬೇಕಿದೆ. 60 ವರ್ಷದ ನಂತರ ಇವರಿಗೆ 3,000 ರೂ.ಗಳ ಪಿಂಚಣಿ ದೊರೆಯುತ್ತದೆ. ಸರ್ಕಾರ ಈಗಾಗಲೇ ವೃದ್ಧಾಪ್ಯ ವೇತನ ಕೊಡುತ್ತಿದೆ. ಹೀಗಿರುವಾಗ ನಾವೇಕೆ ಹಣ ಕೊಡಬೇಕು ಎಂಬ ಧೋರಣೆ ಸಾಕಷ್ಟು ಜನರಲ್ಲಿದೆ. ಇ-ಶ್ರಮ ನೋಂದಣಿ ಉಚಿತವಾಗಿರುವ ಕಾರಣ ಹೆಚ್ಚಿನ ಜನರು ನೋಂದಾಯಿಸಿಕೊಳ್ಳುತ್ತಿದ್ದಾರೆ. ಅಸಂಘಟಿತ ಕಾರ್ಮಿಕರ ವಿವರ ಸಂಗ್ರಹಿಸಲು ಹಾಗೂ ಅವರಿಗೆ ಸೌಲಭ್ಯಗಳನ್ನು ಕಲ್ಪಿಸಲು ನೋಂದಣಿ ನೆರವಾಗುತ್ತದೆ ಎಂದು ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ತಿಳಿಸಿದ್ದಾರೆ.

## ಪರಿಸರದ ಜೊತೆ ಮನಸ್ಸೂ ಸ್ವಚ್ಛವಾಗಿರಬೇಕು

### ಹರಿಹರ ತುಂಗಭದ್ರಾ ನದಿ ದಂಡೆ ಸ್ವಚ್ಛತಾ ಕಾರ್ಯಕ್ರಮದಲ್ಲಿ ಚಿತ್ರ ನಟ ಮಾಸ್ಟರ್ ಆನಂದ್



ಹರಿಹರ, ಜೂ.13- ಪರಿಸರ ಸ್ವಚ್ಛತೆ, ನದಿ ಸ್ವಚ್ಛತೆ, ದೇವಾಲಯ ಸ್ವಚ್ಛತೆ ಜೊತೆಗೆ ಮನುಷ್ಯನ ಮನಸ್ಸು ಕೂಡ ಸ್ವಚ್ಛತೆಯಿಂದ ಇದ್ದರೆ ಮಾತ್ರ ಸಮಾಜಕ್ಕೆ ಉತ್ತಮವಾದ ಕೊಡುಗೆ ನೀಡುವುದಕ್ಕೆ ಸಾಧ್ಯವಿದೆ ಎಂದು ಚಲನಚಿತ್ರ ನಟ ಮಾಸ್ಟರ್ ಆನಂದ್ ಅಭಿಪ್ರಾಯಪಟ್ಟರು.

ನಗರದ ಬಿಜೆಪಿ ಮುಖಂಡ ಚಂದ್ರಶೇಖರ್ ಅಭಿಮಾನಿಗಳ ಬಳಗ ಮತ್ತು ಬೆಂಗಳೂರಿನ ಗ್ರೀನ್ ಗೆಳೆಯರ ಬಳಗದ ವತಿಯಿಂದ ತುಂಗಭದ್ರಾ ನದಿ ದಂಡೆ, ಶ್ರೀ ರಾಘವೇಂದ್ರ ಸ್ವಾಮಿ ಮಠ, ಶ್ರೀ ಹರಿಹರೇಶ್ವರ ದೇವಾಲಯದ ಆವರಣದಲ್ಲಿ ಸ್ವಚ್ಛತಾ ಕಾರ್ಯ ಮಾಡಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ವಿನಯ್ ಗುರೂಜಿ ಅವರ ಕಾಯಕಲ್ಪವನ್ನು ಸಾಕಾರಗೊಳಿಸಲು ಗ್ರೀನ್ ಗೆಳೆಯರ ಬಳಗ ಚಿಂತನೆ ನಡೆಸಿ, ಅದಕ್ಕೆ ಪೂರಕವಾಗಿ ಏನೆಲ್ಲಾ ಕಾರ್ಯಕ್ರಮವನ್ನು ಮಾಡಬೇಕು ಎಂದು ವಿಜಯ ರಾಘವೇಂದ್ರ, ಸೇರಿದಂತೆ, ಅನೇಕ ಹಿರಿಯರ ಜೊತೆಗೆ ಸಮಾಲೋಚನೆ ನಡೆಸಿ ನದಿ ದಂಡೆ, ದೇವಾಲಯದ ಆವರಣ, ಜೊತೆಗೆ ಪರಿಸರದ ಸ್ವಚ್ಛತೆಗೆ ಮುಂದಾಗಿದ್ದು, ಆ ನಿಟ್ಟಿನಲ್ಲಿ ಪ್ರಥಮವಾಗಿ ಹರಿಹರ ನಗರದಿಂದ ಆರಂಭ ಮಾಡಲಾಗಿದೆ ಎಂದು ತಿಳಿಸಿದರು.

ನಾವು ಸಮಾಜದಲ್ಲಿ ಉತ್ತಮವಾಗಿ ಜೀವನ ನಡೆಸಲು ನಮ್ಮ ಸುತ್ತಮುತ್ತಲಿನ ನದಿ, ದೇವಾಲಯ, ಪರಿಸರ ಸೇರಿದಂತೆ, ಇತರೆ ಪ್ರದೇಶಗಳು ಸ್ವಚ್ಛತೆಯಿಂದ ಇದ್ದರೆ ನಮ್ಮ ಮನಸ್ಸಿನ ಭಾವನೆಗಳು ಭಾವನಾತ್ಮಕವಾಗಿರುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಬಳಗದ ವತಿಯಿಂದ ಸಮಾಜದಲ್ಲಿನ ಗೋ ಶಾಲೆ, ವೃದ್ಧರಿಗೆ ಸಹಕಾರ, ಲಯನ್ಸ್ ತಂಡದವರಿಗೆ ಸಹಕಾರದ ಜೊತೆಗೆ ಯಾರು ಸಮಾಜಕ್ಕೆ ಒಳ್ಳೆಯ ಕೆಲಸವನ್ನು ಮಾಡುತ್ತಾರೋ ಅವರ ಬೆಂಬಲವಾಗಿ ನಿಂತು ಅವರ ಜೊತೆಗೆ ಕೈ ಜೋಡಿಸುವ ಕೆಲಸವನ್ನು ನಮ್ಮ ಗ್ರೀನ್ ಗೆಳೆಯರ ಬಳಗದ ವತಿಯಿಂದ ಮಾಡಲಾಗುತ್ತದೆ ಎಂದು ಆನಂದ್ ಹೇಳಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಗ್ರೀನ್ ಗೆಳೆಯರ ಬಳಗದ ಮಾಸ್ಟರ್ ಆನಂದ್ ನೇತೃತ್ವದ ತಂಡವು ಪರಿಸರ ಸ್ವಚ್ಛತಾ ಕಾರ್ಯ ಮಾಡುವುದಕ್ಕೆ ಮುಂದಾಗಿರುವುದು ಉತ್ತಮ ಕೆಲಸವಾಗಿದೆ. ಬನ್ನಿಕೋಡು ಗ್ರಾಮದ ಜಮೀನುಗಳಿಗೆ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ಆಲಿಸಲು ಮುಂದಾಗಿರುವುದು, ಮಲೇಬೆನ್ನೂರಿನ ಶ್ರೀ ರಂಗನಾಥ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಅಲ್ಲಿನ ಪರಿಸರ ಸ್ವಚ್ಛತೆ ಕಾರ್ಯ ಮಾಡುವುದಕ್ಕೆ ಮುಂದಾಗಿರುವುದು ಒಳ್ಳೆಯ ಕೆಲಸವಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ (3ನೇ ಪುಟಕ್ಕೆ)

## ವಿದ್ಯಾರ್ಥಿನಿಯರೊಂದಿಗೆ ವಿಕ್ರಮ್ ಸ್ಟೆಪ್ಸ್

### ಅಪ್ಪನ ಮೇಲೆ ತೋರಿದ ಪ್ರೀತಿ ನನ್ನ ಮೇಲೂ ಇರಲಿ : ವಿಕ್ರಮ್




ದಾವಣಗೆರೆ, ಜು.13- ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ದ್ವಿತೀಯ ಪುತ್ರ ವಿಕ್ರಮ್ ರವಿಚಂದ್ರನ್ ನಾಯಕನಾಗಿ ನಟಿಸಿ ರುವ 'ತ್ರಿವಿಕ್ರಮ' ಚಿತ್ರವು ಇದೇ ದಿನಾಂಕ 24ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ.

ನಗರದ ನೂತನ ಕಾಲೇಜು ಆವರಣದಲ್ಲಿ ಇಂದು ಪತ್ರಿಕಾಗೋಷ್ಠಿಯನ್ನು ದ್ದೇಶಿಸಿ ಮಾತನಾಡಿದ ನಟ ವಿಕ್ರಮ್ ರವಿಚಂದ್ರನ್, ಇದು ತಮ್ಮ ಪ್ರಥಮ ಚಿತ್ರವಾಗಿದ್ದು, ತಂದೆ ರವಿಚಂದ್ರನ್ ಮೇಲೆ ತೋರಿಸಿದ್ದ ಪ್ರೀತಿಯಲ್ಲಿ ಶೇ.1ರಷ್ಟನ್ನಾದರೂ ನನ್ನ ಮೇಲೆ ತೋರಿಸಿ ಪ್ರೋತ್ಸಾಹಿಸುವಂತೆ ಕೇಳಿಕೊಂಡರು.

ಇದೊಂದು ಕೌಟುಂಬಿಕ ಚಿತ್ರವಾಗಿದೆ. ಮಧ್ಯಮ ವರ್ಗದ ಕುಟುಂಬದ ಹುಡುಗನೊಬ್ಬ ಆಸೆಯಲ್ಲಿಯೇ ಹುಟ್ಟಿ, ಆಸೆಯಲ್ಲಿಯೇ ಬದುಕಿ, ಸಾಯುವಂತಹ ಜರ್ನಿಯ ಕಥೆ ಇದಾಗಿದೆ. ದಾವಣಗೆರೆಯಲ್ಲಿ ನನಗೆ ಸಿಗುತ್ತಿರುವ ಪ್ರೋತ್ಸಾಹ, ಪ್ರೀತಿಯಿಂದಾಗಿ ಖುಷಿಯಾಗಿದೆ ಎಂದರು.

ನಿರ್ದೇಶಕ ಸಹನಾಮೂರ್ತಿ ಮಾತನಾಡಿ, ಸಿನಿಮಾದಲ್ಲಿ ವಿಕ್ರಮ್ ಅವರ ನಟನೆ ಅದ್ಭುತವಾಗಿದೆ. ಮಧ್ಯಮ ವರ್ಗದ ಹುಡುಗನಾಗಿ ವಿಕ್ರಮ್ ನೋಡುಗರ ಮೆಚ್ಚುಗೆಗೆ ಪಾತ್ರರಾಗಲಿದ್ದಾರೆ. ಮಿಡಲ್ ಕ್ಲಾಸ್ ಫ್ಯಾಮಿಲಿ ಹುಡುಗ, ಹೈ ಕ್ಲಾಸ್ ಫ್ಯಾಮಿಲಿ ಹುಡುಗಿಯ ಮಧ್ಯದ ಲವ್ ಸ್ಟೋರಿಯನ್ನು ಈ ಸಿನಿಮಾದಲ್ಲಿ ಹೇಳಲಿದ್ದೇವೆ. ಅರ್ಜುನ್ ಜನ್ಯ (2ನೇ ಪುಟಕ್ಕೆ)

# ದೊಡ್ಡಬಾತಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವೀರೇಶ್



ದಾವಣಗೆರೆ , ಜೂ.13 - ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಡಿ.ಆರ್. ವೀರೇಶ್ ಅವರು ಇಂದು ನಡೆದ ಚುನಾವಣೆ ಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜೆಸಿ ಬಿ ಹನುಮಂತಪ್ಪ ಅವರನ್ನು ಅವಿಶ್ವಾಸದ ಮೂಲಕ ಪದಚ್ಯುತಿ ಗೊಳಿಸಿದ್ದರಿಂದ ಅಧ್ಯಕ್ಷೆ ಸ್ಥಾನ ತೆರವಾಗಿತ್ತು. ಪಂಚಾಯತ್ ರಾಜ್ ಇಲಾಖೆಯ ಎಇಇ ಪುಟ್ಟಸ್ವಾಮಿ ಚುನಾವಣಾಧಿಕಾರಿಯಾಗಿದ್ದರು.

ಒಟ್ಟು 17 ಸದಸ್ಯರ ಪೈಕಿ 12 ಜನ ಸದಸ್ಯರು ಹಾಜರಿದ್ದು ಅವಿರೋಧ ಆಯ್ಕೆಗೆ ಸಹಕರಿಸಿದರು. ನೂತನ ಅಧ್ಯಕ್ಷರನ್ನು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ದೂಡಾ ಅಧ್ಯಕ್ಷ ಕೆ.ಎಂ. ವೀರೇಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಗದೀಶ್, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಮಹೇಶ್, ಶಾರದಾ ರಾಯ್ಕರ್, ಗ್ರಾ.ಪಂ. ಸದಸ್ಯರಾದ ಕೆ.ಜಿ ಶಿವಕುಮಾರ್, ಬಂಗಾರಮ್ಮ ರಾಜಪ್ಪ ಪುಷ್ಪಾವತಿ ಬಿ.ಜಿ. ರೇವಣಸಿದ್ದಪ್ಪ, ಪಿ.ಬಿ. ರಾಜು, ಕೆ.ಬಿ ಉಮೇಶ್ ಮಂಜಮ್ಮ ಉಮೇಶ್, ಗುತ್ತ್ಯಮ್ಮ ಸತ್ತೂರು, ವಿನುತಾ ವಿಜಯಮ್ಮ, ಲಕ್ಕಮ್ಮ ಪರಮೇಶ್ವರಪ್ಪ, ನಾಗರಾಜ್ ಎ.ಕೆ.ಹೊನ್ನಪ್ಪ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.

## ಎಲ್‌ಐಸಿ: ಎರಡನೇ ಮಹಾ ಪತನ

**(1ನೇ ಪುಟದಿಂದ)** ಅಂದು ನಿಗದಿಯಾಗಿದ್ದು ಷೇರು ಬೆಲೆ ಈಗ ಶೇ.28ರಷ್ಟು ಕುಸಿದಿದೆ.

ಈ ಕುಸಿತದಿಂದಾಗಿ ಎಲ್.ಐ.ಸಿ.ಯ ಮಾರುಕಟ್ಟೆ ಮೌಲ್ಯ 4.3 ಲಕ್ಷ ಕೋಟಿ ರೂ.ಗಳಿಗೆ ಕುಸಿದಂತಾಗಿದೆ. ಷೇರುಗಳನ್ನು ಮಾರುಕಟ್ಟೆಗೆ ಬಿಟ್ಟಾಗ ಕಂಪನಿ ಮೌಲ್ಯ 6 ಲಕ್ಷ ಕೋಟಿ ರೂ. ಎಂದು ಅಂದಾಜಿಸ ಲಾಗಿತ್ತು. ಷೇರು ಬೆಲೆ ಕುಸಿತದಿಂದಾಗಿ ಅದರ ಮಾರುಕಟ್ಟೆ ಮೌಲ್ಯ ಸೋಮವಾರದಂದು 4.3 ಲಕ್ಷ ಕೋಟಿ ರೂ.ಗಳಿಗೆ ಇಳಿದಿದೆ. ಎಲ್.ಐ.ಸಿ.ಯ ಮಾರುಕಟ್ಟೆ ಮೌಲ್ಯ 17 ಶತಕೋಟಿ ಡಾಲರ್ ಕುಸಿದಿರುವುದು ಏಷಿಯಾದಲ್ಲೇ ಅತಿ ದೊಡ್ಡ ಐ.ಪಿ.ಒ. ವೈಫಲ್ಯಗಳಲ್ಲಿ ಒಂದು ಎಂದು ಬ್ಲೂಮ್‌ಬರ್ಗ್ ವರದಿ ತಿಳಿಸಿದೆ.

ದಕ್ಷಿಣ ಕೊರಿಯಾದ ಎಲ್.ಜಿ. ಎನರ್ಜಿ ಸಲ್ಯೂಷನ್ ಲಿಮಿಟೆಡ್ ಕಂಪನಿ ಮಾತ್ರ ಈ ರೀತಿಯ ಪತನ ಕಂಡಿತ್ತು. ಐ.ಪಿ.ಒ. ನಂತರ ಅದರ ಮೌಲ್ಯ ಶೇ.30ಕ್ಕೂ ಹೆಚ್ಚು ಇಳಿಕೆಯಾಗಿತ್ತು ಎಂದು ಬ್ಲೂಮ್‌ಬರ್ಗ್ ಹೇಳಿದೆ.

ಏರುತ್ತಿರುವ ಬಡ್ಡಿ ದರ ಹಾಗೂ ಹಣದುಬ್ಬರಗಳ ಕಾರಣದಿಂದಾಗಿ ವಿಶ್ವದಾದ್ಯಂತ ಷೇರು ಮಾರುಕಟ್ಟೆ ಮೇಲೆ ಒತ್ತಡ ಬಿದ್ದಿದೆ. ಇದರ ಪರಿಣಾಮ ಭಾರತದಲ್ಲೂ ಕಂಡು ಬರುತ್ತಿದೆ.

## ಮಾಸ್ಕ್ ಕಡ್ಡಾಯ

**(1ನೇ ಪುಟದಿಂದ)** ಖಚಿತಪಡಿಸಿಕೊಳ್ಳುವುದು ಆಯಾ ಸಂಸ್ಥೆಯ ಮಾಲೀಕರ ಜವಾಬ್ದಾರಿಯಾಗಿದೆ.

ಸ್ವಂತ ವಾಹನಗಳು ಹಾಗೂ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ (ಬಸ್ ಹಾಗೂ ರೈಲು) ಪ್ರಯಾಣಿಸುವ ಸಂದರ್ಭದಲ್ಲಿ ಸಾರ್ವಜನಿಕರು ಮಾಸ್ಕ್ ಧರಿಸುವುದು ಕಡ್ಡಾಯ.

ಶೀತ, ಕೆಮ್ಮು, ಜ್ವರ ಇಂತಹ ಲಕ್ಷಣಗಳು ಇರುವ ಹೈರಿಸ್ಕ್ ಗುಂಪಿನವರು ತಕ್ಷಣ ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಪಡುವುದು ಹಾಗೂ ಫಲಿತಾಂಶ ಲಭ್ಯವಾಗುವವರೆಗೂ ಮನೆಯಲ್ಲಿಯೇ ಪ್ರತ್ಯೇಕವಾಗಿರುವುದು. ಅರ್ಹರು ಮುನ್ನೆಚ್ಚರಿಕೆ ಡೋಸ್ ಪಡೆಯುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

# ವಿಚಾರ ಸ್ವಾತಂತ್ರ್ಯವಿದ್ದಾಗ ಮಾತ್ರ ಸಾಧನೆ ಸಾಧ್ಯ

### ಹಡಗಲಿಯಲ್ಲಿನ ಅಭಿನಂದನಾ ಸಮಾರಂಭದಲ್ಲಿ ಅಮರೇಶ್ವರದ ಶ್ರೀ ಗಜದಂಡ ಸ್ವಾಮೀಜಿ



ಹೂವಿನಹಡಗಲಿ, ಜೂ.13- ಮನುಷ್ಯನ ಜೀವನದಲ್ಲಿ ಮೂವರು ಗುರುಗಳು ಬಂದು ಹೋಗುತ್ತಾರೆ. ಅಧ್ಯಾತ್ಮಿಕ ಗುರು, ತಂದೆ-ತಾಯಿ, ಶಿಕ್ಷಕರು.ವಿಚಾರ ಸ್ವಾತಂತ್ರ್ಯ ಯಾರಿಗಿದೆಯೋ ಅವರು ಸಾಧನೆ ಮಾಡುತ್ತಾರೆ, ತಾವು ಅಂದುಕೊಂಡ ಗುರಿಯನ್ನು ಮುಟ್ಟುತ್ತಾರೆ ಎಂದು ಅಮರೇಶ್ವರದ ಶ್ರೀ ಗಜದಂಡ ಮಹಾಸ್ವಾಮೀಜಿ ಹೇಳಿದರು.

ಇಲ್ಲಿನ ಗವಿಮಠದಲ್ಲಿ ಬಸೆಟ್ಟಿ ರಾಜಣ್ಣ ದಂಪತಿಯ ಪುತ್ರಿ ಬಸೆಟ್ಟಿ ಅಮೃತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪೂರ್ಣಾಂಕವನ್ನು ಪಡೆದಿರುವ ಹಿನ್ನೆಲೆಯಲ್ಲಿ ಮೊನ್ನೆ ಏರ್ಪಾಡಾಗಿದ್ದ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ತಂದೆ-ತಾಯಿ ಹೆಚ್ಚು ಓದದಿದ್ದರೂ ತಮ್ಮ ಮಕ್ಕಳು ಉನ್ನತ ವ್ಯಾಸಂಗವನ್ನು ಮಾಡಲಿ ಎಂಬ ಹಿನ್ನೆಲೆಯಲ್ಲಿ ತಮ್ಮ ಎಲ್ಲಾ ಮಕ್ಕಳನ್ನು ಉನ್ನತ ವಿದ್ಯಾಭ್ಯಾಸಕ್ಕೆ ಅಣಿಗೊಳಿಸುವುದು ವಿಶೇಷವಾಗಿದೆ. ಶ್ವೇತ ವಿಚಾರಗಳಿದ್ದರೆ ಯಾವುದೇ ವ್ಯಕ್ತಿಯಾಗಲೀ ತಮ್ಮ ಜೀವನದಲ್ಲಿ ಮುಂದೆ ಬರಲು ಸಾಧ್ಯ, ಒಬ್ಬ ವಿದ್ಯಾರ್ಥಿನಿ ಅಥವಾ ವಿದ್ಯಾರ್ಥಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತಂದಾಗ ಮಾತ್ರ ವಿದ್ಯಾದಾನ ಮಾಡಿದ ಗುರುಗಳಿಗೆ ಹೆಚ್ಚಿನ ಆತ್ಮತೃಪ್ತಿ ದೊರಕುತ್ತದೆ. ರಾಜ್ಯದಲ್ಲಿ ಹಲವು ಜನ ಅಮರೇಶ್ವರನ ಭಕ್ತರಿದ್ದಾರೆ ಶ್ರೀಮಠದಲ್ಲಿ ಮುಂಬರುವ ದಿನಗಳಲ್ಲಿ 2 ಅದ್ಭುತ ಕಾರ್ಯಕ್ರಮಗಳು ಜರುಗಲಿವೆ. ತಮ್ಮ ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡುವ ಅಗತ್ಯ ಇದೆ. ಹಾಗಾದಾಗ ಮಾತ್ರ ಅವರ ಜೀವನ ಪಾವನವಾಗುತ್ತದೆ. ತಾಳ್ಮೆ, ಸಂಯಮ, ಶಿಸ್ತು ಇದು ವಿದ್ಯಾರ್ಥಿಗಳ ಜೀವನದ ಪಾಠವಾಗಬೇಕೆಂದು ಶ್ರೀಗಳು ಕಿವಿಮಾತು ಹೇಳಿದರು.

ಸ್ಥಳೀಯ ಗವಿಮಠದ ಡಾ. ಹಿರಿಶಾಂತವೀರ ಸ್ವಾಮೀಜಿ ಮಾತನಾಡಿ, ಪರೀಕ್ಷೆಯಲ್ಲಿ ಬಸೆಟ್ಟಿ ಅಮೃತ ಗಳಿಸಿದ ಅಂಕದಿಂದ ಇಡೀ ಹೂವಿನಹಡಗಲಿ ತಾಲ್ಲೂಕಿಗೆ ಕೀರ್ತಿ ಬಂದಿದೆ. ವಿದ್ಯಾರ್ಥಿಗಳ ಜೀವನದಲ್ಲಿ ವಿದ್ಯಾಭ್ಯಾಸ ಬಹಳ ಮುಖ್ಯವಾದ ಘಟ್ಟ, ಮಕ್ಕಳು ಉತ್ತಮವಾಗಿ ಅಭ್ಯಾಸ ಮಾಡಿ ಹೆಸರು ತರುವಂತಹ ಮಾರ್ಗದರ್ಶನವನ್ನು ಪಾಲಕರು ಕೊಡುತ್ತಲೇ ಇರಬೇಕು. ಮನುಷ್ಯನಲ್ಲಿ ತಾಳ್ಮೆ ಇರಬೇಕು. ತಾಳ್ಮೆಯ ಜತೆಗೆ ವಿನಯ ಮತ್ತು ಸಾಧಿಸುವ ಛಲ ಇದ್ದಾಗ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯವಾಗುತ್ತದೆ. ಜೊತೆಗೆ ಸೇವಾ ಮನೋಭಾವ ಬೆಳೆಸಿಕೊಂಡವರು ನಮ್ಮ ನಡುವೆ ಇರುತ್ತಾರೆ. ಅವರನ್ನು ನೋಡಿ ನಾವು ಕಲಿಯಬೇಕೇ ಹೊರತು, ಅವರನ್ನು ನೋಡಿ ನಾವು ಅಳೆಯಬಾರದು ಎಂದು ಹೇಳಿದರು.

ಶ್ರೀಗಳಿಂದ ಅಭಿನಂದನೆಗೆ ಪಾತ್ರರಾದ ಕು. ಬಸೆಟ್ಟಿ ಅಮೃತಾ ಮಾತನಾಡಿ, ನನಗೆ ಮುಂದೆ ಗುರಿ, ಹಿಂದೆ ಗುರು ಇದ್ದರು. ಹಾಗಾಗಿ ನಾನು ಜೀವನದಲ್ಲಿ ಸಾಧನೆ ಮಾಡಲು ಕಾರಣವಾಯಿತು. ಇದಕ್ಕೆ ಕಾರಣವಾದ ಎಲ್ಲರಿಗೂ ಧನ್ಯವಾದಗಳು ಎಂದು ಹೇಳಿದರು.

ಈ ವೇಳೆ ಬಿಜಾಪುರ ಜಿಲ್ಲೆ ಇಟಗಿ ಹಲ್ಲೇಗೆರೆ ಗ್ರಾಮದ ಶ್ರೀ ಶಿವಶಾಂತ ವೀರ ಸ್ವಾಮೀಜಿ ಹಾಗೂ ಹಡಗಲಿಯ ಮಲ್ಲನಕೆರೆ ಮಠದ ಶ್ರೀಗಳು ಆಶೀರ್ವಚನ ನೀಡಿದರು.

ಕಾರ್ಯಕ್ರಮಕ್ಕೂ ಮುಂಚೆ ಸ್ಥಳೀಯ ಖಜಾನೆ ಅಧಿಕಾರಿ ಪಟದಯ್ಯ ಅವರು 'ಇದೇ ನಮ್ಮ ನಾಡು ಚಲುವ ಕನ್ನಡ ನಾಡು ಕನ್ನಡ ನಾಡು' ಎಂಬ ಗೀತೆಯನ್ನು ಹಾಡಿ ರಂಜಿಸಿದರು.

ಮಾ. ಮಾ. ಪಾಟೀಲ್ ಶಾಲೆಯ ಮಕ್ಕಳು ಪ್ರಾರ್ಥನೆಗೈದರು. ನಂದೀಶ್ ಸ್ವಾಗತಿಸಿದರು. ಬಸೆಟ್ಟಿ ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಶೋಷಿತರ ರಕ್ಷಣೆಗಾಗಿ ಒಂದೇ ವೇದಿಕೆಯಲ್ಲಿ ಕೇಂದ್ರೀಕರಿಸಲು ಪ್ರತಿಜ್ಞಾ ದಿನ

ಹರಪನಹಳ್ಳಿ

ಹರಪನಹಳ್ಳಿ, ಜೂ. 13 - ದಲಿತ ಸಂಘರ್ಷ ಸಮಿತಿ ಯಾವುದೇ ಒಂದು ಜಾತಿಗೆ ಸೀಮಿತವಲ್ಲ. ಈ ಸಂಘಟನೆ ಎಲ್ಲಾ ಸಮುದಾಯದ ಶೋಷಿತ ಜನರ ರಕ್ಷಣೆಗಾಗಿ ಇರುವಂತದ್ದು ಎಂದು ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ವಿಜಯನಗರ ಜಿಲ್ಲಾ ಸಂಚಾಲಕ ಕೊಟಿಗನಾಳ್ ಮಲ್ಲಿಕಾರ್ಜುನ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪ್ರೊ. ಬಿ. ಕೃಷ್ಣಪ್ಪನವರ 85ನೇ ಜನ್ಮದಿನ ಶೋಷಿತರ ಪ್ರತಿಜ್ಞಾ ದಿನ ಅಂಗವಾಗಿ ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಂಬೇಡ್ಕರ್ ಸಂಘದ ತಾಲ್ಲೂಕು ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ ಮಾತನಾಡಿ, ದೇಶದೆಲ್ಲೆಡೆ ಭಾಷೆ, ಬಣ್ಣ, ಬಟ್ಟೆ, ಪಥ್ಯ, ಆಚಾರ-ವಿಚಾರ ಸೇರಿದಂತೆ ಆಹಾರ ಪದ್ಧತಿಯ ಆಯ್ಕೆಯ ವಿಚಾರದಲ್ಲೂ ಶ್ರೇಷ್ಠ ಹಾಗೂ ಕನಿಷ್ಠ ಎಂಬ ಜನ ವಿರೋಧಿ ಸಿದ್ಧಾಂತವು ಅತ್ಯಂತ ಅಪಾಯಕಾರಿ, ರಾಜಕೀಯ ಸ್ಥಿತ್ಯಂತರಗಳನ್ನು ಬುಡ ಸಮೇತ ಕಿತ್ತೆಸೆದು, ಬಾಬಾ ಸಾಹೇಬರ ಭಾರತದ ಕನಸು ನನಸು ಮಾಡುವ ನಿಟ್ಟಿನಲ್ಲಿ ಬಿಡಿ ಬಿಡಿಯಾಗಿರುವ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಒಂದು ಮಾಡುವ ನಿಟ್ಟಿನಲ್ಲಿ ನಾವು ನೀವೆಲ್ಲರೂ ಕೆಲಸ ಮಾಡಬೇಕಿದೆ. ಎಂದರು.



ವಕೀಲ ಪುಣಬಗಟ್ಟಿ ನಿಂಗಪ್ಪ ಮಾತನಾಡಿ, ಎಲ್ಲಾ ಸಮುದಾಯಗಳ ಶೋಷಿತರ ರಕ್ಷಣೆಗಾಗಿ ಒಂದೇ ವೇದಿಕೆಗೆ ಕೇಂದ್ರೀಕರಿಸುವ ಮೂಲಕ ನಮ್ಮ ಮುಂದಿನ ತಲೆಮಾರಿನ ಭವಿಷ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪ್ರೊ. ಬಿ. ಕೃಷ್ಣಪ್ಪನವರು 85ನೇ ಜನ್ಮ ದಿನದಂದು ಶೋಷಿತ ಸಮುದಾಯಗಳು ಒಂದೆಡೆ ಸೇರಿಕೊಂಡು ಇದೇ ದಿನಾಂಕ 18ರಂದು ಪ್ರತಿಜ್ಞಾ ದಿನವನ್ನಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ತಾಲ್ಲೂಕು ಅಂಬೇಡ್ಕರ್ ಸಂಘದ ಪ್ರಧಾನ ಕಾರ್ಯದರ್ಶಿ ಒ.ಮಾಂತೇಶ್ ಮಾತನಾಡಿದರು.

ದಲಿತ ಸಂಘರ್ಷ ಸಮಿತಿಯ ಮುಖಂಡರಾದ ಕೆ.ಡಿ. ಮರಿಯಪ್ಪ, ಪುಣಬಘಟ್ಟದ ವಕೀಲ ಎಸ್.ನಿಂಗಪ್ಪ, ಒ. ಮಹಾಂತೇಶ್, ಕುಂಚೂರು ಗ್ರಾ.ಪಂ.ಸದಸ್ಯ ಕುಂಚೂರು ಸಂಜೀವಪ್ಪ, ಪತ್ರಕರ್ತ ಗೌರಿಹಳ್ಳಿ ಮಂಜುನಾಥ, ಕಬ್ಬಳ್ಳಿ ಪರಸಪ್ಪ, ಹನುಮಂತರಾಜ್, ಪತ್ರಕರ್ತ ಹುಣಸಿಹಳ್ಳಿ ಕೊಟ್ರಪ್ಪ, ಪುಣಬಘಟ್ಟಿ ಗೋಣೆಪ್ಪ, ಗೌರಿಹಳ್ಳಿ ರಾಜ, ಶಾಸಪ್ಪ, ಕಬ್ಬಳ್ಳಿ ಬಸವರಾಜ್, ಕಾಮ್ರೇಡ್ ದ್ವಾರಕೀಶ್ ಸೇರಿದಂತೆ, ಇನ್ನು ಅನೇಕರು ಸಭೆಯಲ್ಲಿ ಹಾಜರಿದ್ದರು.

# 20ರಿಂದ ಎರಡು ದಿನ ಪ್ರಧಾನಿ ನರೇಂದ್ರ ಮೋದಿ ರಾಜ್ಯ ಪ್ರವಾಸ

ಬೆಂಗಳೂರು, ಜೂ. 13 - ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ಭೇಟಿ ಸಂದರ್ಭದಲ್ಲಿ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ದರ್ಶನ ಮತ್ತು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೆ, ಮೈಸೂರು ಅರಮನೆಯ ರಾಜವಂಶಸ್ಥರ ಜೊತೆ ಸ್ವಲ್ಪ ಸಮಯ ಕಾಲ ಕಳೆಯಲಿದ್ದಾರೆ.



ಇದೇ ದಿನಾಂಕ 20 ರಿಂದ ಎರಡು ದಿನ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿಯವರು ದಿನಾಂಕ 21 ರಂದು ಬೆಳಿಗ್ಗೆ 6.30 ರಿಂದ 7.45 ರವರೆಗೆ ಅರಮನೆ ಆವರಣದಲ್ಲಿ ನಡೆಯಲಿರುವ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ, 8.30 ರಿಂದ 9 ಗಂಟೆಯವರೆಗೂ ಅಂದರೆ 30 ನಿಮಿಷಗಳ ಕಾಲ ಅರ ಮನೆಯ ಕುಟುಂಬ ಸದಸ್ಯರೊಟ್ಟಿಗೆ ಕಾಲ ಕಳೆಯಲಿದ್ದಾರೆ. ನಂತರ ಕೇರಳದ ತಿರುವನಂತಪುರಕ್ಕೆ ವಿಶೇಷ ವಿಮಾನದಲ್ಲಿ ತೆರಳಲಿದ್ದಾರೆ.

ದಿನಾಂಕ 20 ರಂದು ನಗರಕ್ಕೆ ಧಾವಿಸುವ ಪ್ರಧಾನಿಯವರು ಅಂದು ಮಧ್ಯಾಹ್ನ ಬೆಂಗಳೂರು ಸಬರ್ಬನ್ ರೈಲ್ವೆ ಯೋಜನೆಗೆ ಶಿಲಾನ್ಯಾಸ ನೆರವೇರಿಸಿ ನಂತರ ಸಾರ್ವಜನಿಕರನ್ನುದ್ದೇಶಿ ಮಾತನಾಡಲಿದ್ದಾರೆ. ತದನಂತರ ಡಾ ಅಂಬೇಡ್ಕರ್ ಸ್ಕೂಲ್ ಆಫ್ ಎಕಾಮಿಕ್ಸ್‌ನ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಜೆ ವಿಶೇಷ ಹೆಲಿಕ್ಯಾಪ್ಟರ್‌ನಲ್ಲಿ ಮೈಸೂರಿಗೆ ತೆರಳಲಿದ್ದು, ಅಂದು ಸುತ್ತೂರು ಮಠದ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಂತರ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ದರ್ಶನ ಪಡೆಯಲಿದ್ದಾರೆ.

## ಯುವ ಬ್ರಿಗೇಡ್ ಉಚಿತ ನೇತ್ರ ಪರೀಕ್ಷೆ



ಮಲೇಬೆನ್ನೂರು

ಮಲೇಬೆನ್ನೂರು, ಜೂ. 13 - ಕೆ. ಎನ್. ಹಳ್ಳಿ ಗ್ರಾಮದಲ್ಲಿ ನಂದಿಗಾವಿ ಶ್ರೀನಿವಾಸ್ ಯುವ ಬ್ರಿಗೇಡ್ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ನೇತ್ರ ಪರೀಕ್ಷೆ ಮತ್ತು ಬಿಪಿ ಹಾಗೂ ಶುಗರ್ ಟೆಸ್ಟ್ ಶಿಬಿರವನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷ ಬಸವರಾಜ್ ಉದ್ಘಾಟಿಸಿದರು.

ಗ್ರಾ ಪಂ ಸದಸ್ಯ ಹುಸೇನ್ ಸಾಬ್, ಪಿಎಸಿಎಸ್ ಸಿಇಓ ನಿಟ್ಟೂರು ತಿಪ್ಪೇಶಿ, ಗ್ರಾಮಸ್ಥರಾದ ಶಿವರಾಜ್, ಷಣ್ಮುಖಪ್ಪ, ಮಹಾದೇವಪ್ಪ ಗುಂಡೇರ್, ರಾಜೇಂದ್ರ ಗುಂಡೇರ್, ಜಿ.ಲೋಕೇಶ್ ಮತ್ತು ಇತರರು ಭಾಗವಹಿಸಿದ್ದರು.

## ಮಲೇಬೆನ್ನೂರಿನ ರಾಜರಾಜೇಶ್ವರಿ ವಿದ್ಯಾಸಂಸ್ಥೆಯಲ್ಲಿ ಪರಿಸರ ದಿನಾಚರಣೆ



ಮಲೇಬೆನ್ನೂರು, ಜೂ. 13- ಪಟ್ಟಣದ ಜಿಗಳಿ ರಸ್ತೆಯ ಒಡೆಯರ ಬಸಾಪುರ ಗ್ರಾಪಂ ವ್ಯಾಪ್ತಿಯ ಪಟೇಲ್ ಬಸಪ್ಪ ಎಜುಕೇಶನ್ ಅಸೋಸಿಯೇಶನ್ ನ ರಾಜ ರಾಜೇಶ್ವರಿ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕೈ ಕುಂಚದಿಂದ ಪರಿಸರ ಸಂಬಂಧಿ ವೈವಿಧ್ಯಮಯ ಚಿತ್ರಗಳು ಅರಳಿದವು.

'ಸಹಸ್ರಾರು ಕೃತಕ ಆಮ್ಲಜನಕ ಸಿಲಿಂಡರ್‌ಗಳು ಸಹ ಒಂದು ಮರಕ್ಕೆ ಸಮವಾಗಲಾರವು' ಎಂಬ ಸಂದೇಶ ಸಾರುವ 10 ನೇ ತರಗತಿ ವಿದ್ಯಾರ್ಥಿ ಹೆಚ್.ಬಿ. ಮನೋಜ್ ಅವರ ಚಿತ್ರ ಹಾಗೂ 'ಭೂಮಿಯನ್ನು ರಕ್ಷಿಸಿ' ಎಂಬ ಕರೆ ನೀಡುವ ಎಂ.ಎಸ್. ರಮ್ಯಾ ಪೆನ್ಸಿಲ್ ನಿಂದ ರಚಿಸಲ್ಪಟ್ಟಿದ್ದ ಚಿತ್ರಗಳು ಎಲ್ಲರ ಗಮನ ಸೆಳೆದವು.

ಮುಖ್ಯೋಪಾಧ್ಯಾಯ ಎಸ್. ಶಶಿಧರ್ ಅವರು ಶಾಲಾ ಆವರಣದಲ್ಲಿ ಗಿಡ ನೆಟ್ಟು ಮಾತನಾಡಿ, ಹಸಿರೇ ಎಲ್ಲರ ಉಸಿರು. ಹಸಿರಿದ್ದರೆ ಮಾತ್ರ ನಮ್ಮ ಬದುಕು. ನಮ್ಮ ಆಜುಬಾಜಿನ ಖಾಲಿ ಪ್ರದೇಶದಲ್ಲಿ ಗಿಡ - ಮರ ಬೆಳೆಸಿ, ಪೋಷಿಸುವ ಮೂಲಕ ಪ್ರಕೃತಿಯೊಂದಿಗೆ ನಮ್ಮ ಜೀವನ ಸಾಗಿಸೋಣ ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಜಿ.ಬಿ. ಶಿವಾನಂದಪ್ಪ, ಪ್ರಾಂಶುಪಾಲರಾದ ಶ್ರೀಮತಿ ಸುಜಾತ ಶಿವಾನಂದಪ್ಪ, ಶಿಕ್ಷಕ ರವೀಂದ್ರ ಉಪಸ್ಥಿತರಿದ್ದರು.

# ಮಾಯಕೊಂಡದಲ್ಲಿ ಪೌಷ್ಠಿಕ ಆಹಾರ ಪುನಶ್ಚೇತನ ಕೇಂದ್ರದ ಉದ್ಘಾಟನೆ

ದಾವಣಗೆರೆ, ಜೂ.13- ಅಪೌಷ್ಠಿಕತೆ ಮಕ್ಕಳನ್ನು ಗುರುತಿಸಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ (ಮಕ್ಕಳ ಆರೋಗ್ಯ ಪುನಶ್ಚೇತನ ಕೇಂದ್ರ) ಕಳುಹಿಸಿಕೊಡ ಬೇಕು. ಇಲ್ಲಿ ಮಕ್ಕಳಿಗೆ ಜೀರ್ಣವಾಗು ವಂತಹ ಪೌಷ್ಠಿಕ ಆಹಾರವನ್ನು ಸಿದ್ಧಪಡಿಸಿ ಮಕ್ಕಳಿಗೆ ನೀಡಲಾಗುತ್ತದೆ ಎಂದು ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ಶಾಸಕ ಪ್ರೊ. ಲಿಂಗಣ್ಣ ಕರೆ ನೀಡಿದರು.

ತಾಲ್ಲೂಕಿನ ಮಾಯಕೊಂಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಕ್ಕಳ ಪೌಷ್ಠಿಕ ಆಹಾರ ಪುನಶ್ಚೇತನ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾಯಕೊಂಡ ಗ್ರಾಮದ ಸುತ್ತಮುತ್ತಲಿನ ಅಂಗನವಾಡಿ ಕೇಂದ್ರದವರು ಇದರಿಂದ ಅಪೌಷ್ಠಿಕತೆಯನ್ನು ಹೋಗಲಾಡಿಸಿ ಮಕ್ಕಳ ಉತ್ತಮ ಬೆಳಗವಣಿಗೆಗೆ ಸಹಕಾರವನ್ನು ನೀಡಬೇಕೆಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ನಾಗರಾಜ್ ಮಾತನಾಡಿ, ತಾಲ್ಲೂಕು ಕೇಂದ್ರದಲ್ಲಿ ಬಿಟ್ಟರೆ, ಮಾಯಕೊಂಡದಲ್ಲಿ ಪೌಷ್ಟಿಕ ಆಹಾರ ಪುನಶ್ಚೇತನ ಕೇಂದ್ರ ಆರಂಭವಾಗಿದೆ ಎಂದರು.



ಸದ್ಬಳಕೆಗೆ ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ ಕರೆ

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ವೆಂಕಟೇಶ್.ಎಲ್.ಡಿ. ಮಾತನಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರ ಮಾಯಕೊಂಡ ಸುತ್ತಮುತ್ತಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಾದ ಕೊಡಗೂರು, ನಲ್ಕುಂದ, ನೇರ್ಲಿಗೆ, ಹುಚ್ಚವ್ವನಹಳ್ಳಿ ಕೇಂದ್ರಗಳು ಸದುಪಯೋಗ ಪಡೆದುಕೊಳ್ಳಲು ಸೂಚಿಸಿದರು

ಕಾರ್ಯಕ್ರಮದಲ್ಲಿ ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ಆಡಳಿತ ವೈದ್ಯಾಧಿಕಾರಿ ಡಾ.ಗೋವಿಂದ್‌ರಾಜ್, ಪ್ರಾಥಮಿಕ ಆರೋಗ್ಯ ಕೇಂದ್ರ ಮಾಯಕೊಂಡ, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿಗಳು ಡಾ.ಸುರೇಶ್ ಬಾರ್ಕಿ, ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಹೊರಕೇರಿ.ಎಂ.ವಿ., ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಉಮಾಪತಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಾಯತ್ರಮ್ಮ ಇತರರು ಉಪಸ್ಥಿತರಿದ್ದರು.

## ಕಾಂಗ್ರೆಸ್ ಹೋರಾಟ: ಬಿಜೆಪಿ ತರಾಟೆ

**(1ನೇ ಪುಟದಿಂದ)** ಬಾಘೇಲ್ ಅವರೂ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಕಾಂಗ್ರೆಸ್‌ನ ಗಾಂಧಿ ಕುಟುಂಬದ ಭ್ರಷ್ಟಾಚಾರ ಸಿಕ್ಕಿ ಬಿದ್ದಿರುವ ಕಾರಣದಿಂದ ಪ್ರತಿಭಟನೆಗಾಗಿ ಆ ಪಕ್ಷದ ಹಿರಿಯ ನಾಯಕರನ್ನು ದೆಹಲಿಗೆ ಕರೆಸಲಾಗಿದೆ ಎಂದೂ ಇರಾನಿ ಹೇಳಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಪ್ರಕಟಿಸುತ್ತಿದ್ದ ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್‌ಗೆ ಸೇರಿದ 2,000 ಕೋಟಿ ರೂ.ಗಳಿಗೂ ಹೆಚ್ಚಿನ ಆಸ್ತಿಯನ್ನು ಕಬಳಿಸಲು ಗಾಂಧಿ ಕುಟುಂಬವು ಯಂಗ್ ಇಂಡಿಯನ್ ಆರಂಭಿಸಿತ್ತು ಎಂದು ಇರಾನಿ ಆರೋಪಿಸಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಆರಂಭಿಸಿದಾಗ 5 ಸಾವಿರಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರು ಅದರಲ್ಲಿ ಪಾಲು ಹೊಂದಿದ್ದರು. 2010ರಲ್ಲಿ ಯಂಗ್ ಇಂಡಿಯನ್ ಕಂಪನಿಯನ್ನು ದತ್ತಿ ಉದ್ದೇಶದಿಂದ ಆರಂಭಿಸಲಾಗಿತ್ತು. ಇದಾಗಿ ಆರು ವರ್ಷಗಳ ನಂತರವೂ ಯಾವುದೇ ದತ್ತಿ ಕಾರ್ಯ ಕೈಗೊಂಡಿರಲಿಲ್ಲ. ಇದು ಸಮಾಜದ ಬದಲು ಗಾಂಧಿ ಕುಟುಂಬಕ್ಕೆ ಸೇವೆ ಸಲ್ಲಿಸಿತ್ತು ಎಂದು ಇರಾನಿ ಹೇಳಿದ್ದಾರೆ.

ಕಾಂಗ್ರೆಸ್ ತನ್ನ ಹೋರಾಟವನ್ನು ಸತ್ಯಾಗ್ರಹ ಎಂದು ಕರೆದುಕೊಳ್ಳುತ್ತಿರುವುದಕ್ಕೆ ಲೇವಡಿ ಮಾಡಿರುವ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಆರ್ಥಿಕ ಭ್ರಷ್ಟಾಚಾರ ಮುಚ್ಚಲು ಕಾಂಗ್ರೆಸ್ ಪಕ್ಷ ಹಾಗೂ ರಾಹುಲ್ ಗಾಂಧಿ ಅವರು ಸತ್ಯಾಗ್ರಹದ ಅರ್ಥವನ್ನೇ ಬದಲಿಸುತ್ತಿದ್ದಾರೆ ಎಂದಿದ್ದಾರೆ.

ಆರ್ಥಿಕ ಅಪರಾಧಗಳ ತನಿಖೆ ನಡೆದಾಗ ಗುಂಪು ಸೇರಿಸಿಕೊಂಡು ತನಿಖಾ ಸಂಸ್ಥೆಯನ್ನು ಬೆದರಿಸಿ ಎಂದು ಕಾಂಗ್ರೆಸ್ ಪಕ್ಷ ಎಲ್ಲಾ ಆರ್ಥಿಕ ಅಪರಾಧಿಗಳಿಗೆ ಸೂಚನೆ ನೀಡುತ್ತಿರುವಂತಿದೆ ಎಂದೂ ಅವರು ಹೇಳಿದ್ದಾರೆ.

## ಪ್ರಜಾಪ್ರಭುತ್ವ ದಮನ: ಕಾಂಗ್ರೆಸ್ ಪ್ರತಿಭಟನೆ

**(1ನೇ ಪುಟದಿಂದ)** ದುರ್ಬಳಕೆ ಮಾಡಿಕೊಂಡು ಪ್ರತಿಪಕ್ಷಗಳ ನಾಯಕರ ಮೇಲೆ ಬಳಸುತ್ತಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕರು ಆರೋಪಿಸಿದ್ದಾರೆ.

ಮಹಾತ್ಮ ಗಾಂಧಿ ಅವರ ಸತ್ಯಾಗ್ರಹವನ್ನು ಪುನರಾರಂಭಿಸುತ್ತಿರುವುದಾಗಿ ಹೇಳಿರುವ ಕಾಂಗ್ರೆಸ್ ಪಕ್ಷ, ಮೋದಿ ಸರ್ಕಾರದ ವಿರುದ್ಧದ ಶಾಂತಿಯುತ ಪ್ರತಿಭಟನೆ ನಿಲ್ಲುವುದಿಲ್ಲ ಎಂದು ಹೇಳಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಉದ್ಧಟರಾಗಿದ್ದಾರೆ. ಅವರು ದೇಶದ ಜನರನ್ನು ಲೆಕ್ಕಿಸುತ್ತಿಲ್ಲ. ಧರ್ಮದ ಆಧಾರದ ಮೇಲೆ ಜನರನ್ನು ಒಡೆಯುತ್ತಿದ್ದಾರೆ ಎಂದು ಮುಖ್ಯಮಂತ್ರಿ ಗೆಹ್ಲೋಟ್ ಹೇಳಿದ್ದಾರೆ.

ಜೂನ್ 23ರಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಜಾರಿ ನಿರ್ದೇಶ ನಾಲಯದ ಎದುರು ಹಾಜರಾಗುವಾಗ ಇದೇ ರೀತಿಯ ಪ್ರತಿಭಟನೆ ನಡೆಸಲಾಗುವುದೇ ? ಎಂಬ ಪ್ರಶ್ನೆಗೆ ಉತ್ತರಿಸಿರುವ ಗೆಹ್ಲೋಟ್, ಪರಿಸ್ಥಿತಿಯನ್ನು ಎದುರಿಸಲು ಕಾಂಗ್ರೆಸ್ ಸಮರ್ಥವಾಗಿದೆ ಎಂದಿದ್ದಾರೆ.

|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ



ಶ್ರೀಮತಿ ಡಾ|| ರೂಪ ಮತ್ತು ಶ್ರೀ ಡಾ|| ಜ್ಯೋತಿಸ್ವರೂಪ್ ಇವರು ಮಾಡುವ ವಿಜ್ಞಾಪನೆಗಳು.

ಶ್ರೀಮತಿ ಬಿ.ಎಸ್. ಮಂಜುಳಾ

ನಮ್ಮ ಮಾತೃಶ್ರೀಯವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ "ಕೈಲಾಸ ಶಿವಗಣಾರಾಧನೆ"ಯನ್ನು ದಿನಾಂಕ : 14.06.2022ನೇ ಮಂಗಳವಾರ ಮಧ್ಯಾಹ್ನ : 1.30 ಗಂಟೆಗೆ ನೆರವೇರಿಸಲು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಸ್ಥಳ : ದಾವಣಗೆರೆ ಜಿಲ್ಲಾ ನಿವೃತ್ತ ನೌಕರರ ಸಂಘ, # 3308/9 12ನೇ ಮುಖ್ಯ ರಸ್ತೆ, ಎಂ.ಸಿ.ಸಿ. "ಬಿ" ಬ್ಲಾಕ್, ದಾವಣಗೆರೆ-577 004.

ಮೊ. : 97398 42975, 98441 90463

ಸದಾ ನಿಮ್ಮನೆನಪಿನಲ್ಲಿ : ಶ್ರೀಮತಿ ಡಾ|| ರೂಪ, ಶ್ರೀ ಡಾ|| ಜ್ಯೋತಿಸ್ವರೂಪ್ ಮತ್ತು ಭರಮಶೆಟ್ರು ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಆರನೇ ವರ್ಷದ ಪುಣ್ಯ ಸ್ಮರಣೆ



ಶ್ರೀಮತಿ ಜಿ. ಸುನಂದಮ್ಮ

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆ ಹಾಗೂ ನೆನಪಿನಲ್ಲಿರುವ,

ಪತಿ : ಪರಮೇಶ್ವರಪ್ಪ ತುಂಬಿಗಿ, ನಿವೃತ್ತ ವಾಲ್‌ಮ್ಯಾನ್ ಮಹಾನಗರ ಪಾಲಿಕೆ

ಮಕ್ಕಳಾದ : ಪಿ. ಅರ್ಚನ, ಪಿ. ಧನ್ಯಕುಮಾರಿ

ಕೆ.ಎನ್. ಚೇತನ್ ಶಿವರಾಜ್, ಕೆ.ಎಸ್. ನಟರಾಜ್

ತುಂಬಿಗಿ ವಂಶಸ್ಥರು ಹಾಗೂ ಸ್ನೇಹಿತರು

## ರಾಹುಲ್ ವಿಚಾರಣೆ ನಡೆಸಿದ ಇ.ಡಿ

**(1ನೇ ಪುಟದಿಂದ)** ಮರಳಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಸುತ್ತಿನ ವಿಚಾರಣೆಯಲ್ಲಿ ಅಕ್ರಮ ಹಣ ಕಾಯ್ದೆಯ ಸೆಕ್ಷನ್ 50ರ ಅಡಿಯಲ್ಲಿ ರಾಹುಲ್ ಗಾಂಧಿ ತಮ್ಮ ಹೇಳಿಕೆಯನ್ನು ಬರೆದುಕೊಟ್ಟಿದ್ದಾರೆ ಎನ್ನಲಾಗಿದೆ.

ಬೆಳಿಗ್ಗೆ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಕೇಂದ್ರ ಕಚೇರಿಯಿಂದ ಜಾರಿ ನಿರ್ದೇಶನಾಲಯ ಕಚೇರಿಗೆ ಹೊರಟಿದ್ದರು. ಅವರ ಜೊತೆ ಕಾಂಗ್ರೆಸ್ ನಾಯಕರಾದ ಪ್ರಿಯಾಂಕಾ ಗಾಂಧಿ ವಾದ್ರ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಛತ್ತೀಸ್‌ಘಡದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಹಾಗೂ ಮಾಜಿ ಕೇಂದ್ರ ಸಚಿವ ಪಿ. ಚಿದಂಬರಂ ಅವರಿದ್ದರು.

ಝಡ್ ಪ್ಲಸ್ ಭದ್ರತೆ ಹೊಂದಿರುವ ರಾಹುಲ್ ಗಾಂಧಿ ಅವರಿಗೆ ಸಿ.ಆರ್.ಪಿ.ಎಫ್. ಮೂಲಕ ರಕ್ಷಣೆ ನೀಡಲಾಗಿತ್ತು. ಭದ್ರತಾ ವಾಹನಗಳೂ ಸಹ ಈ ವೇಳೆ ಅವರ ಜೊತೆ ಸಾಗಿ ಬಂದವು.

ಜಾರಿ ನಿರ್ದೇಶನಾಲಯದ ಕಚೇರಿ ಸುತ್ತ 144 ನೇ ಸೆಕ್ಷನ್ ವಿಧಿಸಲಾಗಿತ್ತು. ಗಲಭೆ ವಿರೋಧಿ ಪಡೆಗಳನ್ನೂ ಸಹ ಪೊಲೀಸರು ನಿಯೋಜಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಪವನ್ ಬನ್ಸಾಲ್ ಅವರನ್ನು ಏಪ್ರಿಲ್ ತಿಂಗಳಲ್ಲಿ ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಿತ್ತು.

# ಪಾರದರ್ಶಕವಾಗಿ ಬಗರ್ ಹುಕ್ಕುಂ ಸಾಗುವಳಿ ಪತ್ರ ವಿತರಣೆ

ಹೊನ್ನಾಳಿ, ಜೂ.13- ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಬಗರ್ ಹುಕ್ಕುಂ ತಾಲ್ಲೂಕು ಸಮಿತಿ ಅಧ್ಯಕ್ಷರಾಗಿ ಆಯಾ ತಾಲ್ಲೂಕಿನ ಶಾಸಕರಿದ್ದಾರೆ. ಆದರೆ ನನ್ನ ಕ್ಷೇತ್ರವಾದ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳ ಅಧ್ಯಕ್ಷರನ್ನು ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ಬಗರ್ ಹುಕ್ಕುಂ ತಾಲ್ಲೂಕು ಅಧ್ಯಕ್ಷರನ್ನಾಗಿ ನೇಮಿಸಿ ಅವರುಗಳ ಮೂಲಕ ಸಾಗುವಳಿ ಚೀಟಿಗಳನ್ನು ವಿತರಿಸುವ ಕಾರ್ಯಮಾಡಲಾಗುತ್ತಿದೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಹತ್ತೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬಗರ್ ಹುಕ್ಕುಂ ಸಾಗುವಳಿ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಬಗರ್ ಹುಕ್ಕುಂ ಸಾಗುವಳಿ ಮಾಡುವ ನಿಜವಾದ ಫಲಾನುಭವಿಗಳನ್ನು ತಾಲ್ಲೂಕು ಬಗರ್ ಹುಕ್ಕುಂ ಸಮಿತಿ ಅಧ್ಯಕ್ಷ ಕೆ.ಇ. ನಾಗರಾಜ್ ಮತ್ತು ಸದಸ್ಯರು ಕಳೆದ ಹತ್ತು ತಿಂಗಳಲ್ಲಿ ಹಲವಾರು ಬಗರ್ ಹುಕ್ಕುಂ ಸಮಿತಿ ಸಭೆಗಳನ್ನು ನಡೆಸಿ ಹಾಗೂ ಖುದ್ದು ಜಮೀನುಗಳಿಗೆ ಭೇಟಿ ನೀಡಿ, ನಿಜವಾದ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳನ್ನು ಗುರ್ತಿಸಿ ಸಾಗುವಳಿ ಚೀಟಿ ವಿತರಿಸಲಾಗುವುದು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಜಂಟಿ ಸರ್ವೆ ಕಾರ್ಯಕ್ರಮ ಹಮ್ಮಿಕೊಂಡು ಪಾರದರ್ಶಕವಾಗಿ ಬಗರ್ ಹುಕ್ಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿ ಹಂಚಿಕೆ ಮಾಡಲಾಗುವುದು. ಈಗ ಚೀಟಿ ದೊರಕದವರು ಚಿಂತಿಸದೆ ಕಾಯಬೇಕು ಎಂದು ಹೇಳಿದರು.

ಎಸ್.ಮಲ್ಲಾಪುರ ಗ್ರಾಮದ 24 ಎಕರೆ 35 ಗುಂಟೆ ಜಮೀನನ್ನು 13 ಸಾಗುವಳಿದಾರರಿಗೆ, ಚಿಕ್ಕೇರಹಳ್ಳಿ ಗ್ರಾಮದ 11 ಎಕರೆ 38 ಗುಂಟೆ ಜಮೀನನ್ನು 6 ಜನ ಸಾಗುವಳಿದಾರರಿಗೆ, ಹಿರೇಗೋಣಿಗೆರೆ ಗ್ರಾಮದ 13 ಎಕರೆ ಜಮೀನನ್ನು 7 ಜನ ಸಾಗುವಳಿದಾರರಿಗೆ ಹಾಗೂ ಕಮ್ಮಾರಗಟ್ಟೆ ಗ್ರಾಮದ 2 ಎಕರೆ ಜಮೀನನ್ನು ಒಬ್ಬ ಸಾಗುವಳಿದಾರ ಸೇರಿದಂತೆ ಒಟ್ಟು 51 ಎಕರೆ 33 ಗುಂಟೆ ಜಮೀನನ್ನು 27 ಜನ ಸಾಗುವಳಿದಾರರಿಗೆ ಸಾಗುವಳಿ ಚೀಟಿ ವಿತರಿಸಲಾಗಿದೆ ಎಂದರು.

ಬಗರ್ ಹುಕ್ಕುಂ ಸಾಗುವಳಿ ತಾಲ್ಲೂಕು ಅಧ್ಯಕ್ಷ ಕೆ.ಇ. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.

ಹೊನ್ನಾಳಿ ಪುರಸಭೆ ಅಧ್ಯಕ್ಷ ರಂಗನಾಥ್, ಸದಸ್ಯರಾದ ಶಾಂತರಾಜ್, ಹನುಮಂತಪ್ಪ, ಗ್ರಾಪಂ ಅಧ್ಯಕ್ಷ ಸಿದ್ದಪ್ಪ, ತಹಶೀಲ್ದಾರ್ ರಶ್ಮಿ, ಗ್ರಾಪಂ ಸದಸ್ಯರು ಇದ್ದರು.

## ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪರಿಸರ ಅಭಿಯಾನ



ದಾವಣಗೆರೆ, ಜೂ. 13- ಸಮೀಪದ ಕುರ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂದು ಪರಿಸರ ಹಾಗೂ ಮತದಾನ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಲಾ ಮಕ್ಕಳು ಊರಿನ ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಹಸಿರೇ ಉಸಿರು, ಕಾಡು ಬೆಳೆಸಿ, ನಾಡು ಉಳಿಸಿ, ಹಾಗೂ ಮತದಾನ ನಮ್ಮೆಲ್ಲರ ಹಕ್ಕು, ಮತದಾನ ಒಂದು ವರದಾನ, ನಿಮ್ಮ ಮತ ಅಮೂಲ್ಯ, ಕಡ್ಡಾಯವಾಗಿ ಮತದಾನ ಮಾಡಿ, ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಸಾರ್ವಜನಿಕರಲ್ಲಿ ಭಯ ಪರಿಸರ ರಕ್ಷಣೆ ಹಾಗೂ ಮತದಾನ ಜಾಗೃತಿ ಮೂಡಿಸಿದರು.

ಜಾಗೃತಿ ಅಭಿಯಾನವನ್ನು ಸಮಾಜ ವಿಜ್ಞಾನ ಶಿಕ್ಷಕ ಸಿ.ಜಿ. ಜಗದೀಶ್ ಕೂಲಂಬಿ, ವಿಜ್ಞಾನ ಶಿಕ್ಷಕ ಹೆಚ್. ವಿರುಪಾಕ್ಷಿ ಇವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅಭಿಯಾನದಲ್ಲಿ ಮುಖ್ಯ ಶಿಕ್ಷಕ ಆರ್. ಗಣೇಶಾಚಾರ್, ಶಿಕ್ಷಕರುಗಳಾದ ಶ್ರೀಮತಿ ಎಸ್. ಶಾಂತಕುಮಾರಿ, ಶ್ರೀಮತಿ ಪಾರ್ವತಮ್ಮ ಶ್ರೀಮತಿ ಶಕುಂತಲಾ, ಎ.ಆರ್. ರಾಘವೇಂದ್ರ, ಎಸ್. ಪ್ರಕಾಶ್, ನಾಗರಾಜ್ ಇವರುಗಳು ಮಕ್ಕಳೊಂದಿಗೆ ಜಾಥಾದಲ್ಲಿ ಉಪಸ್ಥಿತರಿದ್ದರು.

# ಕಟ್ಟಡ ನಿಧಿಗಾಗಿ ಅನರ್ಹರ ಹೆಚ್ಚಳ

**(1ನೇ ಪುಟದಿಂದ)** ಕ್ಲೇಮುಗಳನ್ನು ಸಲ್ಲಿಸಿದಾಗ ಇನ್ಸ್‌ಪೆಕ್ಟರ್‌ಗಳ ಮೂಲಕ ಪರಿಶೀಲನೆ ನಡೆಸಲಾಗುತ್ತದೆ. ಆಗ ಕಾರ್ಮಿಕರಲ್ಲದೇ ಇರುವವರು ನೋಂದಣಿ ಮಾಡಿಸಿಕೊಂಡಿರುವುದು ಬಯಲಾಗುತ್ತಿದೆ ಎಂದವರು ವಿವರಿಸಿದ್ದಾರೆ.

ಕಳೆದ ವರ್ಷದಲ್ಲಿ ಶೈಕ್ಷಣಿಕ ಧನ ಸಹಾಯಕ್ಕಾಗಿ ಸಲ್ಲಿಸಿದ 5,491 ಅರ್ಜಿಗಳು ತಿರಸ್ಕೃತಗೊಂಡಿವೆ ಎಂದಿರುವ ಅವರು, ಅನರ್ಹತೆಯಷ್ಟೇ ಅಲ್ಲದೇ ತಾಂತ್ರಿಕ ಕಾರಣಗಳಿಂದಲೂ ಕೆಲವೊಮ್ಮೆ ಅರ್ಜಿಗಳು ತಿರಸ್ಕೃತವಾಗುತ್ತವೆ ಎಂದಿದ್ದಾರೆ.

ಕೊರೊನಾಗೆ ಮುಂಚೆ ಜಿಲ್ಲೆಯಲ್ಲಿ 70 ಸಾವಿರದಷ್ಟು ಜನರು ಕಟ್ಟಡ ಕಾರ್ಮಿಕರ ಮಂಡಳಿಗೆ ನೋಂದಾಯಿಸಿಕೊಂಡಿದ್ದರು. ಕೊರೊನಾ ನಂತರದ ಎರಡು ವರ್ಷಗಳಲ್ಲಿ ನೋಂದಾಯಿತ ಕಾರ್ಮಿಕರ ಸಂಖ್ಯೆ 1.51 ಲಕ್ಷಕ್ಕೇರಿದೆ. ಇವರಲ್ಲಿ 1.13 ಲಕ್ಷ ಪುರುಷರು ಹಾಗೂ 38 ಸಾವಿರದಷ್ಟು ಮಹಿಳೆಯರಿದ್ದಾರೆ. ಈಗಲೂ ಜಿಲ್ಲೆಯಲ್ಲಿ ಪ್ರತಿ ತಿಂಗಳಿಗೆ 8 ಸಾವಿರದಷ್ಟು ಅರ್ಜಿಗಳು ಬರುತ್ತಿವೆ. ಇವುಗಳ ವಿಲೇವಾರಿ ಮಾಡುವುದೇ ಇಲಾಖೆಗೆ ದೊಡ್ಡ ಕೆಲಸವಾಗುತ್ತಿದೆ ಎಂದು ಇಬ್ರಾಹಿಂ ಹೇಳಿದ್ದಾರೆ.

ಕೆಲ ಕಾರ್ಮಿಕ ಸಂಘಟನೆಗಳು ಹಾಗೂ ಗುತ್ತಿಗೆದಾರರಿಂದಲೇ ಅನರ್ಹರ ನೋಂದಣಿ ಹೆಚ್ಚಾಗಿದೆ. ಕಟ್ಟಡ ಕಾರ್ಮಿಕರಲ್ಲದವರು ನೋಂದಣಿಯಾಗುವುದನ್ನು ತಡೆಯಲು ಸರ್ಕಾರವೇ ನಿಯಮಗಳಲ್ಲಿ ಬದಲಾವಣೆ ತರಬೇಕಿದೆ ಎಂದು ಇಬ್ರಾಹಿಂ ತಿಳಿಸಿದ್ದಾರೆ.

ಕಾರ್ಮಿಕರ ಮಕ್ಕಳ ಶೈಕ್ಷಣಿಕ ಧನಸಹಾಯಕ್ಕಾಗಿ ಅತಿ ಹೆಚ್ಚಿನ 6,118 ಕ್ಲೇಮುಗಳನ್ನು ಮಂಜೂರು ಮಾಡಲಾಗಿದೆ. ಉಳಿದಂತೆ ಮದುವೆಗಾಗಿ 3,021 ಜನರಿಗೆ ಧನ ಸಹಾಯ ಮಾಡಲಾಗಿದೆ ಎಂದು ಇಬ್ರಾಹಿಂ ತಿಳಿಸಿದ್ದಾರೆ.

13,349 ಜನರು ಕಳೆದ ವರ್ಷ ಶೈಕ್ಷಣಿಕ ಸಹಾಯ, ಹೆರಿಗೆ ಭತ್ಯೆ, ವೈದ್ಯಕೀಯ ಸಹಾಯ ಹಾಗೂ ಮದುವೆ ಸಹಾಯಗಳಿಗಾಗಿ ಅರ್ಜಿ ಸಲ್ಲಿಸಿದ್ದರು. ಈ ಅವಧಿಯಲ್ಲಿ 8,318 ಕ್ಲೇಮುಗಳನ್ನು ಮಂಜೂರು ಮಾಡಿ ಒಟ್ಟಾರೆ 25.08 ಕೋಟಿ ರೂ.ಗಳನ್ನು ನೇರವಾಗಿ ನೀಡಲಾಗಿದೆ.

ಈ ಎಲ್ಲ ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗಿದೆ ಎಂದು ಇಬ್ರಾಹಿಂ ತಿಳಿಸಿದ್ದಾರೆ.

# ಗಾಂಧಿಗಳಿಗೆ ನೋಟಿಸ್ : ದ್ವೇಷ ರಾಜಕಾರಣ

## ಇ.ಡಿ. ಕಚೇರಿಗೆ ಮುತ್ತಿಗೆ ಹಾಕಿ ರಾಜ್ಯ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು, ಜೂ. 13 - ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಇ.ಡಿ. ನೋಟಿಸ್ ಜಾರಿ ಮಾಡಿರುವುದು ಬಿಜೆಪಿಯ ದ್ವೇಷ ರಾಜಕಾರಣ ಎಂದು ಖಂಡಿಸಿರುವ ಪ್ರದೇಶ ಕಾಂಗ್ರೆಸ್, ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿತ್ತು.

ನಗರದ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿರುವ ಇ.ಡಿ. ಕಚೇರಿಗೆ ಸಾವಿರಾರು ಕಾರ್ಯಕರ್ತರು ಮುತ್ತಿಗೆ ಹಾಕಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು.

ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ, ಹಲವು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿ, ಕೇಂದ್ರ ಸರ್ಕಾರ ತಮ್ಮ ವಿರೋಧಿಗಳನ್ನು ಮಣಿಸಲು ಇ.ಡಿ. ಮತ್ತು ಸಿ.ಬಿ.ಐ. ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪ ಮಾಡಿದರು.

ಸಭೆಯಲ್ಲಿ ಭಾಗವಹಿಸಿದ್ದ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ, ನರೇಂದ್ರ ಮೋದಿ ಅವರು ಪ್ರಧಾನಿಯಾದ ಮೇಲೆ ಸರ್ಕಾರದ ಎಲ್ಲ ಸ್ವತಂತ್ರ ಸಂಸ್ಥೆಗಳನ್ನು ಅವರ ಕೈಗೊಂಬೆಗಳಾಗಿ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಅದು ರಿಸರ್ವ್ ಬ್ಯಾಂಕ್, ಸಿಎಜಿ, ಸಿಬಿಐ, ಇಡಿ, ಎನ್.ಎಸ್.ಎಸ್.ಓ ಇವು ಯಾವುದೇ ಇರಬಹುದು. ಈ ಎಲ್ಲಾ ಸಂಸ್ಥೆಗಳು ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡಿಕೊಂಡಿದ್ದಾರೆ. ಇ.ಡಿ. ಹಾಗೂ ಆದಾಯ ತೆರಿಗೆ ಇಲಾಖೆಗಳನ್ನು ವಿರೋಧ ಪಕ್ಷದವರ ಮೇಲೆ ಛೂ ಬಿಡುವ ಕೆಲಸ ಮಾಡುತ್ತಿದ್ದಾರೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಯಾವತ್ತೂ ಕೂಡ ಸ್ವಾಯತ್ತ ಸಂಸ್ಥೆಗಳನ್ನು ಈ ರೀತಿ ದುರುಪಯೋಗ ಮಾಡಿಕೊಂಡ ಉದಾಹರಣೆಗಳಿಲ್ಲ ಎಂದವರು ಹೇಳಿದರು.

ಇಂದು ಸಾಂಕೇತಿಕವಾಗಿ ಮುಷ್ಕರ ಆರಂಭವಾಗಿದೆ. ಕಾಂಗ್ರೆಸ್‌ನ ಕೋಟ್ಯಂತರ ಕಾರ್ಯಕರ್ತರು ಬೀದಿಗೆ ಇಳಿದು ಸರ್ಕಾರ ನಡೆಯದಂತೆ ಹೋರಾಟ ಮಾಡುತ್ತಾರೆ, ಎಲ್ಲ ಸರ್ಕಾರಿ ಕಚೇರಿಗಳನ್ನು ಬಂದ್ ಮಾಡಬೇಕಾಗುತ್ತದೆ ಎಂದವರು ಎಚ್ಚರಿಸಿದ್ದಾರೆ.

## ಪಾಲಿಕೆ ಆರೋಗ್ಯಾಧಿಕಾರಿ ಡಾ.ಜಿ. ಸಂತೋಷ್‌ಗೆ ಪದೋನ್ನತಿ



ದಾವಣಗೆರೆ, ಜೂ. 13 - ಮಹಾನಗರ ಪಾಲಿಕೆ ಯಲ್ಲಿ ಆರೋಗ್ಯ ಅಧಿಕಾರಿ ಡಾ. ಜಿ ಸಂತೋಷ್ ಅವರು ನಗರದ ಪಶುವೈದ್ಯಾಧಿಕಾರಿ ಉಣ್ಣೆ ಮತ್ತು ಕುರಿ ಅಭಿವೃದ್ಧಿ ನಿಗ ಮದ ದಾವಣಗೆರೆ ಮುಖ್ಯಾಧಿ ಕಾರಿಯಾಗಿ ನೇಮಕಗೊಂ ಡಿದ್ದಾರೆ. ಅವರನ್ನು ನಗರ ಪಾಲಿಕೆಯಲ್ಲಿ ಆಯುಕ್ತ ವಿಶ್ವನಾಥ್ ಮುದ್ದಜ್ಜಿ ಅವರು ಸನ್ಮಾನಿಸಿ, ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್, ಬಸವರಾಜಯ್ಯ ಮತ್ತು ಇತರರು ಉಪಸ್ಥಿತರಿದ್ದರು.

## ಮನಸ್ಸೂ ಸ್ವಚ್ಛವಾಗಿರಬೇಕು

**(1ನೇ ಪುಟದಿಂದ)** ರಜನಿಕಾಂತ್, ಅಶ್ವಿನಿ ಕೃಷ್ಣ, ರಾಘವೇಂದ್ರ, ತಾ.ಪಂ. ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಬಿಜೆಪಿ ನೀಲಗುಂದ ಶಿವಣ್ಣ, ದೀಟೂರು ನಿರಂಜನ್, ರಾಘವೇಂದ್ರ ಕೊಂಡಜ್ಜಿ, ಹಾಸ್ಯನಟ ಮನೋಹರ್, ನಿರ್ಮಾಪಕ ಕಿರಣ್ ಕೋರಿ ಪ್ರಸಾದ್, ಪ್ರಶಾಂತ್, ಸೋಮಣ್ಣ, ಆರ್.ಟಿ. ಹನುಮಂತಪ್ಪ, ಸಂತೋಷ್ ಮ್ಯಾಂತೆ, ಹನಗವಾಡಿ ರೇವಣಸಿದ್ದಪ್ಪ ಇತರರು ಹಾಜರಿದ್ದರು.

# ಹೊನ್ನಾಳಿ: ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘಟನೆ ಅಗತ್ಯ

## ಖಾಸಗಿ ಶಾಲೆಗಳ ಆಡಳಿತ ಮಂಡಳಿ ಒಕ್ಕೂಟದ ಸಭೆಯಲ್ಲಿ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ

ಹೊನ್ನಾಳಿ, ಜೂ.13- ರಾಜ್ಯದಲ್ಲಿರುವಂತಹ ಸಾವಿರಾರು ಶಿಕ್ಷಣ ಸಂಸ್ಥೆಗಳು ಸಂಘಟಿತವಾಗಬೇಕು. ಇಲ್ಲದಿದ್ದರೆ ಸರ್ಕಾರವೇ ಸಂಸ್ಥೆಗಳು ಈಡೇರಿಸದಂತಹ ಹೊಸ ಹೊಸ ಕಾನೂನುಗಳನ್ನು ತಂದು ಶಿಕ್ಷಣ ಸಂಸ್ಥೆಗಳನ್ನು ಮುಚ್ಚಿಸುತ್ತವೆ ಎಂದು ರುಪ್ಸ (ರೂರಲ್ ಅನ್ ಏಡೆಡ್ ಪ್ರೈವೇಟ್ ಸ್ಕೂಲ್) ಸಂಘಟನೆಯ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ ಹೇಳಿದರು.

ಭಾನುವಾರ ನಗರದಲ್ಲಿ ತಾಲ್ಲೂಕಿನ ಖಾಸಗಿ ಶಾಲೆಗಳ ಆಡಳಿತ ಮಂಡಳಿ ಒಕ್ಕೂಟ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರ ಈ ಹಿಂದೆ ಮಾಡಿದಂತಹ ಕಾನೂನುಗಳನ್ನು ಸರಿಯಾಗಿ ಪಾಲಿಸುತ್ತಿಲ್ಲ. ಶಿಕ್ಷಣ ಇಲಾಖೆಯ ಅಧಿಕಾರಿಗಳು ಪ್ರತಿ ಹಂತದಲ್ಲೂ ಹಣದ ಹಿಂದೆ ಬಿದ್ದಿದ್ದಾರೆ. ಖಾಸಗಿ ಶಾಲೆಗಳು ಪ್ರತಿ ವರ್ಷ ಪ್ರಥಮ ಮಾನ್ಯತೆ ನವೀಕರಣ ಕೇಳುತ್ತವೆ. ಸಂಸ್ಥೆಗಳ ನವೀಕರಣ ಮಾಡಿಸುವ ಸಂಬಂಧ ಕೊಡುತ್ತಿರುವ ತೊಂದರೆ, ಮತ್ತಿತರೆ ಕೆಲಸ, ಕಾರ್ಯಗಳಿಗೆ ಪ್ರತಿಯೊಂದು ವಿಚಾರಕ್ಕೂ ಕಾನೂನುಗಳನ್ನು ಅಡ್ಡಿ ತರುತ್ತಿದ್ದಾರೆ. ಅದರ ಹಿಂದೆ ಶಿಕ್ಷಣ ಇಲಾಖೆ ಬೇರೆ ತೆರನಾದ ನಾಟಕಗಳನ್ನು ಆಡುತ್ತಿದೆ ಎಂದೂ ಅವರು ಹೇಳಿದರು.



ಇತ್ತೀಚೆಗೆ ಶಾಲಾ ಕಟ್ಟಡಗಳ ಸುರಕ್ಷತೆ ಮತ್ತು ಬೆಂಕಿ ಸುರಕ್ಷತಾ ಪ್ರಮಾಣ ಪತ್ರಗಳ ವಿಚಾರಗಳನ್ನು ಕೋರ್ಟ್ ಮೂಲಕ ಅಡ್ಡಿ ತಂದು ದುಡ್ಡು ಮಾಡುವ ಯೋಜನೆಗೆ ಕೈ ಹಾಕಿದ್ದವು. ಅದರ ವಿರುದ್ಧ ಸಂಘಟನೆ ಕೋರ್ಟ್ ಮೆಟ್ಟಿಲು ಹತ್ತಿದ್ದು, ಸದ್ಯಕ್ಕೆ ಅದಕ್ಕೆ ತಡೆಯಾಜ್ಞೆ ಸಿಕ್ಕಿದೆ. ಮುಂದಿನ ದಿನಗಳಲ್ಲಿ ತಮ್ಮ ಸಂಘಟನೆಯ ಮೂಲಕ ಹೋರಾಟಕ್ಕೆ ವೇದಿಕೆ ಸಜ್ಜುಗೊಳಿಸಲಾಗುತ್ತಿದೆ ಎಂದರು.

ಕಳೆದ ಎಂಟು-ಹತ್ತು ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಯಾವುದೋ ಒಂದು ಜೋಪಡಿಯಲ್ಲಿ ನಡೆಸುತ್ತಿದ್ದ ಶಾಲೆಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು, ಕೆಲ ಮಕ್ಕಳು ಸಾವನ್ನಪ್ಪಿದವು. ಅಂತಹ ಶಾಲೆಗಳಿಗೆ ಅನುಮತಿ ಕೊಡುವಾಗಲೇ ಸರ್ಕಾರಗಳು ಬಿಗಿಯಾದ ಕಾನೂನು ಪಾಲನೆ ಮಾಡಬೇಕಿತ್ತು. ಆದರೆ ಹಾಗೇ ಮಾಡದಿರುವುದು ಅಲ್ಲಿನ ಲೋಪವಾಗಿತ್ತು.

ಆದರೆ ಅದನ್ನೇ ನೆಪವಾಗಿಟ್ಟುಕೊಂಡು ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಫೈರ್ ಸೇಫ್ಟಿ, ಕಟ್ಟಡ ಸುರಕ್ಷತೆ ಎಂಬ ಕಾನೂನು ಜಾರಿಗೊಳಿಸುವ ಮೂಲಕ ಮಾನ್ಯತೆ ನವೀಕರಣದ ಸಂದರ್ಭದಲ್ಲಿ ನವೀಕರಣಕ್ಕೆ ಅಡ್ಡಿಪಡಿಸುತ್ತಿವೆ. ಬಹುತೇಕ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಎಲ್ಲಾ ಶಾಲೆಗಳು ಹೊಂದಿವೆ. ಆದರೆ ಈ ಫೈರ್ ಸೇಫ್ಟಿ ಎನ್ನುವ ಪ್ರಮಾಣ ಪತ್ರ ಪಡೆಯಲು ಕನಿಷ್ಠ ನಾಲ್ಕೈದು ಲಕ್ಷ ಖರ್ಚು ಮಾಡಬೇಕಾಗುತ್ತಿದೆ. ಇದು ಎಲ್ಲಾ ಶಾಲೆಗಳು ಬಡ್ಜೆಟ್ ಶಾಲೆಗಳಲ್ಲ, ಅವುಗಳಿಗೆ ಈ ಬೆಂಕಿ ಸುರಕ್ಷತಾ ಪ್ರಮಾಣ ಪತ್ರ ತರುವುದು ಅಷ್ಟು ಸುಲಭವಲ್ಲ, ಹೀಗಾದರೆ ಈ ಕಾನೂನುನಡಿ 6 ಸಾವಿರ ಶಾಲೆಗಳ ಪೈಕಿ ಸುಮಾರು 4500 ಶಾಲೆಗಳನ್ನು ಶಾಶ್ವತವಾಗಿ ಮುಚ್ಚುವ ಪರಿಸ್ಥಿತಿ ಎದುರಾಗಲಿದೆ ಎಂದರು. ನಮ್ಮ ಸಂಘಟನೆ ಮೂಲಕ ಕೋರ್ಟ್ ಮೊರೆ ಹೋಗಿ ಅದಕ್ಕೆ ತಡೆಯಾಜ್ಞೆ ತಂದಿದ್ದೇವೆ ಎಂದು ಹೇಳಿದರು. ಸರ್ಕಾರದ ಮೇಲೂ ಒತ್ತಡ ಹಾಕುತ್ತಿದ್ದೇವೆ ಎಂದು ಹೇಳಿದರು.

ರುಪ್ಸ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಉಮಾಶಂಕರ್ ಅವರು ಶಿಕ್ಷಣ ಸಚಿವರಿಗೆ 10 ವರ್ಷಗಳ ಕಾಲ ಮಾನ್ಯತೆ ನವೀಕರಣ ಬೇಡ ಎನ್ನುವ ಬೇಡಿಕೆಯನ್ನು ಇಟ್ಟಿದ್ದೇವೆ. ಈ ಕುರಿತು ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದರು.

ತಾಲ್ಲೂಕು ಸಂಘಟನೆಯ ಅಧ್ಯಕ್ಷ ರೇವಣಸಿದ್ದಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಸುಮಾರು 42 ಶಿಕ್ಷಣ ಸಂಸ್ಥೆಗಳಿದ್ದು, ಅವುಗಳ ಪೈಕಿ 20 ಶಾಲೆಗಳು ಮಾತ್ರ ಭಾಗವಹಿಸಿವೆ. ಉಳಿದ ಶಾಲೆಗಳ ಆಡಳಿತ ಮಂಡಳಿಗಳು ಸಂಘಟನೆಗೆ ಕೈ ಜೋಡಿಸಿ, ಹೋರಾಟ ಮಾಡಬೇಕಾಗುತ್ತದೆ ಎಂದು ಮನವಿ ಮಾಡಿದರು.

ಸಂಘಟನೆಯ ಉಪಾಧ್ಯಕ್ಷ ಎನ್.ಕೆ. ಆಂಜನೇಯ ಸ್ವಾಗತಿಸಿದರು, ಕಾರ್ಯದರ್ಶಿ ವರುಣಾಚಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿರ್ದೇಶಕ ರಾಜು ಕಣಗಣ್ಣಾರ್ ವಂದನೆ ಸಲ್ಲಿಸಿದರು. ಖಜಾಂಚಿ ಪುಟ್ಟಪ್ಪ ಕಾರ್ಯಕ್ರಮ ನಿರೂಪಿಸಿದರು.

ಸಮಾರಂಭದಲ್ಲಿ ಸಂಘಟನಾ ಕಾರ್ಯದರ್ಶಿ ಸುರೇಶ್ ಲಿಂಗಾಪುರ, ಉಪಾಧ್ಯಕ್ಷ ಯೋಗೇಶ್ ಬೆಳಗುತ್ತಿ, ನಿರ್ದೇಶಕರಾದ ಚಂದನ, ಭಾನುಪ್ರಕಾಶ್, ವಿಜಯ ಕಾಲೇಜಿನ ದೇವರಾಜ್, ದೊಡ್ಡೇರಿ ರವಿಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ರೈತರ ಬಗ್ಗೆ ಕಾಳಜಿ ಇರುವ ಮೋದಿ

## ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್

ದಾವಣಗೆರೆ, ಜೂ.13- ದೇಶದ ಇತಿಹಾಸದಲ್ಲಿ ರೈತರ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಮಾತನಾಡಿದ ಪ್ರಧಾನಿ ಎಂದರೆ ನರೇಂದ್ರ ಮೋದಿ ಆಗಿದ್ದಾರೆ. ರೈತರ ಆದಾಯ ದ್ವಿಗುಣಗೊಳಿಸಲು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ಅವರ ಏಳ್ಗೆಗೆ ವಿಶೇಷ ಪ್ರಯತ್ನ ಮಾಡಿದ್ದಾರೆ ಎಂದು ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಹೇಳಿದರು.

ತಾಲ್ಲೂಕಿನ ತುರ್ಚಘಟ್ಟ ಗ್ರಾಮದಲ್ಲಿ ಜಿಲ್ಲಾ ರೈತ ಮೋರ್ಚಾದಿಂದ ಹಮ್ಮಿಕೊಂಡಿದ್ದ ರೈತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡು ತ್ತಿದ್ದರು.

ನಮ್ಮ ಜಿಲ್ಲೆಯಲ್ಲಿ ಕಳೆದ 2021-22ನೇ ಸಾಲಿನಲ್ಲಿ ಒಟ್ಟು 153249 ರೈತರಿಗೆ ಕೇಂದ್ರ ಸರ್ಕಾರದಿಂದ 246.09 ಕೋಟಿ ರೂಗಳು ಮತ್ತು ರಾಜ್ಯ ಸರ್ಕಾರದಿಂದ 108.85 ಕೋಟಿ ರೂಗಳು ರೈತರ ಬ್ಯಾಂಕ್ ಖಾತೆಗೆ ಜಮೆಯಾಗಿದ್ದು, ಇದರಿಂದ ರೈತರು ಆರ್ಥಿಕವಾಗಿ ಸಬಲರಾಗಲು ಕಾರಣವಾಗಿದೆ ಎಂದರು.

ರಾಜ್ಯ ಬಿಜೆಪಿ ರೈತ ಮೋರ್ಚಾ ಸಂಚಾಲಕ ಕೊಳೇನಹಳ್ಳಿ ಬಿ.ಎಂ. ಸತೀಶ್ ಮಾತನಾಡಿ, ಕೇಂದ್ರ ಸರ್ಕಾರ 100 ರೂ ಬಿಡುಗಡೆ ಮಾಡಿದರೆ ಫಲಾನುಭವಿಗೆ 15 ರೂ ಮಾತ್ರ ತಲುಪುತ್ತದೆ ಎಂದು ಸ್ವತಃ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಹೇಳಿದ್ದರು. ಅದಕ್ಕಾಗಿ ನರೇಂದ್ರ ಮೋದಿ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯ ಕಂತನ್ನು ನೇರವಾಗಿ ರೈತರ ಖಾತೆಗೆ ಜಮೆ ಮಾಡುತ್ತಿದೆ. ಇದಕ್ಕಾಗಿ ಯಾವುದೇ ಇಲಾಖೆಗೆ ದಾಖಲೆ ಜೋಡಿಸಿಕೊಂಡು ಅರ್ಜಿ ಸಲ್ಲಿಸುವ ಅಗತ್ಯ ಇಲ್ಲ. ಇದು ಒಂದು ಆವಿಷ್ಕಾರ ಎಂದು ಹೇಳಿದರು.

ಸಭೆಯಲ್ಲಿ ಸಾವಯವ ಸಮಗ್ರ ಕೃಷಿಗೆ ರಾಜ್ಯ ಪ್ರಶಸ್ತಿ ಪಡೆದಿರುವ ಚಂದ್ರನಹಳ್ಳಿ ಮಲ್ಲಿಕಾರ್ಜುನ್ ಅವರನ್ನು ಸನ್ಮಾನಿಸಲಾಯಿತ್ತು.

ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶೇಖರಪ್ಪ ವಹಿಸಿದ್ದರು.

ರೈತ ಮೋರ್ಚಾ ಮಂಡಲ ಅಧ್ಯಕ್ಷ ಎ.ಎಂ. ಮಂಜುನಾಥ, ಬಿಜೆಪಿ ಮುಖಂಡರಾದ ತುರ್ಚಘಟ್ಟ ಕರಿಬಸಪ್ಪ, ಹೊಸಹಳ್ಳಿ ಶಿವಮೂರ್ತಿ, ಆರನೇ ಕಲ್ಲು ವಿಜಯಕುಮಾರ್, ಅಣಜಿ ಗುಡ್ಡೇಶ್, ಅಣಬೇರು ಶಿವಪ್ರಕಾಶ್, ಕೈದಾಳೆ ಗುರುಪ್ರಸಾದ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.



# ಏರಿಕೆ ಕಳವಳಕಾರಿಯಲ್ಲ

**(1ನೇ ಪುಟದಿಂದ)** ಮಹಾರಾಷ್ಟ್ರದಲ್ಲಿ 9,354 ಕೊರೊನಾ ಸೋಂಕಿತರು ಕಂಡು ಬಂದಿದ್ದರು. ಇವರಲ್ಲಿ 5,980 ಜನರು ಮುಂಬೈನಲ್ಲಿ ಪತ್ತೆಯಾಗಿದ್ದರು. ಕಳೆದ ತಿಂಗಳು ರಾಜ್ಯದಲ್ಲಿ ಕೊರೊನಾದಿಂದ 17 ಜನ ಸಾವನ್ನಪ್ಪಿದ್ದರು.

ಜೂನ್ 1ರಿಂದ 12ರವರೆಗೆ ರಾಜ್ಯದಲ್ಲಿ 23,941 ಸೋಂಕಿತರು ಕಂಡು ಬಂದಿದ್ದಾರೆ. ಮುಂಬೈ ಒಂದರಲ್ಲೇ 14,945 ಸೋಂಕಿತರು ಕಂಡು ಬಂದಿದ್ದಾರೆ. ರಾಜ್ಯದಲ್ಲಿ ಜೂನ್ 1ರಿಂದ 12ರವರೆಗೆ 12 ಜನ ಸಾವನ್ನಪ್ಪಿದ್ದಾರೆ.

ಕೊರೊನಾ ಸೋಂಕು ಪ್ರಕರಣಗಳಲ್ಲಿ ಹೆಚ್ಚಳವಾಗಿದ್ದರೂ ಸಹ, ಸೋಂಕಿತರಲ್ಲಿ ಲಘು ಲಕ್ಷಣಗಳು ಕಂಡು ಬರುತ್ತಿವೆ ಎಂದು ಮುಂಬೈನ ಜೆ.ಜೆ. ಸರ್ಕಾರಿ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಸುನಿಲ್ ಭೈಸಾರೆ ಹೇಳಿದ್ದಾರೆ.

ಪ್ರಸಕ್ತ ಆಸ್ಪತ್ರೆಯಲ್ಲಿ 19 ರೋಗಿಗಳಿದ್ದಾರೆ. ಅವರಲ್ಲಿ ಬಹುತೇಕರು ಖೈದಿಗಳು ಇಲ್ಲವೇ ಪೊಲೀಸ್ ಕಸ್ಟಡಿಯಲ್ಲಿರುವವರಾಗಿದ್ದಾರೆ. ಯಾವುದೇ ರೋಗಿಗೆ ಆಕ್ಸಿಜನ್ ಅಗತ್ಯ ಕಂಡು ಬಂದಿಲ್ಲ. ರೋಗಿಗಳಿಗೆ ಪ್ಯಾರಾಸೆಟಮಾಲ್ ಹಾಗೂ ಇತರೆ ಪೂರಕ ಔಷಧಿಗಳನ್ನು ನೀಡಲಾಗುತ್ತಿದೆ ಎಂದು ಭೈಸಾರೆ ತಿಳಿಸಿದ್ದಾರೆ.

ಪ್ರಸಕ್ತ ಅಲೆಯಲ್ಲಿ ರೋಗಿಗಳು 48 ರಿಂದ 72 ಗಂಟೆಗಳಲ್ಲಿ ಗುಣವಾಗುತ್ತಿದ್ದಾರೆ. ಅವರಿಗೆ ರೆಮ್ಡಿಸಿವಿರ್ ಅಗತ್ಯವಿಲ್ಲ ಎಂದು ಮುಂಬೈನ ಗ್ಲೋಬಲ್ ಆಸ್ಪತ್ರೆಯ ಹಿರಿಯ ಸಲಹಾ ವೈದ್ಯೆ ಡಾ. ಮಂಜುಶಾ ಅಗರ್‌ವಾಲ್ ತಿಳಿಸಿದ್ದಾರೆ.

ಈ ವರ್ಷ ಜನವರಿಯಲ್ಲಿ ಕಂಡು ಬಂದ ಅಲೆಗೆ ಹೋಲಿಸಿದರೆ, ಈಗಿನ ಅಲೆ ಸೌಮ್ಯವಾಗಿದೆ ಎಂದವರು ತಿಳಿಸಿದ್ದಾರೆ.

ಇದು ನಾನು ಕಂಡಿರುವ ಅತ್ಯಂತ ಸೌಮ್ಯ ಕೊರೊನಾ ಅಲೆಯಾಗಿದೆ. ಆದರೆ, ಮಾಸ್ಕ್ ಧರಿಸುವುದು ಹಾಗೂ ಕೊರೊನಾ ಶಿಷ್ಟಾಚಾರ ಪಾಲಿಸುವುದು ಅತಿ ಮುಖ್ಯವಾಗಿದೆ ಎಂದವರು ತಿಳಿಸಿದ್ದಾರೆ. ದೇಶದಲ್ಲಿ ಇದುವರೆಗೂ ಯಾವುದೇ ಹೊಸ ಕಳವಳಕಾರಿ ರೂಪಾಂತರಿ ಕಂಡು ಬಂದಿಲ್ಲ ಎಂದು ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಅಂಡ್ ಸೊಸೈಟಿಯ ನಿರ್ದೇಶಕ ಡಾ. ರಾಕೇಶ್ ಮಿಶ್ರ ಹೇಳಿದ್ದಾರೆ.

# ಕೊರೊನಾ ಏರಿಕೆ

**(1ನೇ ಪುಟದಿಂದ)** ದೊಡ್ಡ ಪ್ರಮಾಣದಲ್ಲಿ ನೀಡುವಂತೆಯು ಹೇಳಿದ್ದಾರೆ.

ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಸೋಂಕು ಹೆಚ್ಚಳವಾಗುತ್ತಿದೆ. ಇಲ್ಲಿ ಕಡಿವಾಣ ಹಾಕದಿದ್ದರೆ, ಮುಂದಿನ ದಿನಗಳಲ್ಲಿ ಇದು ಇಡೀ ರಾಜ್ಯಕ್ಕೆ ವಿಸ್ತರಿಸಬಹುದು.

ನೆರೆಯ ಮಹಾರಾಷ್ಟ್ರ, ಆಂಧ್ರ, ಕೇರಳದಿಂದ ಬರುವ ಜನರಿಂದ ಸೋಂಕು ಹರಡುತ್ತಿದೆ. ಜನರಲ್ಲಿ ಈ ಬಗ್ಗೆ ಮುಂಜಾಗ್ರತೆ ವಹಿಸಿ, ರಾಜ್ಯದ ಗಡಿ ಭಾಗಗಳಲ್ಲಿ ಕಟ್ಟೆಚ್ಚರ ವಹಿಸುವಂತೆಯೂ ಸಲಹೆ ಮಾಡಿದ ತಜ್ಞರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಪರೀಕ್ಷೆಗೊಳಪಡಿಸಬೇಕು.

ಸಾರ್ವಜನಿಕ ಸ್ಥಳಗಳು, ಹೋಟೆಲ್, ಮಾಲ್, ಪೂಜಾ ಮಂದಿರ ಸೇರಿದಂತೆ ಜನದಟ್ಟಣೆ ಪ್ರದೇಶದಲ್ಲಿ ಮಾಸ್ಕ್ ಕಡ್ಡಾಯಗೊಳಿಸಿ, ಗುಂಪು ಸೇರದಂತೆ ಎಚ್ಚರ ವಹಿಸಬೇಕು. ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಒಂದು ಮತ್ತು ಎರಡನೇ ಹಂತದ ಲಸಿಕೆ ಕಾರ್ಯ ಮುಗಿದಿದೆ. ರೋಗ ನಮ್ಮನ್ನು ದೊಡ್ಡ ಪ್ರಮಾಣದಲ್ಲಿ ಬಾಧಿಸುವುದಿಲ್ಲ. ಆದರೆ ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು.

ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಸೋಂಕು ತಗಲಿದರೆ, ಅಂತಹವರು ಚೇತರಿಸಿಕೊಳ್ಳುವುದು ಕಷ್ಟಕರ. ಈ ಬಗ್ಗೆ ಎಚ್ಚರ ವಹಿಸಬೇಕು ಎಂದು ತಿಳಿಸಿದ್ದಾರೆ.




## ಶ್ರೀ ಸಾಯಿ ಕ್ರೆಡಿಟ್ ಕೋ-ಆಪ್ ಸೊಸೈಟಿ.ಲಿ.

ಅಂದನೂರು ಕಾಂಪ್ಲೆಕ್ಸ್, ಗಾಂಧಿ ಸರ್ಕಲ್, ಪಿ.ಬಿ. ರಸ್ತೆ, ದಾವಣಗೆರೆ.

**ಎಫ್.ಡಿ. ಬಡ್ಡಿ ದರ**

| | |
|---|---|
| 30 ದಿನಗಳಿಂದ 180 ದಿನಗಳವರೆಗೆ | - 05 % |
| 180 ದಿನಗಳಿಂದ 01 ವರ್ಷದವರೆಗೆ | - 07 % |
| 01 ವರ್ಷದಿಂದ 02 ವರ್ಷಗಳವರೆಗೆ | - 08% |
| 02 ವರ್ಷದಿಂದ 03 ವರ್ಷದವರೆಗೆ | - 09% |
| 03 ವರ್ಷದಿಂದ 04 ವರ್ಷದವರೆಗೆ | - 10% |
| 05 ವರ್ಷ ಮೇಲ್ಪಟ್ಟು | - 11 % |

**60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ 01% ಜಾಸ್ತಿ ಮಾಸಿಕ ಬಡ್ಡಿ ಪಡೆಯಲು ಅವಕಾಶ ಇರುತ್ತದೆ.**



ಶ್ರೀ ರೇವಣಸಿದ್ದಪ್ಪ ಎನ್.ಎಸ್
(ನಿವೃತ್ತ ಪಿ.ಎಸ್.ಐ)
**ಅಧ್ಯಕ್ಷರು.**
**ಮೊ: 99860 37669**



ಶ್ರೀ ಎಂ. ಸವಿತಾ ಪ್ರಕಾಶ್
(ಸಂಸ್ಥಾಪಕರು)
**ಕಾರ್ಯದರ್ಶಿ**
**ಮೊ: 99802 40407**


# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ 1) ಶ್ರೀಯುತ ಗಣೇಶಪ್ಪ ಬ್ಯಾಡಗಿ ಬಿನ್ ಲೇಟ್ ಶಿವಪ್ಪ ಬ್ಯಾಡಗಿ, ವಯಸ್ಸು ಸುಮಾರು 70 ವರ್ಷ, ವಾಸ ಎಸ್.ಎಸ್. ಬಡಾವಣೆ, ದಾವಣಗೆರೆ ಹಾಗೂ ಲೇಟ್ ಪುಟ್ಟಪ್ಪ ಬ್ಯಾಡಗಿ ಇವರ ವಾರಸುದಾರರೆಲ್ಲರ ಪರವಾಗಿ ಶ್ರೀ ವೀರೇಂದ್ರ ಕುಮಾರ್ ಬ್ಯಾಡಗಿ, ವಯಸ್ಸು ಸುಮಾರು 35 ವರ್ಷ, ಇವರುಗಳು ಈ ಹಿಂದೆ ದಿನಾಂಕ : 20.02.2022ರ ಭಾನುವಾರ ಜನತಾವಾಣಿ ಪತ್ರಿಕೆಯ 5ನೇ ಪುಟದಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಕೊಟ್ಟಿದ್ದ ರಾಮದಾಸ್ ಬಿನ್ ಪಾಂಡುರಂಗ ಶೇಟ್ ವಯಸ್ಸು ಸುಮಾರು 42 ವರ್ಷ, ಮನೆ ನಂ. 34/4, ಎಂ.ಕೆ. ಬಿಲ್ಡಿಂಗ್ ಹಿಂಭಾಗ, ಬಸವರಾಜಪೇಟೆ, ದಾವಣಗೆರೆ ಈತನು ಕೊಟ್ಟಿದ್ದ ಸಾರ್ವಜನಿಕ ಪ್ರಕಟಣೆಯಲ್ಲಿ ನಮೂದಿಸಿದಂತೆ ಷೆಡ್ಯೂಲ್ ಆಸ್ತಿಗಳ ಮೇಲೆ ದಾವಣಗೆರೆಯ ಸಿವಿಲ್ ನ್ಯಾಯಾಲಯದಲ್ಲಿ ಮತ್ತು ದಾವಣಗೆರೆ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತವೆ ಎನ್ನುವುದು ನಿಜ. ಆದರೆ ಸದರಿ ರಾಮದಾಸ್ ಈತನು ಹಾಕಿದ ಅರ್ಜಿಗಳು ದಾವಣಗೆರೆಯ ನ್ಯಾಯಾಲಯದಲ್ಲಿ ವಜಾ ಆಗಿ ಅವುಗಳ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ನಂ. 41870/2017 (ಜಿಎಂಸಿಪಿಸಿ) ಎಂಬ ಅರ್ಜಿಯನ್ನು ಸಲ್ಲಿಸಿ ಅದರಲ್ಲಿ ಆದ ಆದೇಶಾನುಸಾರ ಈಗ ದಾವಣಗೆರೆಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಫ್‌ಡಿಪಿ ನಂ. 9/2011 ಎಂಬ ಪ್ರಕರಣದಲ್ಲಿ ಹಾಜರಾಗಿ ಸದರಿ ಪ್ರಕರಣದ ಒಬ್ಬ ಪಕ್ಷದಾರನಾಗಿ ಪ್ರಕರಣವನ್ನು ಮುಂದುವರಿಸಿರುತ್ತಾನೆ. ಆದರೆ ಈ ಎಲ್ಲಾ ವಿಚಾರವನ್ನು ಮುಚ್ಚಿಟ್ಟು ತನ್ನಿಂದ ಖರೀದಿ ಮಾಡಿದವರ ಕಡೆಯಿಂದ ಷೆಡ್ಯೂಲ್ ಆಸ್ತಿಗಳಲ್ಲಿ ಒಂದೊಂದಾಗಿ ಆಸ್ತಿಗಳನ್ನು ಕಾನೂನುಬಾಹಿರವಾಗಿ ಪರಭಾರೆ ಮಾಡುತ್ತಿದ್ದಾನೆಂದು ನಮಗೆ ನಂಬಲರ್ಹವಾಗಿ ತಿಳಿದುಬಂದಿದೆ. ಆದ ಕಾರಣ ಈ ಬಗ್ಗೆ ಸಾರ್ವಜನಿಕರು ಯಾರಾದರೂ ಖರೀದಿ ಮಾಡುವ ವಿಚಾರವಿದ್ದಲ್ಲಿ ಮೇಲ್ಕಡ ನ್ಯಾಯಾಲಯದ ಪ್ರಕರಣದ ದಾಖಲಾತಿಗಳನ್ನು ಪರಿಶೀಲಿಸಿ ಮುಂದುವರಿಯ ತಕ್ಕದ್ದು ಎಂದು ತಿಳಿಸಲಾಗಿದೆ. ಈ ಹಿಂದೆಯೂ ಸಹಿತ ಅನೇಕ ಬಾರಿ ಮೇಲೆ ಹೇಳಿದ ವ್ಯಕ್ತಿಗಳು ಸಾರ್ವಜನಿಕರ ಗಮನಕ್ಕೆ ರಾಮದಾಸ್‌ರವರ ಕಾನೂನು ಬಾಹಿರ ಚಟುವಟಿಕೆಗಳನ್ನು ತರುವ ಸಲುವಾಗಿ ಪ್ರಕಟಣೆಯನ್ನು ಕೊಟ್ಟಿರುತ್ತಾರೆ. ಆದ ಕಾರಣ ಸಾರ್ವಜನಿಕರು ಷೆಡ್ಯೂಲ್‌ನಲ್ಲಿರುವ ಆಸ್ತಿಗಳ ಬಗ್ಗೆ ವ್ಯವಹಾರ ಮಾಡಬಾರದೆಂದು ಈ ಪ್ರಕಟಣೆಯ ಮೂಲಕ ಮತ್ತೊಮ್ಮೆ ತಿಳಿಸಲಾಗಿದೆ. ಕೆಳಕಂಡ ಷೆಡ್ಯೂಲ್‌ನಲ್ಲಿರುವ ಆಸ್ತಿಗಳಲ್ಲಿ ಮೇಲೆ ತಿಳಿಸಿರುವ 1,2 ಮತ್ತು ಇತರೆ ಕಕ್ಷಿದಾರರ ಹಕ್ಕುಗಳು ಈ ಹಿಂದೆ ಸಂಬಂಧಪಟ್ಟ ಹಲವು ಪ್ರಕರಣಗಳಲ್ಲಿ ಕಾನೂನು ರೀತಿಯಲ್ಲಿ ಸ್ಥಾಪಿತವಾಗಿರುತ್ತವೆ.

**ಷೆಡ್ಯೂಲ್ : 1) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ದೊಡ್ಡಬಾತಿ ಗ್ರಾಮದ ರಿ.ಸ.ನಂ. 81/1 ರಲ್ಲಿರುವ ವಿಸ್ತೀರ್ಣ 6 ಎಕರೆ, 17-ಗುಂಟೆ ಇದಕ್ಕ ಚಕ್ಕುಬಂದಿ : ಪೂರ್ವಕ್ಕೆ-ಟಿ.ಎಂ. ಸಿದ್ದಾರಾಧ್ಯ ಇವರ ಜಮೀನು, ಪಶ್ಚಿಮಕ್ಕೆ-ದಾವಣಗೆರೆ ನೀಲಪ್ಪ ವಗೈರೆ ಇವರ ಜಮೀನು, ಉತ್ತರಕ್ಕೆ-ಕರೂರು ತಳವಾರ ಸಿದ್ದಪ್ಪ ವಗೈರೆ ಇವರ ಜಮೀನು, ದಕ್ಷಿಣಕ್ಕೆ -ಗ್ಯಾಂಗಿನ ಹನುಮಂತಪ್ಪ, ಬಸವರಾಜಪ್ಪ ಇವರ ಜಮೀನು, ಈ ಮಧ್ಯದ ಸೊತ್ತು. 2) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ರಿ.ಸ.ನಂ. 88/1ರಲ್ಲಿರುವ ವಿಸ್ತೀರ್ಣ5-ಎಕರೆ,00-ಗುಂಟೆ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ಟಿ. ಎಂ. ಸಿದ್ದಾರಾಧ್ಯ ಇವರ ಜಮೀನು, ಪಶ್ಚಿಮಕ್ಕೆ : ದಾವಣಗೆರೆ ನೀಲಪ್ಪ ಇವರ ಜಮೀನು ಉತ್ತರಕ್ಕೆ ಸೈಯದ್ ಸಬ್ದುಲ್ ರಶೀದ್ ಸಾಬ್ ಇವರ ಜಮೀನು, ದಕ್ಷಿಣಕ್ಕೆ : ಸೈಯದ್ ಇಸ್ಮಾಯಿಲ್ ಸಾಬ್ ಇವರ ಜಮೀನು ಈ ಮಧ್ಯದ ಸೊತ್ತು 3) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕರೂರು ಗ್ರಾಮದ ರಿ.ಸ.ನಂ. 31/2ಎ ಇದರ ವಿಸ್ತೀರ್ಣ 2-ಎಕರೆ, 28-ಗುಂಟೆ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಪೂರ್ವಕ್ಕೆ;ಗಫರ್ ಸಾಬ್ ಮತ್ತು ಕ್ಯಾತಪ್ಪ ಇವರ ಜಮೀನುಗಳು, ಪಶ್ಚಿಮಕ್ಕೆ : ತಳವಾರ ಸಿದ್ದಪ್ಪ ಇವರ ಜಮೀನು, ಉತ್ತರಕ್ಕೆ : ಯರಗುಂಟೆ ಕಲ್ಯಾಣಪ್ಪ ಇವರ ಜಮೀನು, ದಕ್ಷಿಣಕ್ಕೆ ತಳವಾರ ಸಣ್ಣಪ್ಪ ಇವರ ಜಮೀನು. ಈ ಮಧ್ಯದ ಸೊತ್ತು. 4) ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ದೊಡ್ಡಬಾತಿ ಗ್ರಾಮದ ರಿ.ಸ.ನಂ. 99/ಪಿ 6 ರಲ್ಲಿರುವ ಇದರ ವಿಸ್ತೀರ್ಣ ಎಕರೆ-4, ಗುಂಟೆ ಇಲ್ಲ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ರೈಲ್ವೆ ರಸ್ತೆ, ಪಶ್ಚಿಮಕ್ಕೆ : ಹುಚ್ಚ ಸಿದ್ದಪ್ಪನವರ ಜಮೀನು, ಉತ್ತರಕ್ಕೆ : ಸರ್ವೆ ನಂ. 100ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 98ರ ಜಮೀನು, ದಕ್ಷಿಣ: ಸರ್ವೆ ನಂ. 98ರ ಜಮೀನು, ಇದರ ಮಧ್ಯದ ಸೊತ್ತು.**

ಸಹಿ/-
**ಹೆಚ್.ಎಸ್. ವೆಂಕಟೇಶ್**
ಕಕ್ಷಿದಾರರ ಪರ ವಕೀಲರು
**ಮೊ: 97432 46660**

**ಸಹಿ/- ಗಣೇಶಪ್ಪ ಬ್ಯಾಡಗಿ ಬಿನ್ ಲೇಟ್ ಶಿವಪ್ಪ ಬ್ಯಾಡಗಿ,**
**ವೀರೇಂದ್ರ ಕುಮಾರ್ ಬ್ಯಾಡಗಿ**
**ಬಿನ್ ಲೇಟ್ ಪುಟ್ಟಪ್ಪ ಬ್ಯಾಡಗಿ ಕಕ್ಷಿದಾರರು**

# ಶಿಷ್ಯರ ಪ್ರೀತಿ ನಮ್ಮನ್ನು ಕಟ್ಟಿ ಹಾಕಿದೆ

ಕೊಂಡಜ್ಜಿಯಲ್ಲಿನ ಗುರುವಂದನಾ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ನರಸಿಂಗಪ್ಪ



ಹರಿಹರ, ಜೂ.13- ಗುರು ಮತ್ತು ಶಿಷ್ಯರ ನಡುವೆ ಅವಿನಾಭಾವ ಸಂಬಂಧವಿದೆ, ಇದಕ್ಕೆ ಪೂರಕ ವೆಂಬಂತೆ ಹಳೆಯ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸುವ ಮೂಲಕ ಮತ್ತೊಂದು ವಿಶೇಷ ಅರ್ಥ ನೀಡುತ್ತಿರುವುದು ಸಂತಸದ ವಿಷಯ ಎಂದು ನಿವೃತ್ತ ಶಿಕ್ಷಕಿ ಶಕುಂತಲಮ್ಮ ಹೇಳಿದರು.

ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಇತ್ತೀಚೆಗೆ ನಡೆದ ಗುರು ವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಗುರುಗಳ ಮೇಲಿನ ಗೌರವ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿಯಾದರೇ, ಇನ್ನೊಂದೆಡೆ ಕೆಲವು ಹಳೆಯ ವಿದ್ಯಾರ್ಥಿಗಳು ಶಿಕ್ಷಣ ನೀಡಿದ ಗುರುಗಳನ್ನು ನೆನೆದು ಗುರುವಂದನಾ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಶಿಕ್ಷಕರ ಗೌರವವನ್ನು ಹೆಚ್ಚಿಸುವಂತೆ ಮಾಡಿದೆ ಎಂದರು.

ನಿವೃತ್ತ ಶಿಕ್ಷಕ ಭರಮಪ್ಪ ಮಾತನಾಡಿ, ಬಾಲ್ಯದಲ್ಲಿ ವಿದ್ಯೆಯನ್ನು ಕಲಿಸಿಕೊಟ್ಟಂತಹ ಗುರುಗಳಿಗೆ ಗೌರವ ಯುತವಾಗಿ ಸನ್ಮಾನಿಸಿ, ಆಶೀರ್ವಾದ ಪಡೆಯುವ ಬಯಕೆಯಿಂದ ಬೇರೆ ಬೇರೆ ಊರುಗಳಲ್ಲಿ ಈಗ ನಿವೃತ್ತಿ ಹೊಂದಿರುವ ಗುರುಗಳನ್ನು ಆಹ್ವಾನಿಸಿ, ಸನ್ಮಾನಿಸುವ ಶಿಷ್ಯರು ಉತ್ತಮ ಗುಣಗಳನ್ನು ಬೆಳೆಸಿಕೊಂಡಿದ್ದಾರೆ ಎಂದರು.

ಮತ್ತೋರ್ವ ನಿವೃತ್ತ ಶಿಕ್ಷಕ ನರಸಿಂಗಪ್ಪ ಮಾತನಾಡಿ, ಈ ದಿನ ನಮಗೆ ಸಿಕ್ಕ ಒಂದು ಸುವರ್ಣಾವಕಾಶ ನೀವುಗಳು ನಮಗೆ ತೋರಿಸುತ್ತಿರುವ ಈ ಪ್ರೀತಿಯ ಗೌರವ ನಮ್ಮನ್ನು ಕಟ್ಟಿ ಹಾಕಿದೆ, ನಮ್ಮ ಹಳೇ ನೆನಪುಗಳು ಮತ್ತೆ ಕಣ್ಣ ಮುಂದೆ ಬಂದಂತಾಗಿದೆ ಎಂದು ಭಾವುಕರಾಗಿ ನೆರೆದಿದ್ದಂತಹ ವಿದ್ಯಾರ್ಥಿಗಳನ್ನೂ ಸಹ ಭಾವುಕರನ್ನಾಗಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ಜಯಾನಂದ ಪೂಜಾರ್, ಶಂಕರಯ್ಯ, ನಾರಪ್ಪ, ಶೇಖರಪ್ಪ, ಚಂದ್ರುಶೇಖರ್, ಶಿಕ್ಷಕಿಯರಾದ ರಾಜೇಶ್ವರಿ, ಸಾಕಮ್ಮ ಸೇರಿದಂತೆ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾರಥಿಯಲ್ಲಿ ಜೆಡಿಎಸ್ ಮುಖಂಡರ ಮೆರವಣಿಗೆ



ಹರಿಹರ, ಜೂ. 13 - ಸಾರಥಿ ಗ್ರಾಮದಲ್ಲಿ ಜೆಡಿಎಸ್ ಪಕ್ಷದ ಮುಖಂಡರನ್ನು ಅದ್ಧೂರಿ ಮೆರವಣಿಗೆ ಮೂಲಕ ಸ್ವಾಗತಿಸಲಾಯಿತು.

ತಾಲ್ಲೂಕಿನ ಸಾರಥಿ ಗ್ರಾಮದಲ್ಲಿ ಜೆಡಿಎಸ್ ಪದಾಧಿಕಾರಿಗಳ ಪದಗ್ರಹಣ ಹಾಗೂ ವಿವಿಧ ಪಕ್ಷಗಳನ್ನು ತೊರೆದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ ಮತ್ತು ಪಕ್ಷ ಸಂಘಟನೆ ಸಾರ್ವಜನಿಕ ಬೃಹತ್ ಸಮಾವೇಶದ ಅಂಗವಾಗಿ ಗ್ರಾಮದಲ್ಲಿ ಬೃಹತ್ ಮೆರವಣಿಗೆ ಆಯೋಜಿಸಲಾಗಿತ್ತು.

ಆಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವುದರ ಮೂಲಕ ಮೆರವಣಿಗೆ ಆರಂಭವಾಯಿತು.

ತೆರೆದ ವಾಹನದಲ್ಲಿ ಮಾಜಿ ಸಚಿವ ಬಿ.ಬಿ. ನಭಿ ಮತ್ತು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹಾಗೂ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ ಸೇರಿದಂತೆ, ಮುಖಂಡರನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ಬಂದರು.

ನೂರಾರು ಮಹಿಳೆಯರಿಂದ ಕುಂಭವನ್ನು ತಲೆಯ ಮೇಲೆ ಹೊತ್ತು ಸಾಗಿದರು. ಮೆರವಣಿಗೆಯಲ್ಲಿ ಜೆಡಿಎಸ್ ಗ್ರಾಮಾಂತರ ಕಾರ್ಯಕರ್ತರು ಡೊಳ್ಳು ಸೇರಿದಂತೆ ವಿವಿಧ ವಾದ್ಯಗಳ ಬಡಿತಕ್ಕೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

## ಕತ್ತಲಗೆರೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಯೋಗ ಶಿಬಿರ



ಚನ್ನಗಿರಿ, ಜೂ. 13- ತಾಲ್ಲೂಕಿನ ಕತ್ತಲಗೆರೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯೋಗ ಶಿಬಿರ ನಡೆಯಿತು.ಶಿಬಿರದಲ್ಲಿ ಯೋಗ ಶಿಕ್ಷಕರಾದ ರತ್ನ ರಾಜು, ಸುಗುಣ, ಕೆ.ಬಿ. ಶಕುಂತಲಾ, ಶಾಲಾ ಶಿಕ್ಷಕರು, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಶಿಕ್ಷಣಕ್ಕೊಂದು ಸುಂದರ ಸೌಧ ನಿರ್ಮಿಸಿದ ಸಾಧಕ

ದಾವಣಗೆರೆ ತಾಲ್ಲೂಕಿನ ಸಣ್ಣ ಗ್ರಾಮವಾದ ಹಳೇಬಿಸಲೇರಿ ಗ್ರಾಮದ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಹಾಗೂ ಗ್ರಾಮಸ್ಥರಿಗೆ ಇಂದು ಸಂಭ್ರಮದ ದಿನ.

ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಕಟ್ಟಡಗಳಿಗಿಂತಲೂ ಸುಂದರವಾದ ಭವ್ಯವಾದ ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ಶಾಲಾ ಕಟ್ಟಡವು ದಿನಾಂಕ 14-06-2022ರ ಮಂಗಳವಾರ ಲೋಕಾರ್ಪಣೆಗೊಳ್ಳಲಿದೆ.

ಈ ಕಟ್ಟಡವು ಯಾವುದೇ ಸರ್ಕಾರಿ ಅನುದಾನ ಪಡೆಯದೇ ಒಂದು ಟ್ರಸ್ಟ್ ನ ಸಹಯೋಗದೊಂದಿಗೆ ಒಬ್ಬ ವ್ಯಕ್ತಿಯ ತನು ಮನ ಧನ ಸೇವೆಯೊಂದಿಗೆ ನಿರ್ಮಾಣವಾಗಿದೆ. ಈ ಟ್ರಸ್ಟ್ ಕೂಡ ಈ ವ್ಯಕ್ತಿಯೇ ಹುಟ್ಟುಹಾಕಿದ್ದು. ಗ್ರಾಮಸ್ಥರನ್ನು ಒಳಗೊಂಡ ಟ್ರಸ್ಟ್ ಕೂಡ ಸುಮ್ಮನೆ ಹುಟ್ಟಿ ಕೊಂಡಿದ್ದಲ್ಲ. ಎರಡೂವರೆ ವರ್ಷಗಳ ಹಿಂದೆ ನಮ್ಮ ಊರಿನವರೇ ಆದ ಈಗ ಬೆಂಗಳೂರಿನಲ್ಲಿ ಕುಂದೂರು ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯನ್ನು ಮುನ್ನಡೆಸುತ್ತಿರುವ ಕೆ.ವಿ. ಬಸವನಗೌಡ ಕುಂದೂರು ಅವರು ಗ್ರಾಮದಲ್ಲೊಂದು ಸುಂದರವಾದ ಸಮುದಾಯ ಭವನವನ್ನು ನಿರ್ಮಿಸಿದ್ದರು. ಅದರ ನಿರ್ವಹಣೆ ಹಾಗೂ ಮೇಲ್ವಿಚಾರಣೆಗೆಂದು ಹುಟ್ಟಿಕೊಂಡಿದ್ದೇ ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಟ್ರಸ್ಟ್.

ಮನುಷ್ಯ ಎಷ್ಟೇ ಎತ್ತರಕ್ಕೇರಿದರೂ ತನ್ನ ಮೂಲ ಬೇರನ್ನು ಮರೆಯಬಾರದು, ಹಾಗೊಂದು ವೇಳೆ ಮರೆತರೆ ಅದು ಆತ್ಮವಂಚನೆಯಾಗುತ್ತದೆ. ಆದರೆ ಬಸವನ ಗೌಡರದು ಮೂಲ ಬೇರನ್ನು ಮರೆಯದ ಮೂಲಾಧಾರ ಅಭಿವೃದ್ಧಿ ತತ್ವ.

ಬಸವನ ಗೌಡರು ದಿನಾಂಕ 24-4-1966 ರಲ್ಲಿ ಬಿ.ಕೆ. ವೀರಭದ್ರಪ್ಪ, ಶ್ರೀಮತಿ ಗೌರಮ್ಮ ದಂಪತಿಯ ಜೇಷ್ಠ ಸುಪುತ್ರರಾಗಿ ಹಳೇಬಿಸಲೇರಿಯ ಸಾಮಾನ್ಯ ಕೃಷಿಕ ಕುಟುಂಬದಲ್ಲಿ ಜನಿಸಿದರು. ಕೇವಲ ಒಂದು ಮತ್ತು ಎರಡನೇ ತರಗತಿಯನ್ನು ಮಾತ್ರ ಸ್ವಗ್ರಾಮದ ಶಾಲೆಯಲ್ಲಿ ಕಲಿತವರು, ನಂತರ ಮುಂದಿನ ಶಿಕ್ಷಣವನ್ನು ಹೊಳಲ್ಕೆರೆ ತಾಲ್ಲೂಕಿನ ದುಮ್ಮಿ ಹಾಗು ಮಂಗಳೂರು ಜಿಲ್ಲೆಯ ಅಳಿಕೆಯಲ್ಲಿ ಪೂರೈಸಿದರು. ಸಿವಿಲ್ ಇಂಜಿನಿಯರಿಂಗ್ ಪದವಿಯನ್ನು ದಾವಣಗೆರೆಯ ಬಾಪೂಜಿ ತಾಂತ್ರಿಕ ವಿದ್ಯಾಲಯದಲ್ಲಿ ಪಡೆದರು. ನಂತರ ಇವರು ಇನ್ನೊಬ್ಬರ ಬಳಿ ಉದ್ಯೋಗ ಬೇಡದೆ ತಮ್ಮದೇ ಆದ ಕುಂದೂರು ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯನ್ನು ಆರಂಭಿಸಿ ಹಲವಾರು ಜನರಿಗೆ ಉದ್ಯೋಗ ನೀಡಿ ಉದ್ಯೋಗದಾತರಾದರು, ಆದರೆ ಬೇರೆಯವರಂತೆ ತಮ್ಮ ಕಂಪನಿ ತಮ್ಮ ವ್ಯವಹಾರ ನೋಡಿಕೊಂಡು ತೃಪ್ತಿಯಿಂದ ಇರಲಿಲ್ಲ, ತಮ್ಮ ಹುಟ್ಟೂರಿಗೆ ಏನಾದರೂ ಮಾಡಬೇಕೆಂಬ ತುಡಿತ ಸದಾ ಅವರಲ್ಲಿ ತುಡಿಯುತ್ತಿತ್ತು. ಎಷ್ಟೇ ಬಿಡುವಿರದ ಕಾರ್ಯಚಟುವಟಿಕೆಯಿದ್ದು ಒತ್ತಡದಲ್ಲಿದ್ದರೂ ಸ್ವಗ್ರಾಮದ ಹಬ್ಬ ಜಾತ್ರೆ ಗ್ರಾಮಸ್ಥರ, ಸುಖ-ದುಃಖಗಳಲ್ಲಿ ಭಾಗಿಯಾಗಿ ನಿರಂತರವಾಗಿ ಊರಿನ ಸಂಪರ್ಕದಲ್ಲಿದ್ದಾರೆ

ಹಳೆ ಬಿಸಲೇರಿ ಯ ಪಕ್ಕದ ಗ್ರಾಮಗಳಾದ ಹೊಸ ಬಿಸಲೇರಿ ಹಾಗು ದುರ್ಗಾಂಬಿಕ ಕ್ಯಾಂಪಿನ ಸರ್ಕಾರಿ ಶಾಲಾ ಮಕ್ಕಳಿಗೆ ಅಗತ್ಯವಾಗಿ ಬೇಕಾದ ಕಲಿಕಾ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸುತ್ತಿದ್ದಾರೆ. ಪ್ರತಿವರ್ಷವೂ ತರಗತಿಗೆ ಅನುಗುಣವಾಗಿ ಅಗತ್ಯವಿರುವ ನೋಟ್ ಬುಕ್, ಜ್ಯಾಮಿಟ್ರಿ ಬಾಕ್ಸ್, ಪೆನ್, ಪೆನ್ಸಿಲ್ ಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ವಿತರಿಸುತ್ತಿದ್ದಾರೆ. ಕೇವಲ ಇಷ್ಟೇ ಸಾಲದು, ದೊಡ್ಡ ಪ್ರಮಾಣದಲ್ಲಿ ತಮ್ಮ ಹುಟ್ಟೂರಿಗೆ ಏನಾದರೂ ಕೊಡಬೇಕೆಂಬ ಆಕಾಂಕ್ಷೆಯೊಂದಿಗೆ ಪ್ರಾರಂಭಿಸಿದ್ದು ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಟ್ರಸ್ಟ್. ಒಂದು ಸುಂದರವಾದ, ಬೃಹತ್ತಾದ ಸಮುದಾಯ ಭವನವನ್ನು ನಿರ್ಮಿಸಿದರು. ಇದಲ್ಲದೇ, ಟ್ರಸ್ಟ್ ವತಿಯಿಂದ ಹಲವಾರು ಬಾರಿ ವೈದ್ಯಕೀಯ ಶಿಬಿರ, ನೇತ್ರ ತಪಾಸಣೆ, ನೇತ್ರ ಶಸ್ತ್ರಚಿಕಿತ್ಸೆ, ಅಗತ್ಯವಿರುವವರಿಗೆ ಕನ್ನಡಕ ವಿತರಣೆ ಮುಂತಾದ ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಸ್ವಗ್ರಾಮದ ಸರ್ಕಾರಿ ಶಾಲೆಯಲ್ಲಿ ಕೇವಲ ಎರಡು ವರ್ಷ ಮಾತ್ರ ಓದಿದ್ದರೂ, ಈ ಶಾಲೆಯ ಮೇಲೆ ವಿಶೇಷ ಪ್ರೀತಿ ಇಟ್ಟಿರುವ ಬಸವನಗೌಡ್ರು ಪ್ರತಿ ಸಲ ಊರಿಗೆ ಬಂದಾಗಲೂ ಗ್ರಾಮಸ್ಥರನ್ನು ಸೇರಿಸಿ ಶಿಥಿಲಗೊಂಡಿರುವ ಶಾಲಾ ಕಟ್ಟಡವನ್ನು ನವೀಕರಿಸಲು ಒತ್ತಾಯಿಸಿದರು. ಗ್ರಾಮಸ್ಥರು ಜನಪ್ರತಿನಿಧಿಗಳ ಹತ್ತಿರ ಅಲೆದಾಡಿದರೂ ಪ್ರಯೋಜನವಾಗಲಿಲ್ಲ ಎಂದು ಅವರೆದುರು ಅವರು ಬೇಸರ ವ್ಯಕ್ತಪಡಿಸಿದಾಗ, ಹುಟ್ಟಿಕೊಂಡಿದ್ದೇ ಶಾಲೆಯ ಮರು ನಿರ್ಮಾಣದ ಹಠ.

ಟ್ರಸ್ಟಿನ ಸಹಯೋಗದೊಂದಿಗೆ ತಾವೇ ಶಾಲೆಯ ಕಟ್ಟಡದ ಮರು ನಿರ್ಮಾಣ ಕಾರ್ಯ ಕೈಗೆತ್ತಿಕೊಂಡರು. ಕಟ್ಟಡವೆಂದರೆ ಬರೀ ಕಲ್ಲು, ಮರಳು, ಇಟ್ಟಿಗೆಯ ಕಟ್ಟಡವಲ್ಲ, ಶಾಲೆಗೆ ಬೇಕಾದ ಸಮಸ್ತ ಪರಿಕರಗಳನ್ನು ಅಣಿಗೊಳಿಸಿ ಕೊಟ್ಟಿದಾರೆ. ಯಾವ ಹಳ್ಳಿಯಲ್ಲಿ ಮಾತ್ರವಲ್ಲ ಯಾವುದೇ ಮಹಾನಗರದಲ್ಲಿರುವ ಶಾಲೆಗಳಲ್ಲೂ ಇಂತಹ ಸೌಲಭ್ಯಗಳನ್ನು ಕಾಣಲು ಸಾಧ್ಯವಿಲ್ಲ. ಇಂದಿನ ಸ್ಪರ್ಧಾತ್ಮಕ ಶಿಕ್ಷಣ ಯುಗದಲ್ಲಿ ಅಗತ್ಯವಾಗಿ ಬೇಕಾದಂತಹ ಎಲ್ಲಾ ಸೌಲಭ್ಯಗಳು ಇಲ್ಲಿವೆ ಈ ಕಟ್ಟಡದ ವೈವಿಧ್ಯ, ವಿನ್ಯಾಸ, ವೈಭವ ಯಾವ ಖಾಸಗಿ ಶಾಲಾ-ಕಾಲೇಜು ಕಟ್ಟಡಗಳನ್ನು ನಾಚಿಸುವಂತಿದೆ.

ಇದು ಸಾಲದೆಂಬಂತೆ ಗ್ರಾಮದಲ್ಲಿ ಶಿಥಿಲಗೊಂಡಿದ್ದ ದೇವಸ್ಥಾನಗಳನ್ನೂ ಕೂಡ ಜೀರ್ಣೋದ್ಧಾರ ಮಾಡುವ ಧಾರ್ಮಿಕ ಕಾರ್ಯವನ್ನು ಕೈಗೊಂಡಿದ್ದಾರೆ.

ಓದಿ ನಗರಗಳತ್ತ ಮುಖ ಮಾಡುವ ಇಂದಿನ ಯುವಜನತೆ, ತಮ್ಮ ಊರಿನ ನೆನಪನ್ನು ಮಾಡಿ ಕೊಳ್ಳುವುದಿಲ್ಲ. ಇಂಥವರ ಮಧ್ಯೆ ವಿಭಿನ್ನವಾಗಿ ನಿಲ್ಲುವ ಬಸವನಗೌಡರು ಸ್ವಗ್ರಾಮದ ಅಭಿವೃದ್ಧಿಗೆ ಕಂಕಣ ಕಟ್ಟಿ ನಿಂತಿರುವುದು ವಿಶೇಷ. ಇಂತಹ ಮಹತ್ವದ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಿರುವ ಬಸವನಗೌಡರಂತಹ ವ್ಯಕ್ತಿಗಳು ಪ್ರತಿ ಗ್ರಾಮಕ್ಕೆ ಒಬ್ಬರು ಸಿಗಲಿ, ಅವರಿಂದ ಅವರ ಗ್ರಾಮಗಳು ಅಭಿವೃದ್ಧಿಯಾಗಲಿ.

-ಎಂ. ಎಸ್. ಜಯಣ್ಣ, ಹಳೆ ಬಿಸಲೇರಿ,
ಅಧ್ಯಕ್ಷರು
ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ
ದಾವಣಗೆರೆ ತಾಲ್ಲೂಕು ಗ್ರಾಮಾಂತರ ಘಟಕ



ಹಳೆಬಿಸಲೇರಿ ಗ್ರಾಮದಲ್ಲಿ ಇಂದು ಶಾಲಾ ಕಟ್ಟಡ ಲೋಕಾರ್ಪಣೆ

# ಆರೋಗ್ಯವಂತನೇ ನಿಜವಾದ ಭಾಗ್ಯವಂತ



**ಪ್ರಕೃತಿ ಚಿಕಿತ್ಸಾ ತಜ್ಞ ವೈದ್ಯ ಡಾ. ಗಂಗಾಧರ ವರ್ಮ**

ದಾವಣಗೆರೆ, ಜೂ.13- ಆರೋಗ್ಯವಂತನಾದ ಮನುಷ್ಯನೇ ನಿಜವಾದ ಭಾಗ್ಯವಂತನು. ಆರೋಗ್ಯವಂತ ಸಮಾಜ ನಿರ್ಮಾಣದ ಕನಸು ಯೋಗದಿಂದ ಮಾತ್ರ ನನಸಾಗಲು ಸಾಧ್ಯ ಎಂದು ಪ್ರಕೃತಿ ಚಿಕಿತ್ಸಾ ತಜ್ಞ ವೈದ್ಯ ಡಾ. ಗಂಗಾಧರ ವರ್ಮ ನುಡಿದರು.

ನಗರದ ಶ್ರೀ ಅಮೃತೇಶ್ವರಿ ಅಷ್ಟಾಂಗ ಯೋಗ ಕೇಂದ್ರ, ಶ್ರೀ ಶಿರಡಿ ಸಾಯಿ ಯೋಗ ಕೇಂದ್ರ ಮತ್ತು ಭಾರತ ವಿಕಾಸ ಪರಿಷತ್ ಗೌತಮ ಶಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಆರೋಗ್ಯ ಭಾಗ್ಯಕ್ಕಿಂತ ಮಿಗಿಲಾದ ಭಾಗ್ಯವಿಲ್ಲ ವೆಂಬುದು ಅಕ್ಷರಶಃ ಸತ್ಯ. ಆರೋಗ್ಯವೆಂದರೆ ಕೇವಲ ರೋಗ ರಹಿತವಾಗಿರದೆ ದೈಹಿಕವಾಗಿ, ಮಾನಸಿಕವಾಗಿ, ಅಧ್ಯಾತ್ಮಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಸಮತೋಲನದಲ್ಲಿರುವುದು. ಈ ರೀತಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಯೋಗದ ಪಾತ್ರ ಅತಿ ಮಹತ್ವದ್ದು. ಯೋಗವು ಇಂದು ವಿಶ್ವಮಾನ್ಯವಾಗಿ ಜಾತಿ, ಮತ, ಧರ್ಮಗಳನ್ನು ಮೀರಿ ಬೆಳೆಯುತ್ತಿದೆ. ಎಲ್ಲಾ ಪಂಥದ ಜನರೂ ಒಂದಲ್ಲಾ ಒಂದು ಕಾರಣಕ್ಕಾಗಿ ಯೋಗದ ಮೊರೆ ಹೋಗುತ್ತಿದ್ದಾರೆ.

ಯೋಗವು ವಿಶ್ವದಾದ್ಯಂತ ಜನಪ್ರಿಯವಾಗುತ್ತಿರುವುದೇನೋ ನಿಜ. ಆದರೆ ಇದೇ ಸಂದರ್ಭದಲ್ಲಿ ಇದರ ಮೂಲ ಅಷ್ಟಾಂಗ ಯೋಗವನ್ನು ಅಳವಡಿಸಿಕೊಳ್ಳುವುದರ ಮೂಲಕ ಆರೋಗ್ಯವಂತರಾಗುವುದು ಮಾತ್ರವಲ್ಲದೆ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಮುಂದಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಾರತ ವಿಕಾಸ ಪರಿಷತ್ ಗೌತಮ ಶಾಖೆಯ ಅಧ್ಯಕ್ಷ ಡಾ. ಎಸ್. ಪ್ರಸಾದ್ ಬಂಗೇರ ವಹಿಸಿದ್ದರು. ಸಾಯಿ ಟ್ರಸ್ಟ್‌ನ ಎಸ್.ಆರ್ ಮಂಜುನಾಥ್, ಡಾ.ವಿಂಧ್ಯ ಗಂಗಾಧರ ವರ್ಮ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹೊಳೆಸಿರಿಗೆರೆ : ಪರಿಸರ ದಿನಾಚರಣೆ



ಮಲೇಬೆನ್ನೂರು, ಜೂ.13- ಹೊಳೆಸಿರಿಗೆರೆ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಸಸಿಗಳನ್ನು ನೆಡಲಾಯಿತು.

ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮಾತನಾಡಿದರು. ಯೋಜನೆಯ ಕೃಷಿ ಅಧಿಕಾರಿ ಗಂಗಾಧರ್, ಗ್ರಾಮದ ಮುಖಂಡ ಎಂ.ಜಿ. ಪರಮೇಶ್ವರ ಗೌಡ, ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಭಾಷಾ, ಹೊಳೆಸಿರಿಗೆರೆ ಮೇಲ್ವಿಚಾರಕಿ ನಂದಾ, ಒಕ್ಕೂಟದ ಅಧ್ಯಕ್ಷೆ ಯಶೋಧ ಹಾಗೂ ಇತರರು ಭಾಗವಹಿಸಿದ್ದರು.

# ಫಕೃದ್ದೀನ್‌ಗೆ ಪ್ರಶಸ್ತಿ ಪ್ರದಾನ



ದಾವಣಗೆರೆ, ಜೂ.13- ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ದಾವಣಗೆರೆ ಇಮೇಜ್ ಸಂಪಾದಕ ಎ. ಫಕೃದ್ದೀನ್ ಅವರಿಗೆ ವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಹಾಗೂ ವಿಶ್ವ ಕಲ್ಯಾಣ ಪರಿಸರ ಗ್ರಾಹಕ ಸಾಂಸ್ಕೃತಿಕ ಪರಿಷತ್ ವತಿಯಿಂದ 'ಕಾಯಕ ಯೋಗಿ ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪರಿಷತ್ತಿನ ಅಧ್ಯಕ್ಷ ರೇವಣ್ಣ ಬಳ್ಳಾರಿ, ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವಾಚಾರ್ಯ ಸ್ವಾಮೀಜಿ, ಕವಲೆತ್ತಿನ ವಿರಕ್ತ ಮಠದ ಮುಕ್ತಾಯಕ್ಕ, ಅಧ್ಯಾತ್ಮಿಕ ಚಿಂತಕಿ ಮೈಸೂರಿನ ಯೋಗಿನಿ ಅಕ್ಕಮಹಾದೇವಿ, ಬಸವರಾಜ ಹನುಮಲಿ, ಡಾ. ಎಸ್.ಎಚ್. ವಿನಯ್‌ಕುಮಾರ್, ಶ್ರೀಧರ್ ಪಟೇಲ್, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಸಾಹಿತಿ ಸಂಗನಾಳಮಠ, ಇಂದೂಧರ ನಿಶಾನಿಮಠ ಹಾಗೂ ಮತ್ತಿತರರಿದ್ದರು.


# ಮಾತಾ ಶಾಲೆಯಲ್ಲಿ ಅಕ್ಷರಭ್ಯಾಸ



ರಾಣೇಬೆನ್ನೂರು, ಜೂ.13-ಇಲ್ಲಿನ ಚೋಳಮರಡೇಶ್ವರ ನಗರದಲ್ಲಿರುವ ಮಾತಾ ಪಬ್ಲಿಕ್ ಶಾಲೆಯಲ್ಲಿ , ಶಾಲೆಗೆ ನೂತನವಾಗಿ ಎಲ್. ಕೆ. ಜಿ., ಯು .ಕೆ. ಜಿ. ಪ್ರವೇಶ ಪಡೆದ ಮಕ್ಕಳಿಗೆ ಕಲಿಕೆಯ ಪ್ರಥಮ ಹಂತವಾದ ತಟ್ಟೆಯಲ್ಲಿ ಅಕ್ಕಿಗಳ ಮೂಲಕ ಅಕ್ಷರಗಳನ್ನು ಬರೆಸುವ ಮೂಲಕ ಅಕ್ಷರಭ್ಯಾಸ ಕಾರ್ಯಕ್ರಮ ನಡೆಸಲಾಯಿತು.

ಶಾಲಾ ಉಪಾಧ್ಯಕ್ಷ ಕೆ. ಎಫ್. ಆನ್ವೇರಿ ಮಾತನಾಡಿ, ಈ ಕಾರ್ಯಕ್ರಮವು ಮಠ, ಮಾನ್ಯಗಳಲ್ಲಿ ಮಾತ್ರ ನಡೆಯುತ್ತಿದ್ದು, ಈಗ ನಮ್ಮ ಶಾಲೆಯಲ್ಲಿ ಇದನ್ನು ಆಯೋಜಿಸಿರುವುದು ಒಳ್ಳೆಯ ಕಾರ್ಯಕ್ರಮ ಎಂದು ತಿಳಿಸಿದರು. ಶಾಲಾ ಅಧ್ಯಕ್ಷ ಬಿ. ಹೆಚ್. ಮಡ್ಲೂರ, ಮುಖ್ಯೋಪಾಧ್ಯಾಯ ಚನಬಸಪ್ಪ ಎಸ್., ಸದಸ್ಯರಾದ ಲತಾ ಸಿ. ಎಸ್. ಹಾಗೂ ಶಿಕ್ಷಕರಾದ ಆಶಾ, ನಾಗೇಂದ್ರ ಮಡಿವಾಳರ, ಪುಷ್ಪಲತಾ, ಅನ್ನಪೂರ್ಣ ಕಂಬಳಿ, ಅನುಪಮ ರೇಖಾ ದಾವಲಬಿ, ಚೌಡಮ್ಮ, ಸವಿತಾ, ಪಾರಮ್ಮ ಚೆನ್ನಗಿರಿ ಉಪಸ್ಥಿತರಿದ್ದರು.

# ಶೆಣೈಗೆ ಯಕ್ಷಗಾನ ರಾಯಭಾರಿ ಪ್ರಶಸ್ತಿ



ದಾವಣಗೆರೆ, ಜೂ.13- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರೂ, ಹವ್ಯಾಸಿ ಯಕ್ಷಗಾನ ಕಲಾವಿದರೂ ಆದ ಸಾಲಿಗ್ರಾಮ ಗಣೇಶ್ ಶೆಣೈ ಅವರಿಗೆ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಕುಂಬಳೆಯಲ್ಲಿ ಈಚೆಗೆ ನಡೆದ ಯಕ್ಷಗಾನ ಸಮ್ಮೇಳನದಲ್ಲಿ ಕಣಿಪುರ ಯಕ್ಷಗಾನ ಮಾಸ ಪತ್ರಿಕೆಯ ಸಂಪಾದಕ ಚಂಬಲಿಕುಮಾರ್ ಅವರು 'ದಾವಣಗೆರೆ ಯಕ್ಷಗಾನ ರಾಯಭಾರಿ' ಬಿರುದಿನೊಂದಿಗೆ ಸನ್ಮಾನಿಸಿ, ಗೌರವಿಸಿದರು.


**ಕಾರ್ನರ್ ಸೈಟ್‌ಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ 40 ಅಡಿ ರೋಡ್‌ಗೆ ಪೂರ್ವ-ದಕ್ಷಿಣ 40x62, ಹೊಸ ಬನಶಂಕರಿ ಬಡಾವಣೆ ಪೂರ್ವ-ಉತ್ತರ 40 ಅಡಿ ರೋಡ್‌ಗೆ 38x50, ಪೂರ್ವ-ದಕ್ಷಿಣ (60 ಅಡಿ ರೋಡ್‌ಗೆ 34x50)ಬಾಲಾಜಿ ಸರ್ಕಲ್ Semi commercial 30x50
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹಮಂಡಳಿಯಲ್ಲಿ 40x60 East, 40x60 South, 40x50 North, 30x50 East, 30x40, 30x40 East ಅಕ್ಕ-ಪಕ್ಕ, 30x50 West
ಐನಳ್ಳಿ ಚನ್ನ ಬಸಪ್ಪ ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ 30x60 ಪಶ್ಚಿಮ 40 ಅಡಿ ರಸ್ತೆಗೆ ಹೊಂದಿಕೊಂಡಿದೆ. ವಿದ್ಯಾನಗರ ಹಳೇ ಪೊಲೀಸ್ ಠಾಣೆ ರಸ್ತೆಯಲ್ಲಿ 40x60 ದಕ್ಷಿಣ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪೂರ್ವ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
Accountant-2, Salary 10k
Staff -2, Salary 8k-10k
Contact With Bio Data
Experience Preferred
Samruddhi Ply & Hardware
Opp Uday Bazar, Near TVS Showroom, Davangere
76760 55550

**1) Office Work (Ladies Only)**
**2) Delivery Boys**
**3) BDM / BDE**
89700 66666, 99645 46667

**ಬಾಡಿಗೆಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
3 ಬೆಡ್ ರೂಂ ಇಂಡಿಪೆಂಡೆಂಟ್ ಹೌಸ್, 2 ಬೆಡ್ ರೂಂ ಇಂಡಿಪೆಂಡೆಂಟ್ ಹೌಸ್, 2 ಬೆಡ್ ರೂಂ ಗ್ರೌಂಡ್ ಫ್ಲೋರ್ ಮನೆ
ದಕ್ಷಿತ್ ಏಜೆಂಟ್
77955 06795

**WANTED**
OFFICE boy with SSLC PUC qualification and having Two wheeler driving licence.
Call: 96118 66449

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಸೈಟು ಮಾರಾಟಕ್ಕಿದೆ**
ರಶ್ಮಿ ಹಾಸ್ಟೆಲ್ ಪಕ್ಕದ ದೈವಜ್ಞ ಕಾಲೋನಿಯಲ್ಲಿ ಸೈಟು ಮಾರಾಟಕ್ಕಿದೆ. ಪೂರ್ವ 30×50, ಪಶ್ಚಿಮ 30×40
ಆಸಕ್ತರು ಸಂಪರ್ಕಿಸಿ :
90080 93045, 73489 07416

**ಮನೆ ಬಾಡಿಗೆಗೆ ಇದೆ**
ಜಯನಗರದಲ್ಲಿ ಸಾಯಿ ದೇವಸ್ಥಾನ ಹಿಂಭಾಗ ಕೆಳಗಿನ ಮನೆ (ನೆಲ ಮಹಡಿ) ಡಬಲ್ ಬೆಡ್ ರೂಮ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
97311 60922 80730 12526
(ಸಸ್ಯಹಾರಿಗಳಿಗೆ ಮಾತ್ರ)

**ಮನೆ ಬಾಡಿಗೆಗಿದೆ**
S.S ಬಡಾವಣೆ, ಬಿ-ಬ್ಲಾಕ್, 4ನೇ ಮುಖ್ಯರಸ್ತೆ, 10 A ಅಡ್ಡರಸ್ತೆಯಲ್ಲಿರುವ 2796/372 "ಬಸವ ಸದನ" ದಲ್ಲಿ ಮೂರು ಬೆಡ್ ರೂಂ, ಬೋರ್ ಹಾಗೂ ಕಾರ್ಪೋರೇಷನ್ ನಲ್ಲಿ ನೀರಿನ ವ್ಯವಸ್ಥೆ ಇರುವ ಮನೆ ಬಾಡಿಗೆಗಿದೆ.(ಸಸ್ಯಹಾರಿಗಳಿಗೆ ಮಾತ್ರ)
98442 01186, 86601 88834

**ಬೇಕಾಗಿದ್ದಾರೆ**
ಮ್ಯಾಂಗೋ ಹೋಟೆಲ್ಸ್ ನವೀನ ನ ಹೌಸ್ ಕೀಪಿಂಗ್ ವಿಭಾಗದಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು
(Age below 30)
Mob : 76187 94617/19

**S.K Suppliers**
ಉತ್ತಮವಾದ ಮರುಳು, ಜಲ್ಲಿ ಮತ್ತು ಎಮ್ ಸ್ಯಾಂಡ್ ದೊರೆಯುತ್ತದೆ. ಸಂಪರ್ಕಿಸಿ :
Krishna
81058 49150, 88677 71135

**SHOPS FOR RENT**
(With Wash Room Facility)
N.R. ROAD, DAVANGERE.
94483 69523

**Commerce Insight Coaching Institute**
2nd PUC Accountancy and Statistics tutions.
SALIM MALIK A R
74110 75584
4th main 9th cross SS layout B Block Behind Sha Apartment Davanagere.

**ಮಾರಾಟಕ್ಕೆ ಇದೆ**
ಉಪಯೋಗಿಸಿರುವ ಹಳೆಯ ಪವರ್ ಟಿಲ್ಲರ್ ಮಾರಾಟಕ್ಕಿದೆ.
ಸಂಪರ್ಕಿಸಿರಿ :
95918 12040

**WORK FROM HOME**
Male/Female, Full / Part time Hand writing work. Small Letter to Capital Letter
Earn Per month 12,000/- to 15,000/-
89718 52431

**ಶಿಕ್ಷಕರ ಗಮನಕ್ಕೆ**
2nd Extra Income ಬೇಕೆ..?
Modern Education Systemನ್ನು ನಿಮ್ಮ ವಿದ್ಯಾರ್ಥಿಗಳಿಗೆ ತಲುಪಿಸಿ ಕಂಪನಿಯ ರಾಯಲ್ಟಿ ಪಡೆಯಿರಿ.
98868 96574, 86602 35013

**WANTED**
LADY TEACHERS
Qualification : Any Degree (Maths / Science / Engg or MBA / MCA Candidate)
Watchmen -02, ಬಸ್ ಕ್ಲೀನರ್ - 02
9742518228, 94492 66133

**ಸೈಟ್ ಮಾರಾಟಕ್ಕಿದೆ**
ಶಾಮನೂರ್ ಶಿವಶಂಕರಪ್ಪ ಬಡಾವಣೆ "ಬಿ "ಬ್ಲಾಕ್ ರಾಘವೇಂದ್ರ ಕಾಲೇಜು ಹಿಂಭಾಗದ ಡೋರ್ ನಂಬರ್ : 5680/2 - ಇದರ ಅಳತೆ ಪಶ್ಚಿಮ - ಪೂರ್ವ 40×60 ರ ಸೈಟ್ ಮಾರಾಟಕ್ಕಿದ್ದು, ಆಸಕ್ತರು ಕೆಳಕಂಡ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬಹುದು.
9448727388, 91139 62446

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಅನುಭವ ಇರುವ/ ಇಲ್ಲದವರಾದರೂ ಸಂಪರ್ಕಿಸಬಹುದು.
ಬುನಿಯಾದ್
ಅಶೋಕ ರೋಡ್, ದಾವಣಗೆರೆ.
96200 95520

**ಬಾಡಿಗೆಗೆ / ಲೀಸ್‌ಗೆ ಇದೆ**
For Rent with Furniture and Accessories
Carz World
#1801, Opp. Eidgah, P.B. Road, Davangere.
99860 78013

**SITE FOR SALE**
D.No: F-14, (30X50) west 1st Cross, Teachers colony (Beside Uttam Badavane) ಆವರಗೆರೆ.
Contact Directly Owner
99867 35636

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.Sc, B.Ed, BA, B.Ed, M.Sc, MA, NTC.
Address Little Champs Gurukulam, Near HKR Circle, College Road, Nittuvalli, Davanagere.
90609 06039, 98443 32559

**ಶಿಕ್ಷಕಿಯರು ಬೇಕಾಗಿದ್ದಾರೆ**
2ನೇ ತರಗತಿ ಪಾಠ ಮಾಡಲು ಮಹಿಳಾ ಶಿಕ್ಷಕಿಯರು ಬೇಕಾಗಿದ್ದಾರೆ.
Dr ರಾಜೇಶ್ವರಿ.ಜಿ Consultatnt OBG, S.S Hospital. ವಿಳಾಸ : 1783/A3, 12th Cross Siddavirappa Layout.
Ph : 95384 62028

**ಬೇಕಾಗಿದ್ದಾರೆ**
ನಗರದ ಎಸ್.ಎಸ್. ಬಡಾವಣೆ 'ಬಿ' ಮನೆಯೊಂದರಲ್ಲಿ Veg & Non Veg ಅಡುಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಬೆಳಿಗ್ಗೆ 7.45ಕ್ಕೆ ಬರತಕ್ಕದ್ದು, ಅನುಭವವುಳ್ಳವರಿಗೆ ಆದ್ಯತೆ ಕೊಡಲಾಗುವುದು ಸಂಪರ್ಕಿಸಿ :
98862 11600, 99459 88776

**ಮನೆ ಬಾಡಿಗೆಗಿದೆ**
ಶ್ರೀ ಕೃಷ್ಣ ಶಿವಾಂಶ್ 2BHK ಅಟ್ಯಾಚ್ಡ್ ಬಾತ್ ರೂಂ ಪೂರ್ವ ಬಾಗಿಲು, ಗ್ರೌಂಡ್ ಫ್ಲೋರ್ ನ್ಯೂ ಬನಶಂಕರಿ ಬಡಾವಣೆ, ದಾವಣಗೆರೆ.
86607 37365, 99863 71175

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಪ್ರವೇಶ ಪ್ರಕಟಣೆ**
ಶಾಲೆ ಬಿಟ್ಟಿದ್ದಿರಾ ? 7,8,9,10 SSLC ಫಾಸ್/ಫೇಲ್ ನೇರ ಪರೀಕ್ಷೆ ಕೆಲವೇ ಸೀಟುಗಳು ಮಾತ್ರ, 10ನೇ ತರಗತಿ ಪಾಸಾದವರಿಗೆ. 11 PUC ನೇರ ಪರೀಕ್ಷೆ Science, Arts, Commerce ದೂರ ಶಿಕ್ಷಣದಲ್ಲಿ NTC, BA, B.Com, B.Sc, BBA,BSW, MA, M.Com, M.Sc, MBA, MCA, MSW, B.Ed, P.hd ಮಹಮ್ಮದನ್ NTC ಕಾಲೇಜ್ 1ನೇ ಮೇನ್, 12 ನೇ ಕ್ರಾಸ್ ಕೆ.ಟಿ.ಜೆ ನಗರ ದಾವಣಗೆರೆ.
93411 19195, 99800 32237

**ಹೆಸರು ಸ್ಪಷ್ಟೀಕರಣ**
ನಾನು ಶ್ರೀಮತಿ ಶಿಲ್ಪಶ್ರೀ ಆರ್ ಕೋಂ. ದಯಾನಂದ ಬಿ.ಸಿ. 27 ವರ್ಷ, # 212, 3ನೇ ಕ್ರಾಸ್, ಜೆ.ಹೆಚ್. ಪಟೇಲ್ ಬಡಾವಣೆ, 'ಡಿ' ಬ್ಲಾಕ್, ದಾವಣಗೆರೆ. 577004ರ ವಾಸಿಯಾದ ನಾನು ನನ್ನ D.L ಸಂಖ್ಯೆ KA1720210010454 ರಲ್ಲಿ ನನ್ನ ಪತಿಯ ಹೆಸರು ದಯಾನಂದ ಬಿ.ಸಿ (DAYANANDA B.C) ಎನ್ನುವುದರ ಬದಲು ದಯಾನದ ಬಿ.ಸಿ (DAYANADA B.C) ಎಂದು ತಪ್ಪಾಗಿ ನಮೂದಾಗಿದೆ ಆದ್ದರಿಂದ ದಿನಾಂಕ. 13.06.2022 ರಂದು ನೋಟರಿ, ದಾವಣಗೆರೆಯವರ ಸಮಕ್ಷಮ ನನ್ನ ಪತಿಯ ಹೆಸರು ದಯಾನಂದ ಬಿ.ಸಿ (DAYANANDA B.C ) ಎಂಬುವುದು ಸರಿ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/- ಶ್ರೀಮತಿ ಶಿಲ್ಪಶ್ರೀ ಆರ್

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

## ಮಹಿಳಾ ಸಮಾಜ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ.85 ರಷ್ಟು ಫಲಿತಾಂಶ



ದಾವಣಗೆರೆ, ಜೂ.13 - ನಗರದ ಮಹಿಳಾ ಸಮಾಜ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.85 ರಷ್ಟು ಫಲಿತಾಂಶ ಲಭಿಸಿದೆ. ಕೊಟ್ರಯ್ಯ ಎಂ.ಸಿ. 607 (ಶೇ.97.12) ಅಂಕ, ಮನುಶ್ರೀ ಜೆ. 571 (ಶೇ.91.36) ಅಂಕ ಹಾಗೂ ಚೇತನ್ ಸಿ.ಹೆಚ್. 544 (ಶೇ. 87.04) ಅಂಕಗಳನ್ನು ಪಡೆದು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರಥಮ ದರ್ಜೆಯಲ್ಲಿ 21 ಹಾಗೂ ದ್ವಿತೀಯ ದರ್ಜೆಯಲ್ಲಿ 11 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

## ದೊಡ್ಡಬಾತಿ ಗ್ರಾಮ ಪಂಚಾಯ್ತಿ ನೂತನ ಅಧ್ಯಕ್ಷರಿಗೆ ಅಭಿನಂದನೆ



ದಾವಣಗೆರೆ, ಜೂ. 13 - ದೊಡ್ಡಬಾತಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ವೀರೇಶ್ ದೊಗ್ಗಳ್ಳಿ ಅವರನ್ನು ಮಾಜಿ ದೂಡ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾ ರೈತಮೋರ್ಚಾ ಅಧ್ಯಕ್ಷ ನಾಗರಾಜ್ ಲೋಕಿಕೆರೆ, ಜಿಲ್ಲಾ ಮಾಜಿ ಪ್ರಧಾನ ಕಾರ್ಯದರ್ಶಿ ಧನಂಜಯ್ ಕಡ್ಲೇಬಾಳ್, ಬೇತೂರು ಗ್ರಾಮ ಪಂಚಾಯತ್ ಅಧ್ಯಕ್ಷ ವಿರುಪಾಕ್ಷಣ್ಣ ಮತ್ತು ಇತರರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಕಡ್ಲೇಬಾಳ್ ಹಳೆಬಾತಿ ಗ್ರಾಮ ಪಂಚಾಯತ್ ಸದಸ್ಯರು ಬಗರ್ ಹುಕ್ಕುಂ ಸದಸ್ಯ ದೊಡ್ಡಬಾತಿ ರವಿ, ಬೇತೂರು ನಾಗಣ್ಣ, ಪ್ರಸನ್ನಕುಮಾರ್, ಮಹೇಶ್, ಬಿಜೆಪಿ ಉಪಾಧ್ಯಕ್ಷ ಬಾತಿ ಸಿದ್ದೇಶ್, ಯುವ ಮುಖಂಡ ಕರಾಟೆ ತಿಮ್ಮೇಶ್, ನಿಂಗಪ್ಪ ಎಲ್.ಎಚ್ ಹನುಮಂತಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ನಾಯಕ ವಿದ್ಯಾರ್ಥಿ ನಿಲಯದಿಂದ ಅಬ್ದುಲ್ ಜಬ್ಬಾರ್ ಅವರಿಗೆ ಸನ್ಮಾನ



ದಾವಣಗೆರೆ, ಜೂ. 13- ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಅಬ್ದುಲ್ ಜಬ್ಬಾರ್ ಅವರನ್ನು ನಗರದ ನಾಯಕ ವಿದ್ಯಾರ್ಥಿ ನಿಲಯದಿಂದ ಸನ್ಮಾನಿಸಲಾಯಿತು.

ನಾಯಕ ವಿದ್ಯಾರ್ಥಿ ನಿಲಯ ಮತ್ತು ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ, ಜಗಳೂರು ತಾಲ್ಲೂಕು ಚಿಕ್ಕಮ್ಮನ ಹಟ್ಟಿ ದೇವೇಂದ್ರಪ್ಪ, ನಿಲಯದ ನಿರ್ದೇಶಕರುಗಳಾದ ಎನ್.ಎಂ. ಆಂಜನೇಯ ಗುರೂಜಿ, ಗುಮ್ಮನೂರು ಶಂಭಣ್ಣ, ಕಡತಿ ತಿಪ್ಪೇಶ್, ಜಗಳೂರು ಮಂಜಣ್ಣ, ಬಿ.ವಿ. ಕರಬಸಪ್ಪ, ಪ್ರಮೋದ್ ಕುಮಾರ್, ಎಂ.ಬಿ. ಕೇರಿ ನರಸಿಂಹಯ್ಯ, ಆರ್ ಬಸಣ್ಣ, ಸುಭಾಷ್ ಚಂದ್ರ, ಫುನಿ ತಾಹೇರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಿಂಚನ ಪಬ್ಲಿಕ್ ಶಾಲೆಯಲ್ಲಿ ಇಂದು ಸ್ವಯಂ ಪ್ರೇರಿತ ರಕ್ತದಾನ ಶಿಬಿರ

ದಾವಣಗೆರೆ, ಜೂ.13- ನಗರದ ನಿಂಚನ ಪಬ್ಲಿಕ್ ಶಾಲೆಯಲ್ಲಿ ನಾಳೆ ದಿನಾಂಕ 14ರ ಮಂಗಳವಾರ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಶಾಲೆಯ ಶೈಕ್ಷಣಿಕ ನಿರ್ದೇಶಕರಾದ ಡಾ. ಶೃತಿ ಇನಾಂದಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ದಾವಣಗೆರೆ ಬ್ಲಡ್ ಸೆಂಟರ್ ಸಹಯೋಗದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಉದ್ಘಾಟಿಸಲಿದ್ದಾರೆ. ಎಸ್ಪಿ. ಸಿ.ಬಿ. ರಿಷ್ಯಂತ್, ಪೊಲೀಸ್ ನಿರೀಕ್ಷಕ ತ್ಯಾಗರಾಜ್, ಡಿಡಿಪಿಐ ತಿಪ್ಪೇಶಪ್ಪ, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಸದಸ್ಯರಾದ ವೀರೇಶ್, ಉಮಾಪ್ರಕಾಶ್ ಹಾಗು ಇತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

**ಎಸ್ಸೆಸ್ಸೆಲ್ಸಿಯಲ್ಲಿ 624 ಅಂಕ:** ಶಾಲೆಯ ವಿದ್ಯಾರ್ಥಿ ಡಿ.ಹೆಚ್.ಹರ್ಷವರ್ಧನ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 624 ಅಂಕ ಪಡೆದಿದ್ದಾನೆ. ಆರಂಭದ ಫಲಿತಾಂಶದಲ್ಲಿ ಹರ್ಷವರ್ಧನನಿಗೆ 620 ಅಂಕಗಳು ಬಂದಿದ್ದವು. ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಾಗ 624 ಅಂಕಗಳು ದೊರೆತಿವೆ ಎಂದವರು ಹೇಳಿದರು.

ಒಟ್ಟಾರೆ ಶಾಲೆಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ.98ರಷ್ಟು ಫಲಿತಾಂಶ ದೊರೆತಿದೆ. ಸಮಿತಾ ಡಿ. 604 ಅಂಕ, ದೀಪಾ ಪಿ.602 ಅಂಕ ಗಳಿಸಿದ್ದರೆ, 14 ವಿದ್ಯಾರ್ಥಿಗಳು ಪ್ರಥಮ ದರ್ಜೆ, 25 ಪ್ರಥಮ ಸ್ಥಾನ ಹಾಗೂ 6 ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪ್ರಾಂಶುಪಾಲರಾದ ನಸ್ರೀನ್ ಖಾನ್, ಉಪ ಪ್ರಾಂಶುಪಾಲರಾದ ಎಂ.ಎಸ್. ರೂಪ ಉಪಸ್ಥಿತರಿದ್ದರು.

### ಓದುಗರ ಪತ್ರ

## ಹಳೇಬಾತಿಗೆ ಸಾರಿಗೆ ಸೌಲಭ್ಯ ಒದಗಿಸಿ

ಮಾನ್ಯರೇ,

ದಾವಣಗೆರೆ ನಗರದಿಂದ ಕೇವಲ 7-8 ಕಿಲೋ ಮೀಟರ್ ದೂರದಲ್ಲಿರುವ ಹಳೇಬಾತಿ ಗ್ರಾಮವು ಸಾರಿಗೆ ಸೌಲಭ್ಯದಿಂದ ವಂಚಿತವಾಗಿರುವ ಗ್ರಾಮ ಎಂದರೆ ತಪ್ಪಾಗಲಾರದು.

ಹಳೇಬಾತಿ ಆಂಜನೇಯ ಸ್ವಾಮಿ ದೇವಸ್ಥಾನ ಎಂದರೆ ತುಂಬಾ ಪ್ರಸಿದ್ಧವಾದ ದೇವಸ್ಥಾನವಾಗಿದ್ದು, ಪ್ರತಿ ಶನಿವಾರ ಈ ದೇವಸ್ಥಾನಕ್ಕೆ ಜಿಲ್ಲೆಯ ನಾನಾ ಕಡೆಯಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ.

ದೊಡ್ಡಬಾತಿ ಗ್ರಾಮದವರೆಗೆ ಬಸ್ಸಿನಲ್ಲಿ ಬಂದು ಅಲ್ಲಿಂದ ಮೂರು ಕಿಲೋಮೀಟರ್ ಹಳೇಬಾತಿ ಗ್ರಾಮಕ್ಕೆ ನಡೆದುಕೊಂಡು ಬಂದು ದೇವರ ದರ್ಶನ ಪಡೆಯುತ್ತಿರುವುದು ನೋಡಿದರೆ, ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಈ ಗ್ರಾಮಕ್ಕೆ ಸಾರಿಗೆ ಸೌಲಭ್ಯ ಕಲ್ಪಿಸಲಾಗದಷ್ಟು ದುಸ್ತರವಾಗಿದೆಯೇ ? ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡುತ್ತಿದೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿಯವರು, ಹಳೇಬಾತಿ ಆಂಜನೇಯ ಸ್ವಾಮಿಯ ಪರಮ ಭಕ್ತರಾಗಿದ್ದು, ಸ್ವತಃ ಅವರೇ ಈ ವಿಷಯವನ್ನು ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತಿಳಿಸಿದ್ದು, ಗ್ರಾಮದ ಜನರು, ಕೆಲಸಕ್ಕಾಗಿ ನಗರಕ್ಕೆ ಬರುವ ಉದ್ಯೋಗಸ್ಥರು ಹಾಗೂ ವಿದ್ಯಾರ್ಥಿಗಳು, ಬೀಳಗಿ ಅವರ ಕೃಪೆಯಿಂದಲಾದರೂ ತಮ್ಮ ಗ್ರಾಮಕ್ಕೆ ಸಾರಿಗೆ ಸೌಲಭ್ಯ ದೊರೆಯಬಹುದೇನೋ ಎಂಬ ನಿರೀಕ್ಷೆಯಲ್ಲಿದ್ದಾರೆ.

-ಕೆ.ಎಲ್.ಹರೀಶ್ ಬಸಾಪುರ

# ವಿಶ್ವ ರಕ್ತದಾನಿಗಳ ದಿನಾಚರಣೆ



ವಿಶ್ವ ರಕ್ತದಾನಿಗಳ ದಿನಾಚರಣೆಯನ್ನು ಜೂನ್ 14 ರಂದು ಆಚರಿಸಲಾಗುತ್ತದೆ. ಕಾರಣ ಕಾರ್ಲ್ ಲ್ಯಾಂಡ್ ಸ್ಟೀನರ್‌ರವರ ಜನ್ಮ ದಿನಾಚರಣೆಯ ಪ್ರಯುಕ್ತ ಪ್ರತೀ ವರ್ಷ ಈ ದಿನದಂದು ವಿಶ್ವದಾದ್ಯಂತ ಎಲ್ಲಾ ಸರ್ಕಾರ ಮತ್ತು ಸರ್ಕಾರೇತರ ರಕ್ತ ನಿಧಿ ಕೇಂದ್ರಗಳಲ್ಲಿ ಆಚರಿಸಲಾಗುತ್ತದೆ.

ಕಾರ್ಲ್ ಲ್ಯಾಂಡ್ ಸ್ಟೀನರ್‌ರವರು ರಕ್ತ ಮತ್ತು ರಕ್ತದ ಗಂಪುಗಳ ಬಗ್ಗೆ ಸಂಶೋಧಿಸಿದರು. ಅವರ ಹುಟ್ಟು ಹಬ್ಬದ ದಿನವಾದ ಜೂನ್ 14 ರಂದು ವಿಶ್ವ ರಕ್ತ ದಾನಿಗಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ.

ರಕ್ತವು ನಮ್ಮ ರಕ್ತನಾಳಗಳಲ್ಲಿ ಹರಿದಾಡುವ ಕೆಂಪು ಬಣ್ಣದ ದ್ರವ. ರಕ್ತವು ಮುಖ್ಯವಾಗಿ ದೇಹಕ್ಕೆ ಸಂದೇಶ ರವಾನಿಸುವ ವ್ಯವಸ್ಥೆಯಾಗಿ ಕೆಲಸ ಮಾಡುತ್ತದೆ ಮತ್ತು ಪ್ರಮುಖವಾಗಿ ಸೋಂಕಿನಿಂದ ದೇಹವನ್ನು ರಕ್ಷಿಸುತ್ತದೆ. ರಕ್ತಕ್ಕೆ ಬೇರೆ ಪರ್ಯಾಯವಿಲ್ಲ. ಇದನ್ನು ಕೃತಕವಾಗಿ ಮಾಡಲು ಅಥವಾ ತಯಾರಿಸಲು ಸಾಧ್ಯವಿಲ್ಲ. ರಕ್ತಕ್ಕೆ ಬೇರೆ ಪರ್ಯಾಯವಿಲ್ಲ. ಆದ್ದರಿಂದ ಇಂದಿನವರೆಗೂ ರಕ್ತಕ್ಕೆ ಬದಲಿ ಸಂಯೋಜನೆಯನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಕೃತಕ ರಕ್ತ ಇರುವುದಿಲ್ಲ ನಮ್ಮ ಶರೀರ ಮಾತ್ರ ರಕ್ತವನ್ನು ಉತ್ಪಾದಿಸಬಲ್ಲದು ಮತ್ತು ಪೂರಕ ರಕ್ತವನ್ನು ರಕ್ತ ನಿಧಿಗಳಲ್ಲಿ ಕಾಯ್ದಿಡುವುದು ಸೂಕ್ತ ಮಾರ್ಗವಾಗಿದೆ.

ರಕ್ತದಾನ ಜೀವ ಉಳಿಸುತ್ತದೆ. ಇದು 'ಅತ್ಯುನ್ನತ' ಕ್ರಿಯೆ. ನಿಮಗೆ ರಕ್ತ ಬೇಕಾದಾಗ, ಯಾರಾದರೂ ನಿಮಗೆ ರಕ್ತ ದಾನ ಮಾಡಿದಲ್ಲಿ, ನೀವು ಸಹ ಬೇರೊಬ್ಬರಿಗೆ ರಕ್ತದಾನ ಮಾಡುವುದು ನಿಮ್ಮ ಕರ್ತವ್ಯವಾಗಿದೆ.

ನಮ್ಮ ಶರೀರವು 5000 ಮಿಲಿ ಲೀಟರ್ ರಕ್ತವನ್ನು ಹೊಂದಿದೆ ಮತ್ತು 350 ಮಿಲಿ ಲೀಟರ್ ರಕ್ತವನ್ನು ಮಾತ್ರ ರಕ್ತದಾನದ ಸಮಯದಲ್ಲಿ ಪಡೆದುಕೊಳ್ಳಲಾಗುತ್ತದೆ. ಹೀಗೆ ದಾನ ಮಾಡಿದ ರಕ್ತವನ್ನು, ನಿಯಮಿತ ವಾದ ಆಹಾರವನ್ನು ಸೇವಿಸುವುದ ರಿಂದ ಶರೀರವು ಮತ್ತೆ ಕೆಲವೇ ವಾರಗಳಲ್ಲಿ ಉತ್ಪಾದಿಸಿಕೊಳ್ಳುತ್ತದೆ.

ಪುರುಷರು ಒಮ್ಮೆ ರಕ್ತದಾನ ಮಾಡಿದ ನಂತರ ಮೂರು ತಿಂಗಳ ಅಂತರದಲ್ಲಿ ರಕ್ತ ದಾನ ಮಾಡಬಹುದು ಮತ್ತು ಮಹಿಳೆಯರು ನಾಲ್ಕು ತಿಂಗಳ ನಂತರ ರಕ್ತದಾನ ಮಾಡಬಹುದು. ಯಾರು ಹೆಚ್.ಐ.ವಿ. ಹೆಪಟೈಟಿಸ್ ಪಿ.ಸಿ.ವಿ.ಡಿ ಅಥವಾ ಇತರೆ ರೋಗಗಳಿಂದ ಬಳಲುತ್ತಿರುವರೋ ಅಂತಹ ವ್ಯಕ್ತಿಯ ರಕ್ತವನ್ನು ರಕ್ತದಾನದ ವೇಳೆ ಪಡೆಯಲಾಗುವುದಿಲ್ಲ.

ನೀವು 18 ರಿಂದ 65 ವರ್ಷ ವಯಸ್ಸಿನವರಾಗಿರಬೇಕು. ನಿಮ್ಮ ತೂಕ 50 ಕೆ.ಜಿ. ಅಥವಾ ಅದಕ್ಕಿಂತ ಹೆಚ್ಚಿನ ತೂಕವಿರಬೇಕು. ನಿಮ್ಮ ರಕ್ತದಲ್ಲಿನ ಹಿಮೋಗ್ಲೋಬಿನ್ ಅಂಶವು ಕನಿಷ್ಠ ಶೇ. 12.5 ಇರಬೇಕು. ಮಲೇರಿಯಾ, ಟೈಫಾಯ್ಡ್ ಅಥವಾ ಇತರೆ ಹರಡುವಂತಹ ರೋಗಗಳು ಇಲ್ಲವಾದಲ್ಲಿ ಮಾತ್ರ ರಕ್ತದಾನ ಮಾಡಬಹುದು. ಇತ್ತೀಚೆಗೆ ಯಾವುದಾದರೂ ಸೋಂಕಿನಿಂದ ಬಳಲುತ್ತಿದ್ದು ರೋಗ ನಿರೋಧಕ ಔಷಧಗಳನ್ನು ಬಳಸುತ್ತಿದ್ದಲ್ಲಿ ಅಥವಾ ನಾಲ್ಕು ವಾರಗಳಲ್ಲಿ ಯಾವುದಾದರೂ ಸೋಂಕು ನಿವಾರಕ ಚುಚ್ಚುಮದ್ದು ಹಾಕಿಸಿಕೊಂಡಿದ್ದಲ್ಲಿ ಅಥವಾ ಹೃದಯ ರೋಗ, ಹೈಪರ್ ಟೆನ್ಷನ್, ಮೂರ್ಛೆ ರೋಗ, ಡಯಾಬಿಟಿಸ್, ಕ್ಯಾನ್ಸರ್, ಕ್ರೊನಿಕ್ ಕಿಡ್ನಿ ಅಥವಾ ಲಿವರ್ ಡಿಸೀಸ್, ರಕ್ತ ಸೋರುವಿಕೆ, ಗುಪ್ತರೋಗ ಮುಂತಾದ ರೋಗಗಳಿಂದ ಬಳಲುತ್ತಿದ್ದಲ್ಲಿ ರಕ್ತದಾನ ಮಾಡುವಂತಿಲ್ಲ. ಕಳೆದ 6 ತಿಂಗಳಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದಲ್ಲಿ, ಕಳೆದ 6 ತಿಂಗಳಲ್ಲಿ ಗರ್ಭಪಾತವಾಗಿದ್ದಲ್ಲಿ ಅಥವಾ ಗರ್ಭವತಿಯಾಗಿದ್ದಲ್ಲಿ/ಕಳೆದ ಒಂದು ವರ್ಷದಿಂದ ಹಾಲುಣಿಸುತ್ತಿದ್ದಲ್ಲಿ ಅಥವಾ ಕಳೆದ ಬಾರಿ ರಕ್ತದಾನ ಮಾಡುವಾಗ ಮೂರ್ಛೆ ಹೋಗಿದ್ದಲ್ಲಿ ಅಥವಾ ನಿಯಮಿತ ವಾಗಿ ರಕ್ತ ಉತ್ಪನ್ನಗಳ ಚಿಕಿತ್ಸೆಗೆ ಒಳಗಾಗಿದ್ದಲ್ಲಿ ಅಥವಾ ಒಬ್ಬರು ಉಪಯೋಗಿಸಿದ ಸೂಜಿಯನ್ನು ಬಳಸುವುದು/ಮಾದಕ ವಸ್ತುಗಳನ್ನು ಉಪಯೋಗಿಸುವ ಹವ್ಯಾಸದವರಾಗಿದ್ದಲ್ಲಿ ಅಥವಾ ವಾಣಿಜ್ಯ ಲೈಂಗಿಕ ಕಾರ್ಯಕರ್ತೆಯರಾಗಿದ್ದಲ್ಲಿ/ ಹೆಚ್.ಐ.ವಿ/ಏಡ್ಸ್ ಪಾಸಿಟಿವ್ ಆಗಿದ್ದಲ್ಲಿ, ರಕ್ತದಾನ ಮಾಡುವಂತಿಲ್ಲ.

**-ಡಾ|| ಸುರೇಶ್ ಹನಗವಾಡಿ,**
ಅಧ್ಯಕ್ಷರು
ಕರ್ನಾಟಕ ಹಿಮೊಫಿಲಿಯಾ ಸೊಸೈಟಿ,
ದಾವಣಗೆರೆ ಹಾಗೂ
ಪ್ರಾಧ್ಯಾಪಕರು ಪೆಥಾಲಜಿ ವಿಭಾಗ,
ಜ.ಜ.ಮು. ವೈದ್ಯಕೀಯ ಕಾಲೇಜು
ದಾವಣಗೆರೆ.

## ಭರವಸೆ ಮರೆತ ಮೋದಿ ಬಂಡವಾಳ ಶಾಹಿಗಳ ಋಣ ತೀರಿಸುತ್ತಿದ್ದಾರೆ

ದಾವಣಗೆರೆ, ಜು.13- ಅಧಿಕಾರಕ್ಕೆ ಬರುವ ಮುನ್ನ ಜನತೆಗೆ ಭರವಸೆಗಳ ಮಳೆಯನ್ನೇ ಸುರಿಸಿದ್ದ ನರೇಂದ್ರ ಮೋದಿ, ಇದೀಗ ಅದನ್ನೆಲ್ಲಾ ಮರೆತು ಬಂಡವಾಳ ಶಾಹಿಗಳ ಋಣ ತೀರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ರಾಜಕೀಯ ಎದುರಾಳಿಗಳನ್ನು ಸೈದ್ಧಾಂತಿಕವಾಗಿ ಎದುರಿಸಲಾಗದೇ ಐಟಿ, ಇಡಿ ಹಾಗೂ ಸಿಬಿಐ ನಂತಹ ಸಾಂವಿಧಾನಕ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಜಿ.ಎಸ್. ಮಂಜುನಾಥ ಗಡಿಗುಡಾಳ್, ಕೆ.ಎಂ. ಮಂಜುನಾಥ್, ಎಂ.ಕೆ. ಲಿಯಾಖತ್ ಅಲಿ, ಡಿ.ಶಿವಕುಮಾರ್, ಫಾರುಕ್ ಮುಬಾರಕ್ ಉಪಸ್ಥಿತರಿದ್ದರು.

## ಹಳೇ ಬಿಸಲೇರಿಯಲ್ಲಿ ಇಂದು ನೂತನ ಶಾಲಾ ಕಟ್ಟಡ ಹಸ್ತಾಂತರ ಸಮಾರಂಭ

ದಾವಣಗೆರೆ ತಾಲ್ಲೂಕು ಹಳೇ ಬಿಸಲೇರಿಯ ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಟ್ರಸ್ಟ್ ಹಾಗೂ ಕುಂದೂರು ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (ಬೆಂಗಳೂರು) ಇವರ ವತಿಯಿಂದ ದಾನಿಗಳಾದ ಕುಂದೂರು ಮುರಿಗೆಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನೂತನ ಶಾಲೆಯ ಕಟ್ಟಡದ ಹಸ್ತಾಂತರ ಸಮಾರಂಭ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ.

ಶಾಲಾ ಕಟ್ಟಡವನ್ನು ಸಚಿವ ಬಿ.ಸಿ. ನಾಗೇಶ್ ಉದ್ಘಾಟಿಸುವರು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ತೇಜಸ್ವಿ ಸೂರ್ಯ, ಎಸ್.ಎ. ರವೀಂದ್ರನಾಥ್, ಪ್ರೊ. ಕೆ. ಸಿದ್ದಪ್ಪ, ಬಿ.ಸಿ. ಉಮಾಪತಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಮಹಾಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್, ಡಾ. ಎ. ಚೆನ್ನಪ್ಪ, ಜೆ.ಆರ್. ತಿಪ್ಪೇಶಪ್ಪ, ಎಚ್.ಕೆ. ಲಿಂಗರಾಜು, ಬಸವನಗೌಡ ಕೋಟೂರು, ಎನ್.ಜೆ. ಆನಂದ್, ಎಂ. ನಿರಂಜನಮೂರ್ತಿ, ಶ್ರೀಮತಿ ಪುಷ್ಪಲತಾ, ಕೆ.ಜಿ. ಶಿವಶಂಕರ್, ಚೌಡಪ್ಪ, ಎ.ಕೆ. ಆನಂದಪ್ಪ, ಶ್ರೀಮತಿ ಅಶ್ವಿನಿ, ಶ್ರೀಮತಿ ಚಂದ್ರಕಲಾ ಆಗಮಿಸುವರು.

## ವಿದ್ಯಾರ್ಥಿನಿಯರೊಂದಿಗೆ ಸ್ಟೆಪ್ಸ್

**(1ನೇ ಪುಟದಿಂದ)** ಅವರು ಸಂಗೀತ ನೀಡಿರುವ ಹಾಡುಗಳು ಈಗಾಗಲೇ ಜನಮನ ಗೆದ್ದಿವೆ ಎಂದರು.

10 ಕೋಟಿ ರೂ. ವೆಚ್ಚದ ಚಿತ್ರದ ಕ್ಲೈಮಾಕ್ಸ್ ಸಿನಿಮಾದ ಜೀವವಾಗಿದೆ. ಹಾಡುಗಳೂ ವಿಭಿನ್ನವಾಗಿವೆ. ಬೆಂಗಳೂರು, ಕೊಡಚಾದ್ರಿ, ಉಡುಪಿ, ರಾಜಸ್ಥಾನ ಸೇರಿದಂತೆ ಹಲವೆಡೆ ಚಿತ್ರೀಕರಣ ಮಾಡಲಾಗಿದೆ ಎಂದರು. ಚಿತ್ರದ ನಾಯಕಿಯಾಗಿ ಆಕಾಂಕ್ಷಾ, ವಾಸುದೇವ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಂತರ ಚಿತ್ರತಂಡವು ವಿವಿಧ ಕಾಲೇಜುಗಳಿಗೆ ತೆರಳಿ ಚಿತ್ರದ ಪ್ರಮೋಷನ್ ನಡೆಸಿತು. ನಾಯಕ ನಟ-ನಟಿಯನ್ನು ನೋಡಲು ವಿದ್ಯಾರ್ಥಿಗಳು ಮುಗಿ ಬೀಳುತ್ತಿದ್ದರು.

ವಿಕ್ರಮ ಹಾಗೂ ಆಕಾಂಕ್ಷ ಚಿತ್ರದ ಹಾಡಿಗೆ ಸ್ಟೆಪ್ ಹಾಕಿದರು. ಡೈಲಾಗ್ ಹೇಳಿ ಯುವ ಪಡೆಯ ಶಿಳ್ಳೆ, ಚಪ್ಪಾಳೆಗೆ ಪಾತ್ರರಾದರು.

## ನಗರದಲ್ಲಿ ಇಂದು ರಕ್ತದಾನ ಶಿಬಿರ

ಡಾ. ಸಿ.ವಿ.ರಾಮನ್ ಎಜುಕೇಶನಲ್ ಅಡ್ಮಿನಿಸ್ಟ್ರೇಷನ್ ಅಂಡ್ ನೆಟ್‌ವರ್ಕ್ ಸೈನ್ಸಸ್ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವು ಬೆಳಿಗ್ಗೆ 11 ಕ್ಕೆ ಡಾ.ಸಿ.ವಿ. ರಾಮನ್ ಕಾಲೇಜಿನಲ್ಲಿ ನಡೆಯಲಿದೆ. ಕಾಲೇಜಿನ ಪ್ರಾಚಾರ್ಯ ಎನ್.ಸಿ. ಪ್ರಶಾಂತ್, ಸಂಸ್ಥೆಯ ಆಡಳಿತಾಧಿಕಾರಿ ಡಾ. ಎಸ್. ಶಿವಯ್ಯ, ಎಸ್. ಎಸ್. ಅರುಣ್ ಕುಮಾರ್, ಟಿ. ಎಸ್. ಸಮೀರುದ್ದಿನ್, ಎಸ್.ಪಿ. ಮಾರುತಿ ಮತ್ತಿತರರು ಉಪಸ್ಥಿತರಿರುವರು.

## ಪಶ್ಚಿಮ ಶಿಕ್ಷಕರ ಚುನಾವಣೆ; ರಾಣೇಬೆನ್ನೂರಿನಲ್ಲಿ ಶೇ.83.96 ಮತದಾನ

ರಾಣೇಬೆನ್ನೂರು, ಜೂ. 13- ಹಾವೇರಿ, ಗದಗ, ಧಾರವಾಡ ಹಾಗೂ ಕಾರವಾರ ಜಿಲ್ಲೆಗಳನ್ನೊಳಗೊಂಡ ಪಶ್ಚಿಮ ಶಿಕ್ಷಕರ ಕ್ಷೇತ್ರದ ಚುನಾವಣೆ ಮತದಾನ ಇಂದು ಶಾಂತವಾಗಿ ನಡೆದಿದ್ದು, ರಾಣೇಬೆ ನ್ನೂರು ತಾಲ್ಲೂಕಿನಲ್ಲಿ ಶೇಕಡಾ 83.96 ರಷ್ಟು ಶಿಕ್ಷಕರು ಮತ ಚಲಾಯಿಸಿದರು.

ರಾಣೇಬೆನ್ನೂರು, ಹನುಮನಮಟ್ಟಿ, ಹೊನ್ನತ್ತಿ, ಕುಮಾರಪಟ್ಟಂ, ತುಮ್ಮಿನಕಟ್ಟಿ, ಸುಣಕಲ್ಲುಬಿದರಿ, ಚಳಗೇರಿ, ಮೆಡ್ಲೇರಿ ಮತ್ತು ಇಟಗಿ ಒಟ್ಟು 9 ಮತಗಟ್ಟೆಗಳಲ್ಲಿ 771 ಪುರುಷ 421 ಮಹಿಳಾ ಮತದಾರರಿದ್ದು 1192 ರಷ್ಟು ಮತ ಚಲಾವಣೆ ನಡೆದಿದೆ. ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಪರವಾಗಿ ಶಾಸಕ ಅರುಣಕುಮಾರ ಪೂಜಾರ ಪ್ರಚಾರ ನಡೆಸಿದ್ದು, ಎಲ್ಲ ಮತಗಟ್ಟೆಗಳಿಗೆ ಸಂಚರಿಸಿ, ಮಾಹಿತಿ ಪಡೆದುಕೊಂಡರು. ಅದರಂತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಬಸವರಾಜ ಗುರಿಕಾರ ಪರವಾಗಿ ಪ್ರಚಾರ ಮಾಡಿದ ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಎಲ್ಲ ಮತಗಟ್ಟೆಗಳಿಗೆ ಸಂಚರಿಸಿ ಮಾಹಿತಿ ಪಡೆದುಕೊಂಡರು.

## ಹೊಸ ಶಿಕ್ಷಣ ನೀತಿ ಕುರಿತು ನಗರದಲ್ಲಿಂದು ಕಾರ್ಯಾಗಾರ

ಅರ್ಥಶಾಸ್ತ್ರ ವೇದಿಕೆಯಿಂದ ಹೊಸ ಶಿಕ್ಷಣ ನೀತಿ (ಎನ್‌ಇಪಿ) ಕಾರ್ಯಾಗಾರವು ಎ.ವಿ.ಕೆ ಮಹಿಳಾ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ಬಿ.ಪಿ ಕುಮಾರ್ ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಸಿ ಹೆಚ್. ಮುರಿಗೇಂದ್ರಪ್ಪ ನಡೆಸಿಕೊಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರೊ. ಸುಚಿತ್ರ, ಪ್ರೊ. ಭೀಮಣ್ಣ ಸುಣಗಾರ, ಪ್ರೊ. ಷಣ್ಮುಖ ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ. ಕೆ. ಬಿ ರಂಗಪ್ಪ, ಪ್ರೊ. ಹುಚ್ಚೇಗೌಡ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಪ್ರೊ.ಬೋರಯ್ಯ, ಪ್ರೊ. ಪ್ರವೀಣ್ ಕುಮಾರ್, ಪ್ರೊ. ಮಂಜಣ್ಣ, ಪ್ರೊ. ಕಾಡಜ್ಜಿ ಶಿವಪ್ಪ, ಪ್ರೊ. ಶಾಂತಕುಮಾರಿ ಉಪಸ್ಥಿತರಿರುವರು.

## ನಗರಕ್ಕೆ ಇಂದು ಸಚಿವ ನಾಗೇಶ್

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಬಿ.ಸಿ ನಾಗೇಶ್ ಇಂದು ಬೆಳಿಗ್ಗೆ 10.40ಕ್ಕೆ ಹಳೇ ಬಿಸಲೇರಿಯಲ್ಲಿನ ಕುಂದೂರು ಮುರಿಗೆಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಶಾಲಾ ಕಟ್ಟಡದ ಹಸ್ತಾಂತರ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 3ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿರುವ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು.

## ಜಗಳೂರು ತಾ.ಗೆ ಇಂದು ಎಸಿಬಿ

ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಉಪಾಧೀಕ್ಷಕರು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಜಗಳೂರು ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದುಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ದೂರವಾಣಿ : 08192-236600, 9480806284 ಅನ್ನು ಸಂಪರ್ಕಿಸಬಹುದೆಂದು ಎಸಿಬಿ ಪೊಲೀಸ್ ಠಾಣೆಯ ಡಿವೈಎಸ್‌ಪಿ ಆರ್.ಮಂಜುನಾಥ ತಿಳಿಸಿದ್ದಾರೆ.

## ಮಾಯಕೊಂಡ ಶಾಸಕರ ಕಾರ್ಯವೈಖರಿ ವಿರೋಧಿಸಿ ಬೂತ್ ಅಧ್ಯಕ್ಷರ ರಾಜೀನಾಮೆ



ಮಾಯಕೊಂಡ, ಜೂ.13 - ಶಾಸಕ ಪ್ರೊ. ಎನ್. ಲಿಂಗಪ್ಪ ಅವರ ಕಾರ್ಯವೈಖರಿ ಬಗ್ಗೆ ಬಾಡ ಗ್ರಾಮ ನಂತರ ಸೋಮವಾರ ಹೆಮ್ಮನ ಬೇತೂರು ಗ್ರಾಮದಲ್ಲಿ ಬೂತ್ ಅಧ್ಯಕ್ಷರಿಂದ ವಿರೋಧ ವ್ಯಕ್ತವಾಗಿದೆ.

ಕೇಂದ್ರ, ರಾಜ್ಯ ಸರ್ಕಾರಗಳು ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಜಿಲ್ಲಾ ರೈತ ಬಿಜೆಪಿ ಮೋರ್ಚಾ ತಂಡ ಗ್ರಾಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಗ್ರಾಮದ ಬೂತ್ ಅಧ್ಯಕ್ಷ ಎಚ್.ಆರ್. ಶಿವಕುಮಾರ್ ರಾಜೀನಾಮೆ ನೀಡುವ ಮೂಲಕ ತಮ್ಮ ಶಾಸಕರ ಕಾರ್ಯವೈಖರಿ ತೃಪ್ತಿಕರವಾಗಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್ ಅವರಿಗೆ, ಪಕ್ಷ ನೀಡಿದ್ದ ಬೂತ್ ಪದನಾಮ ಫಲಕ ಹಿಂದಿರುಗಿಸಿ ರಾಜೀನಾಮೆ ನೀಡಿದರು. ರಾಜೀನಾಮೆ ವಾಪಸ್ ಪಡೆಯುಂತೆ ಲೋಕಿಕೆರೆ ನಾಗರಾಜ್ ಮನವೊಲಿಸಲು ಯತ್ನಿಸಿದರೂ, ಶಿವಕುಮಾರ್ ಒಪ್ಪದೇ ನಾಮಫಲಕ ಹಿಂದಿರುಗಿಸಿದರು.

ಶಾಸಕರಿಗೆ ಬಿಜೆಪಿ ಪ್ರಮುಖ ಕಾರ್ಯಕರ್ತರ ಪರಿಚಯವೇ ಇಲ್ಲ. ಗ್ರಾಮಕ್ಕೆ ಯಾವುದೇ ಅಭಿವೃದ್ಧಿ ಕೆಲಸ ಆಗಿಲ್ಲ ಎಂದು ಅವರು ದೂರಿದರು.

ಮಾಯಕೊಂಡ ಮಂಡಲ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ, ಕೋಶಾಧ್ಯಕ್ಷ ಅಣಜಿ ಗುಡ್ಡಪ್ಪ, ಆಲೂರು ಮೂಗಪ್ಪ, ಮೆಳ್ಳೇಕಟ್ಟೆ ಹನುಮಂತಪ್ಪ, ಕಂದನಕೋವಿ ಹನುಮಂತಪ್ಪ, ಹೆಮ್ಮನಬೇತೂರು ಗ್ರಾಪಂ ಸದಸ್ಯ ದುರುಗಪ್ಪ, ಕಿತ್ತೂರಿನ ಕರಿಯಪ್ಪ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿಶ್ವ ಸ್ವಯಂಪ್ರೇರಿತ ರಕ್ತದಾನಿಗಳ ದಿನಾಚರಣೆ

ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ರಕ್ತಭಂಡಾರ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಮತ್ತು ಜಿಲ್ಲೆಯ ವಿವಿಧ ರಕ್ತ ಕೇಂದ್ರಗಳು, ಜಿಲ್ಲಾ ಆರ್. ಆರ್.ಸಿ ಕಾಲೇಜುಗಳು ಹಾಗೂ ವಿವಿಧ ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಸ್ವಯಂ ಪ್ರೇರಿತ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮ ಇಂದು ನಡೆಯಲಿದೆ.

ಬೆಳಿಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಚನ್ನಪ್ಪ ಅವರು ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡುವರು.

ನಂತರ 10.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಚನ್ನಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಾಗರಾಜ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಅಧೀಕ್ಷಕ ಡಾ. ಎಸ್. ಷಣ್ಮುಖಪ್ಪ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಅಧೀಕ್ಷಕರಾದ ಡಾ. ಭಾರತಿ ಎಸ್.ಎನ್, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ನಿವಾಸಿ ವೈದ್ಯಾಧಿಕಾರಿ ಡಾ. ಮಂಜುನಾಥ ಪಾಟೀಲ್, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಪ್ರಭಾರ ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ. ನಟರಾಜ ಕೆ, ರಕ್ತ ಭಂಡಾರ, ಚಿಗಟೇರಿ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಡಿ.ಹೆಚ್. ಗೀತಾ ಮತ್ತು ಇತರರು ಭಾಗವಹಿಸುವರು.

## ನಗರದಲ್ಲಿ ಇಂದು ಸಾಮೂಹಿಕ ಶ್ರೀ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಕಾರ ಹುಣ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜಾ ಕಾರ್ಯಕ್ರಮವು ಶ್ರೀ ಜಯದೇವ ಮುರುಘ ರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ|| ಸುಶೀಲಮ್ಮ ತಿಳಿಸಿದ್ದಾರೆ ಬಿ. ಸತ್ಯನಾರಾಯಣಮೂರ್ತಿ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

# ಒತ್ತಡ ಜೀವನ ಕ್ರಮವೇ ಆರೋಗ್ಯ ಸಮಸ್ಯೆಗೆ ಕಾರಣ

## ಕುಂದುವಾಡದಲ್ಲಿನ ಉಚಿತ ಹೃದಯ ತಪಾಸಣೆ ಶಿಬಿರದಲ್ಲಿ ವಿ.ಕೆ.ಟಿಕಾರೆ



ದಾವಣಗೆರೆ, ಜೂ.13- ಇಂದಿನ ಒತ್ತಡದ ಜೀವನದಲ್ಲಿ ಆರೋಗ್ಯದ ಅನಿರೀಕ್ಷಿತ ಸಮಸ್ಯೆಗಳು ಎದುರಾಗುತ್ತವೆ. ಈ ನಿಟ್ಟಿನಲ್ಲಿ ಜನತೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸದಾ ಜಾಗರೂಕರಾಗಿ ಇರಬೇಕೆಂದು ಭಾವಸಾರ ಇಂಡಿಯಾ ವಿಜನ್ ದಾವಣಗೆರೆ ಜಿಲ್ಲಾಧ್ಯಕ್ಷ ವಿಜಯ್‌ಕುಮಾರ್ ಕೆ.ಟಿಕಾರೆ ಅಭಿಪ್ರಾಯ ಪಟ್ಟರು.


ನಗರದ ಎಸ್.ಎಸ್.ನಾರಾಯಣ ಹಾರ್ಟ್ ಸೆಂಟರ್ ಹಾಗೂ ಭಾವಸಾರ ವಿಜನ್ ಇಂಡಿಯಾ, ಹಳೇ ಕುಂದುವಾಡದ ಶ್ರೀ ಸದ್ಗುರು ಕರಿಬಸವೇಶ್ವರ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ ಹಳೇ ಕುಂದುವಾಡದಲ್ಲಿ ಮೊನ್ನೆ ಆಯೋಜಿಸಲಾಗಿದ್ದ ಉಚಿತ ಹೃದಯ ತಪಾಸಣೆ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ದುಬಾರಿಯ ಇಂದಿನ ದಿನಮಾನಗಳಲ್ಲಿ ವೈದ್ಯಕೀಯ ವೆಚ್ಚಗಳನ್ನು ಭರಿಸುವುದು ಮಧ್ಯಮ ಮತ್ತು ಬಡವರ್ಗ ಹಾಗೂ ಗ್ರಾಮೀಣ ಜನರಿಗೆ ಕಷ್ಟದ ಕೆಲಸ. ಈ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಉಚಿತ ಹೃದಯ ರೋಗ ತಪಾಸಣೆ ಶಿಬಿರ ನಡೆಸುತ್ತಿರುವುದಾಗಿ ಅವರು ಹೇಳಿದರು.

ಜಿಲ್ಲಾ ಕಾರ್ಯಕಾರಿ ಮಂಡಳಿ ಸದಸ್ಯ ನಿಂಗೋಜಿರಾವ್ ಗುಜ್ಜಾರ್ ಮಾತನಾಡಿ, ಉದ್ಯೋಗದಲ್ಲಿನ ನಿರಂತರ ಒತ್ತಡ, ಅನಾರೋಗ್ಯಕರ ಆಹಾರ ಕ್ರಮಗಳು ಮತ್ತು ಅಸಮರ್ಪಕ ವಿಶ್ರಾಂತಿಯು ಆರೋಗ್ಯದ ತೊಂದರೆಗೆ ಕಾರಣವಾಗಿವೆ. ಇಂತಹ ಅನಿರೀಕ್ಷಿತ ಸಮಸ್ಯೆಗಳಿಗೆ ನಮ್ಮ ಜೀವನ ಶೈಲಿಯೇ ಮೂಲ ಕಾರಣ. ಈಗಲಾದರೂ ನಾವುಗಳು ಎಚ್ಚೆತ್ತುಕೊಂಡು ನಮ್ಮ ಆಹಾರ ಕ್ರಮ, ಜೀವನ ಶೈಲಿ ಬದಲಾಯಿಸಿ ಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯದರ್ಶಿ ನರೇಂದ್ರ ಕುಮಾರ್ ಟಿಕಾರೆ, ನಾಗವೇಣಿ ಟಿಕಾರೆ, ನಿಂಗೋಜಿರಾವ್ ಗುಜ್ಜಾರ್, ರಮೇಶ್ ತೇಲ್ಕರ್, ರಮೇಶ್ ಅಂಬರ್‌ಕರ್, ಅರುಣ್ ಗಡ್ಡಾಳೆ, ಅನಿಲ್ ಮಾಳದ್‌ಕರ್, ಕವಿತಾ ಸರ್ವದೆ, ಸುಧಾ ಟಿಕಾರೆ, ಅನ್ನಪೂರ್ಣ ಗುಜ್ಜಾರ್, ಗಣೇಶ್ ವಾದೋನೆ, ಶಂಕರ್ ಬೋಂದಾಡೆ, ಅಶೋಕ್ ನವಲೆ, ಮಂಜುನಾಥ್ ಗುಡ್ಡಾಳೆ, ಕುಂದುವಾಡ ಮಂಜುನಾಥ್ ಹಾಗು ಇತರರು ಇದ್ದರು.


**GODOWN AVAILABLE FOR RENT**



3600 sqft. With 18 HP
Power available
Shankar Vihar Extension,
P.B. Road, Davangere.

Contact:
**98869 78843**
**98440 63379**


**ಮಾನ್ಯ ಘನ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಕಿ.ವಿ.) ಮತ್ತು ಜೆ.ಎಂ.ಎಫ್. ಸಿ. ನ್ಯಾಯಾಲಯ ದಾವಣಗೆರೆ.**

**ಸಿ.ಆರ್. ಮಿಸ್. ನಂ: 306/2022**

ಅರ್ಜಿದಾರರು : **ಆರ್. ನಾಗರಾಜ್ ಬಿನ್ ರಾಮನಾಯ್ಕ,** ವಯಸ್ಸು ಸುಮಾರು 51 ವರ್ಷ, ಶಿಕ್ಷಕರು ವಾಸ: ತೋಳಹುಣಸೆ ಗ್ರಾಮ, ವೈ.ಸಿ.ಎಂ. ಗೇಟ್ ಹತ್ತಿರ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ

**ವಿರುದ್ಧ**

ಎದುರುದಾರರು: **ಜನನ, ಮರಣ ನೋಂದಣಾಧಿಕಾರಿಗಳು** ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ

**ಪ್ರಕಟಣೆಗಾಗಿ**

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿದಾರರ ತಾಯಿಯಾದ ಶಾಂತಿಬಾಯಿ ಕೋಂ ರಾಮನಾಯ್ಕ ಇವರು ದಿನಾಂಕ : 01.11.1989 ರಂದು ಜಿಲ್ಲಾ ಚಿಗಟೇರಿ ಆಸ್ಪತ್ರೆ, ದಾವಣಗೆರೆ ಇಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಯಾರದಾದರು ತಕರಾರು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವುದಿದ್ದಲ್ಲಿ ದಿನಾಂಕ: 21.7.2022ರಂದು ಖುದ್ದು ಹಾಜರಾಗಿ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮುದ್ರೆ ಹಾಗೂ ಸಹಿಯೊಂದಿಗೆ ದಿನಾಂಕ: 13.06.2022 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-
**ಶಿರಸ್ತೇದಾರರು**
ಮಾನ್ಯ 1ನೇ ಹೆಚ್ಚುವರಿ ಸಿವಿಲ್ (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ದಾವಣಗೆರೆ

ಅರ್ಜಿದಾರ ಪರ ವಕೀಲರು
**(ಎಸ್. ಕುಮಾರ್)**



## ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ವಿವಿಧ ಘಟಕಗಳಿಂದ ವಿಶ್ವ ಪರಿಸರ ದಿನಾಚರಣೆ

ಹರಿಹರ, ಜೂ.13- ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಆವರಣದಲ್ಲಿ ಜಿಲ್ಲಾ ಮತ್ತು ನಗರ, ಹೊನ್ನಾಳಿ, ನ್ಯಾಮತಿ, ಹರಿಹರ, ಜಗಳೂರು, ಹರಪನಹಳ್ಳಿ, ರಾಣೇಬೆನ್ನೂರು ತಾಲ್ಲೂಕು ಪಂಚಮಸಾಲಿ ಸಮಾಜದ ವಿವಿಧ ಪಂಚಮಸಾಲಿ ಘಟಕಗಳ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಅಧ್ಯಕ್ಷತೆಯನ್ನು ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಸುಷ್ಮಾ ಪಾಟೀಲ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿಯ ನಿವೃತ್ತ ಅಧಿಕಾರಿ ಕೆ.ಬಿ.ಕೊಟ್ರೇಶ್, ಸಮಾಜದ ಜಿಲ್ಲಾ ಅಧ್ಯಕ್ಷ ಬಿ.ಸಿ. ಉಮಾಪತಿ, ಮುಖಂಡರಾದ ಶ್ರೀಮತಿ ವಸಂತ ಬಸವರಾಜ್ ಹುಲ್ಲತ್ತಿ , ಶ್ರೀಮತಿ ರಶ್ಮಿನಾಗರಾಜ್ ಕುಂಕೋದ್, ಶ್ರೀಮತಿ ವೀಣಾ ನಟರಾಜ್ ಬೆಳ್ಳೂಡಿ, ಶ್ರೀಮತಿ ಪಾರ್ವತಿ ಶಿವಕುಮಾರ್ ಮತ್ತಿಹಳ್ಳಿ, ವಾಣಿ ಶಿವಣ್ಣ, ಎಂ. ದೊಡ್ಡಪ್ಪ, ಶ್ರೀಧರ, ಕಾರ್ಯದರ್ಶಿ ಬಿ.ಎಸ್. ಶಂಭುಲಿಂಗಪ್ಪ, ಎ. ವೀರಭದ್ರಪ್ಪ, ಎಸ್.ಸಿ. ಕಾಶೀನಾಥ್ , ಮಲ್ಲಿನಾಥ್ . ಎಸ್, ಕೆ.ಸಿ. ಉಮಾಕಾಂತ್, ಜಿ. ಷಣ್ಮುಖಪ್ಪ ಮೇಷ್ಟ್ರು, . ಪ್ರಕಾಶ್ ಪಾಟೀಲ್, ಸುರೇಶ್, ಮಂಜುನಾಥ ಪುರವಂತರ, ಶ್ರೀಮತಿ ಮೀನಾ ಪ್ರಸಾದ್ ಅಣಪೂರ್ ಮತ್ತು ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

## ಜಗಳೂರು: ಗ್ರಾ.ಪಂ.ಗಳಿಂದ ವಿದ್ಯುತ್ ಬಾಕಿ ಪಾವತಿಗೆ ಗಡುವು

ದಾವಣಗೆರೆ, ಜೂ.13- ಬೆಸ್ಕಾಂ ಜಗಳೂರು ಉಪವಿಭಾಗದ ವ್ಯಾಪ್ತಿಯಲ್ಲಿನ 22 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಒಳಪಡುವ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳ ಒಟ್ಟು ಬಾಕಿ 25.89 ಕೋಟಿ ರೂ ವಿದ್ಯುತ್ ಬಾಕಿ ಮೊತ್ತವನ್ನು ಏಳು ದಿನಗಳ ಒಳಗಾಗಿ ಪಾವತಿಸುವಂತೆ ಬೆಸ್ಕಾಂ ಸೂಚಿಸಿದೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಮೇ-2022ರ ಅಂತ್ಯಕ್ಕೆ ಬೆಸ್ಕಾಂ ವಿದ್ಯುತ್ ಶುಲ್ಕ ಬಾಕಿ ಮೊತ್ತ ಪಾವತಿಸದೇ ಇದ್ದಲ್ಲಿ, ಗ್ರಾಪಂ ಪಿಡಿಓ, ಗ್ರಾಪಂ ವ್ಯಾಪ್ತಿಗೆ ಬರುವ ವಿದ್ಯುತ್ ಸ್ಥಾವರಗಳ ಕ್ರೋಢೀಕರಿಸಿದ ವಿದ್ಯುತ್ ಬಾಕಿ ಮೊತ್ತವನ್ನು ಗ್ರಾಪಂ ಪಿಡಿಓ ಕಛೇರಿಯ ಆರ್.ಆರ್ ಸಂಖ್ಯೆಗೆ ವರ್ಗಾವಣೆ ಮಾಡಿ ವಿದ್ಯುತ್ ಕಡಿತಗೊಳಿಸಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಆಗುವ ತೊಂದರೆಗೆ ಬೆಸ್ಕಾಂ ಜಗಳೂರು ಉಪವಿಭಾಗ ಜವಾಬ್ದಾರಿ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಎಂದು ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಸಾಯಿ ಕ್ರೆಡಿಟ್ ಸೊಸೈಟಿ ಅಧ್ಯಕ್ಷರಾಗಿ ರೇವಣಸಿದ್ದಪ್ಪ



ದಾವಣಗೆರೆ, ಜೂ.13- ಶ್ರೀ ಸಾಯಿಕ್ರೆಡಿಟ್‌ಕೋ ಆಪ್. ಸೊಸೈಟಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎನ್. ಎಸ್.ರೇವಣಸಿದ್ದಪ್ಪ, ಉಪಾಧ್ಯಕ್ಷರಾಗಿ ವೀರಕುಮಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ನಗರದ ಜ ಜ ಮು ಕಾಲೇಜಿನಲ್ಲಿ ರಾಜ್ಯಮಟ್ಟದ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿ

ಜ. ಜ. ಮು. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಇಂದಿನಿಂದ 5 ದಿನಗಳ ಕಾಲ ರಾಜ್ಯಮಟ್ಟದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ರಾಜ್ಯ ಮಟ್ಟದ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿ ನಡೆಯಲಿದೆ. ರಾಜ್ಯದ ವಿವಿಧ ಭಾಗಗಳಿಂದ 40 ಪುರುಷರು, 28 ಮಹಿಳೆಯರ ತಂಡಗಳು ಭಾಗಿಯಾಗಲಿವೆ. ಜಿಲ್ಲಾ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ಹಾಗೂ ಎಸ್.ಎಸ್ ಹೈಟೆಕ್ ಕಾಲೇಜಿನ ಅಂಕಣದಲ್ಲಿ ಪಂದ್ಯಗಳು ಜರುಗಲಿವೆ.

ಪಂದ್ಯಾವಳಿಯ ಉದ್ಘಾಟನಾ ಸಮಾರಂಭವು ಇಂದು ಸಂಜೆ 5.30 ಕ್ಕೆ ನಡೆಯಲಿದ್ದು, ಮುಖ್ಯ ಅತಿಥಿಯಾಗಿ ಬ್ಯಾಸ್ಕೆಟ್ ಬಾಲ್ ತರಬೇತುದಾರ ಸತ್ಯನ್, ಅತಿಥಿಗಳಾಗಿ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಸೆನೆಟ್ ಪ್ರತಿನಿಧಿ ಡಾಕ್ಟರ್ ರವೀಂದ್ರ ಬಣಕಾರ್, ಬಾಪೂಜಿ ಶಿಶು ಆಸ್ಪತ್ರೆಯ ವೈದ್ಯ ಡಾಕ್ಟರ್ ಮೂಗನಗೌಡ ಪಾಟೀಲ, ದಯಾನಂದ ಸಾಗರ್ ಕಾಲೇಜಿನ ದೈಹಿಕ ನಿರ್ದೇಶಕ ನಂಜುಂಡಸ್ವಾಮಿ ಅವರುಗಳು ಪಾಲ್ಗೊಳ್ಳಲಿದ್ದಾರೆ. ಬಾಪೂಜಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

# ಹಾತೀರಾಮ್ ಬಾವಾಜಿ ಚಿಂತನೆ ಅಳವಡಿಸಿಕೊಳ್ಳಿ

## ಚಿತ್ರದುರ್ಗ ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಕರೆ



ದಾವಣಗೆರೆ, ಜೂ. 13- ಶ್ರೀ ಹಾತೀರಾಮ್ ಬಾವಾಜಿರವರ ಚಿಂತನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಚಿತ್ರದುರ್ಗ ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಹೇಳಿದರು.

ಇಲ್ಲಿನ ಸರಸ್ವತಿ ನಗರದ ಶ್ರೀ ಸೇವಾಲಾಲ್ ಸಮುದಾಯ ಭವನದಲ್ಲಿ ಮೊನ್ನೆ ನಡೆದ ಶ್ರೀ ಹಾತೀರಾಮ್ ಬಾವಾಜಿ ರಾಜ್ಯ ಬಂಜಾರ ಸೇವಾ ಸಂಘದ ಉದ್ಘಾಟನೆ ಹಾಗೂ ಬಂಜಾರ ಗುರುಗಳ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶ್ರೀ ಹಾತೀರಾಮ್ ಬಾವಾಜಿ ಹೆಸರಿನಲ್ಲಿ ನೂತನವಾಗಿ ಸ್ಥಾಪನೆಗೊಂಡ ಸಂಘಟನೆಯು ಬಹಳಷ್ಟು ದೊಡ್ಡಮಟ್ಟದಲ್ಲಿ ಬೆಳೆದು ಸಮಾಜದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮುಂದೆ ಬರಬೇಕು. ಹಾತೀರಾಮ್ ಬಾವಾಜಿ ಅವರ ಇತಿಹಾಸವನ್ನು ಎಲ್ಲೋ ಒಂದು ಕಡೆ ಮೂಲೆ ಗುಂಪಾಗಿ ಮಾಡುತ್ತಿದ್ದಾರೆ. ಬಾವಾಜಿಯವರ ವಿಚಾರ ಚಿಂತನೆಗಳನ್ನು ಎಲ್ಲರಿಗೂ ತಿಳಿಸುವಂತಹ ಕೆಲಸ ಮಾಡಬೇಕೆಂದರು.

ಮಹಾನಗರ ಪಾಲಿಕೆ ಮೇಯರ್ ಶ್ರೀಮತಿ ಜಯಮ್ಮಗೋಪಿನಾಯ್ಕ ಮಾತನಾಡಿ, ಸಂಘಟನೆಗಳು ಒಗ್ಗಟ್ಟಿನಿಂದ ಕೆಲಸ ಮಾಡಿ ಸಮಾಜದಲ್ಲಿ ಸಂಘಟನಾತ್ಮಕವಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಿ ಎಂದು ಹೇಳಿದರು.

ಗರಗೆರೆಯ ಶ್ರೀ ಧೇನಾಭಗತ್ ಸ್ವಾಮಿ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ನೂತನ ಸಂಘಟನೆಗಳು ಉದ್ಘಾಟನೆಗೊಂಡ ಎರಡು ವರ್ಷಗಳಲ್ಲೇ ಸಣ್ಣ ಪುಟ್ಟ ವಿಚಾರಗಳಿಗೆ ವೈಮನಸ್ಸು ಉಂಟಾಗಿ ಬೇರೆ ಸಂಘವನ್ನು ಸ್ಥಾಪಿಸುತ್ತಾರೆ. ತಾವುಗಳು ಹೀಗೆ ಮಾಡದೇ ಉತ್ತಮವಾಗಿ ಕೆಲಸ ನಿರ್ವಹಿಸಿ, ಸಂಘಟನೆಗಳು ಬೆಳೆಯಲು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಬೇಕು. ಶ್ರೀ ಹಾತೀರಾಮ್ ಬಾವಾಜಿ ಅವರ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.


ವಿಜಯಪುರದ ಶ್ರೀ ರಾಮಕೃಷ್ಣ ಆಶ್ರಮದ ಶ್ರೀಕಾಂತ್ ಗುರೂಜಿ ಉಪನ್ಯಾಸ ನೀಡಿದರು. ತೆಲಂಗಾಣದ ಸೇವಾಘಡ್ ಬಂಜಾರ್ ಧರ್ಮ ರಕ್ಷಾ ಸಮಿತಿಯ ಗಣಪತಿ ಪಾಪೂ ಕೊಳಲು ವಾದ್ಯ ನುಡಿಸಿದರು.

ಹಾನಗಲ್ ದುರ್ಗಾದೇವಿ ಮಠದ ತಿಪ್ಪೇಸ್ವಾಮಿ, ಚಳ್ಳಕೆರೆ ಬಾಲಾಜಿ ಆಶ್ರಮದ ಶಿವಸಾದ್ ಬಾವಾಜಿ, ಕುಂಚೇನಹಳ್ಳಿ ಶನೇಶ್ವರ ಸೇವಾಲಾಲ್ ಮಠದ ನಾಗರಾಜ ಸ್ವಾಮಿ, ತರೀಕೆರೆಯ ಮಂಜುನಾಥ್ ಬಾಪೂ, ಕೊಪ್ಪಳ ಬಹದ್ದೂರ್ ಬಂಡ ಪೀಠದ ಗೋಸ್ವಾಮಿ ಬಾಪೂ, ದಾವಣಗೆರೆಯ ಡಾ. ವೆಂಕಟೇಶ್ ಗುರೂಜಿ, ಜೋಗಿಹಳ್ಳಿ ಸುನಿಲ್ ಮಹಾರಾಜ್, ಮಹಾನಗರ ಪಾಲಿಕೆ ಸದಸ್ಯ ಮಂಜಾನಾಯ್ಕ, ಕೃಷ್ಣನಾಯ್ಕ, ಜನಪದ ಕಲಾವಿದ ಉಮೇಶನಾಯ್ಕ, ಅರುಣ್ ರಾಥೋಡ್, ಪ್ರವೀಣ ನಾಯ್ಕ, ಟಿವಿ5 ಮಂಜು, ಲೋಕೇಶನಾಯ್ಕ, ಗಜಾನಂದ ನಾಯ್ಕ, ಮಾರುತಿ ರಾಥೋಡ್, ದಿವಾಕರ ನಾಯ್ಕ, ಕುಮಾರ ನಾಯ್ಕ, ಸುಮಲತಾ ಚೌಹ್ವಾಣ್, ಚಂದ್ರನಾಯ್ಕ, ಮಹಾಂತೇಶ್ ಚೌಹ್ವಾಣ್ ಮತ್ತಿತರರಿದ್ದರು.

ಕರ್ನಾಟಕ ಜಾನಪದ ಪರಿಷತ್ ನಾಡೋಜ ಪ್ರಶಸ್ತಿ ಪುರಸ್ಕೃತ ಧನರಾಮ್ ಆಲ್ಯಪ್ಪ ಲಮಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರಾದ ರುದ್ರಾಕ್ಷಿಬಾಯಿ ಪ್ರಾರ್ಥಿಸಿದರು. ಎಂ. ಅಭಿಲಾಷ್ ನಿರೂಪಿಸಿದರು. ಬಸವರಾಜನಾಯ್ಕ ವಂದಿಸಿದರು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಕಾರ ಹುಣ್ಣಿಮೆ



ಶ್ರೀ ಮಾತಾ ಅನ್ನ ಪೂರ್ಣೇಶ್ವರಿ ದೇವಸ್ಥಾನದಲ್ಲಿ ಹುಣ್ಣಿಮೆ ದಿನವಾದ ಇಂದು ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ.

ಶ್ರೀಮತಿ ನಂದಿನಿ ಮತ್ತು ಪ್ರಶಾಂತ್ ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ವಾಲ್ಮೀಕಿ ಶ್ರೀಗೆ ಸಚಿವ ಬಿ.ಸಿ. ಪಾಟೀಲ್, ಹೆಚ್.ಪಿ. ರಾಜೇಶ್, ಹುಲ್ಲುಮನೆ ಬೆಂಬಲ




ದಾವಣಗೆರೆ, ಜೂ. 13 - ವಾಲ್ಮೀಕಿ ನಾಯಕ ಸಮಾಜಕ್ಕೆ ಶೇ. 7.5 ಮೀಸಲಾತಿಗಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರನ್ನು ಬೆಂಬಲಿಸಿ, ಕೃಷಿ ಸಚಿವ ಬಿ. ಸಿ. ಪಾಟೀಲ್, ಜಗಳೂರಿನ ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಅವರುಗಳು ಇಂದು ಸತ್ಯಾಗ್ರಹ ಶಿಬಿರಕ್ಕೆ ಭೇಟಿ ನೀಡಿ, ಶ್ರೀಗಳವರನ್ನು ಸನ್ಮಾನಿಸಿ, ಗೌರವಿಸುವುದರ ಮೂಲಕ ಬೆಂಬಲ ವ್ಯಕ್ತಪಡಿಸಿದರು. ಕಾಂಗ್ರೆಸ್ ಮುಖಂಡ ಗಣೇಶ್ ಹುಲ್ಲುಮನೆ ಮತ್ತು ಇತರರು ಉಪಸ್ಥಿತರಿದ್ದರು.

## ಚಳ್ಳಕೆರೆ ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಟಿ.ಜೆ. ತಿಪ್ಪೇಸ್ವಾಮಿ

ಚಳ್ಳಕೆರೆ, ಜೂ. 13- ಇಲ್ಲಿನ ಪ್ರವಾಸಿ ಮಂದಿರದಲ್ಲಿ ಮೊನ್ನೆ ನಡೆದ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಗೌಡಗೆರೆ ಹಾಗೂ ಪತ್ರಕರ್ತರ ಸಮ್ಮುಖದಲ್ಲಿ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಟಿ.ಜೆ. ತಿಪ್ಪೇಸ್ವಾಮಿ ಅವರನ್ನು ಆಯ್ಕೆ ಮಾಡಲಾಯಿತು.



## ಎನ್‌ಎಸ್‌ಯುಐ ಜಿಲ್ಲಾ ಘಟಕಕ್ಕೆ ತಾಹೀರ್ ಸಮೀರ್ ಉಪಾಧ್ಯಕ್ಷ



ದಾವಣಗೆರೆ, ಜೂ. 13- ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ (ಎನ್‌ಎಸ್‌ಯುಐ) ದ ಜಿಲ್ಲಾ ಘಟಕಕ್ಕೆ ತಾಹೀರ್ ಸಮೀರ್ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ರಾಜ್ಯ ಎನ್.ಎಸ್.ಯು.ಐ ಅಧ್ಯಕ್ಷ ಎನ್.ಜಿ. ಕೀರ್ತಿ ಗಣೇಶ್ ತಿಳಿಸಿದ್ದಾರೆ.

## ಶ್ರೀ ಪ್ರಸನ್ನಾನಂದ ಸ್ವಾಮಿ ಸತ್ಯಾಗ್ರಹಕ್ಕೆ ಸಮಾಜದ ಮುಖಂಡರಿಂದ ಬೆಂಬಲ




ದಾವಣಗೆರೆ, ಜೂ. 13 - ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಶೇ. 7.5 ಮೀಸಲಾತಿಗಾಗಿ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರನ್ನು ಬೆಂಬಲಿಸಿ, ದಾವಣಗೆರೆಯಿಂದ ನೂರಾರು ನಾಯಕ ಸಮಾಜದ ಮುಖಂಡರುಗಳು 124ನೇ ದಿನದ ಸತ್ಯಾಗ್ರಹದಲ್ಲಿ ಪಾಲ್ಗೊಂಡು, ಗುರುಗಳ ಮಾರ್ಗದರ್ಶನದಲ್ಲಿ ಮುಂದಿನ ಹೋರಾಟದ ಬಗ್ಗೆ ಶ್ರೀಗಳೊಂದಿಗೆ ಚರ್ಚಿಸಿದರು.

ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ ನೇತೃತ್ವದಲ್ಲಿ, ಎನ್.ಎಂ. ಆಂಜನೇಯ ಗುರೂಜಿ, ಶ್ಯಾಗಲೆ ಕೆ.ಆರ್. ಮಂಜುನಾಥ್, ಪ್ರೊ. ಎ.ಬಿ. ರಾಮಚಂದ್ರಪ್ಪ, ಕೆ.ಇ.ಬಿ. ರಾಜ್ಯ ಘಟಕದ ಉಪಾಧ್ಯಕ್ಷ ಜಯಣ್ಣ, ಎಂ.ಬಿ. ಕೇರಿ ನರಸಿಂಹಯ್ಯ, ಹೊದಿಗೆರೆ ರಮೇಶ್, ಚಿಕ್ಕಮ್ಮನ ಹಟ್ಟಿ ದೇವೇಂದ್ರಪ್ಪ, ಎಸ್.ಟಿ ರಾಜ್ಯ ಘಟಕದ ಅಧ್ಯಕ್ಷ ಕೆ.ಬಿ.ಪಾಲಯ್ಯ, ಜಿಗಳಿ ಆನಂದಪ್ಪ, ಜಿಗಳಿ ಪ್ರಕಾಶ್, ಎಂ.ಪಿ .ಪ್ರಕಾಶ್ ಮಗಳಾದ ವೀಣಾ, ತ್ಯಾವಣಗಿ ಜ್ಞಾನೇಶ್ ಮತ್ತು ಇತರರು ಭಾಗವಹಿಸಿ ಅಹೋರಾತ್ರಿ ಸತ್ಯಾಗ್ರಹಕ್ಕೆ ಬೆಂಬಲಿಸಿ ಯಶಸ್ವಿಗೊಳಿಸಿದರು.

## ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ನವ ಸಂಕಲ್ಪ ಚಿಂತನಾ ಶಿಬಿರ

ಜಿಲ್ಲಾ ಕಾಂಗ್ರೆಸ್ ವತಿಯಿಂದ ನವ ಸಂಕಲ್ಪ ಚಿಂತನಾ ಶಿಬಿರವು ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ಇಂದು ಬೆಳಿಗ್ಗೆ 9.30 ಗಂಟೆಗೆ ನಡೆಯಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ತಿಳಿಸಿದ್ದಾರೆ.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕೆಪಿಸಿಸಿ ಉಪಾಧ್ಯಕ್ಷರೂ, ಜಿಲ್ಲೆಯ ವೀಕ್ಷಕರೂ ಆದ ಎಂ.ಸಿ. ವೇಣುಗೋಪಾಲ್, ಮಾಜಿ ರಾಜ್ಯಸಭಾ ಸದಸ್ಯ ಎಲ್. ಹನುಮಂತಪ್ಪ, ಮಾಜಿ ಸ್ಪೀಕರ್ ಬಿ.ಎಲ್. ಶಂಕರ್, ಕೆಪಿಸಿಸಿ ವಕ್ತಾರ ನಿಕೇತ್ ರಾಜ್ ಮೌರ್ಯ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಎಸ್.ರಾಮಪ್ಪ, ಅಬ್ದುಲ್ ಜಬ್ಬಾರ್ ಇತರರು ಭಾಗವಹಿಸಲಿದ್ದಾರೆ.

## ಡಿಪ್ಲೋಮಾ : ಅರ್ಜಿ ವಿಸ್ತರಣೆ

ದಾವಣಗೆರೆ,ಜೂ.13- ಸರ್ಕಾರಿ ಹಾಗು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಪೂರ್ಣಾವಧಿಯ ಇಂಜಿನಿಯರಿಂಗ್ ಮತ್ತು ನಾನ್ ಇಂಜಿನಿಯರಿಂಗ್ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯಲು ಇದೇ ದಿನಾಂಕ 20ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಸೀತಮ್ಮ ಬಾಲಕಿಯರ ಶಾಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ಪರಿಸರ ದಿನಾಚರಣೆ



ದಾವಣಗೆರೆ, ಜೂ. 13- ನಗರದ ಸ್ವರ್ಣ ಭಾರತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ವಿಹಾ ವನಿತಾ ಪರಿಸರ ವೇದಿಕೆ, ಎಸ್.ಎಸ್. ಬಡಾವಣೆ ನಾಗರಿಕ ಸಮಿತಿ ಇವರ ಸಹಯೋಗದೊಂದಿಗೆ ಸೀತಮ್ಮ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಭಾರತಿ ಕೇಶವಮೂರ್ತಿ ಅವರ ನೇತೃತ್ವದಲ್ಲಿ ಪ್ಲಾಸ್ಟಿಕ್ ಮುಕ್ತ ಪರಿಸರ ದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಶಾಂತಾಭಟ್, ಗಿರಿಜಾ ಮಹಾದೇವ್, ವಾಣಿ ವೆಂಕಪ್ಪ, ಶಾಲೆಯ ಪ್ರಾಂಶುಪಾಲ ಮಂಜಪ್ಪ, ವಿಜಯ ವೀರೇಂದ್ರ, ಸಂಗೀತ ಶಿಕ್ಷಕಿ ಶ್ರೀಮತಿ ತ್ರಿವೇಣಿ, ಭಾರತಿ ಕೇಶವಮೂರ್ತಿ, ಶ್ರೀಮತಿ ವಿಜಯ ಹಳಕಟ್ಟಿ, ಗಿರಿಜಾ ಮಹಾದೇವ್, ವಾಣಿರಾಜ್, ದಿವ್ಯ ಉಪಸ್ಥಿತರಿದ್ದರು.

## ಹನ್ನೆರಡನೇ ವರ್ಷದ ಪುಣ್ಯಸ್ಮರಣೆ



**ದಿ|| ಹಾಲೇಕಲ್ಲು ಟಿ. ಸಂಗಪ್ಪನವರು**

ಸ್ವಾತಂತ್ರ್ಯ ಹೋರಾಟಗಾರರು,
ಅಗಸನಕಟ್ಟೆ, ದಾವಣಗೆರೆ ತಾಲ್ಲೂಕು.

ನೀವು ನಮ್ಮನ್ನಗಲಿ ಇಂದಿಗೆ (ದಿನಾಂಕ 14.06.2022ಕ್ಕೆ)
ಹನ್ನೆರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ
ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುವ...


ಧರ್ಮಪತ್ನಿ : ಶ್ರೀಮತಿ ಸುನಂದಮ್ಮ, ಅಗಸನಕಟ್ಟೆ.
ಮಗ-ಸೊಸೆ : ಶ್ರೀ ಹೆಚ್.ಎಸ್.ಚನ್ನಬಸಪ್ಪ, ಮುಖ್ಯೋಪಾಧ್ಯಾಯರು, ಬಾಪೂಜಿ ಪ್ರೌಢ ಶಾಲೆ, ಹರಿಹರ. ಶ್ರೀಮತಿ ರೇಣುಕ, ಶಿಕ್ಷಕರು,
ಶ್ರೀಮತಿ ಹೆಚ್.ಸಿ. ಭಾಗ್ಯಶ್ರೀ, ಶ್ರೀ ಹೆಚ್.ವಿ.ಗಿರೀಶ್,
ಮೊಮ್ಮಗ : ಹೆಚ್.ಸಿ. ವಿನಯಕುಮಾರ್,
ಮರಿ ಮೊಮ್ಮಗ : ಕು|| ಪ್ರಥಮ್, ಅಳಿಯಂದಿರು,
ಅಭಿಮಾನಿ ಹಿತೈಷಿಗಳು, ಬಂಧು-ಮಿತ್ರರು
ಹಾಗೂ ಅಗಸನಕಟ್ಟೆ ಗ್ರಾಮಸ್ಥರು.

## ಇಂದೂ ಸಹ ರಾಹುಲ್ ಗಾಂಧಿ ವಿಚಾರಣೆ ಮುಂದುವರಿಕೆ

ನವದೆಹಲಿ, ಜೂ. 13 – ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರವೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಚಾರಣೆ ನಡೆಯಲಿದೆ.

ಜಾರಿ ನಿರ್ದೇಶನಾಲಯ ಸೋಮವಾರದಂದು ಪ್ರಕರಣದ ಬಗ್ಗೆ ಒಂಭತ್ತು ಗಂಟೆ ಕಾಲ ವಿಚಾರಣೆ ನಡೆಸಿತು. ಬೆಳಿಗ್ಗೆ 11 ಗಂಟೆಗೆ ಜಾರಿ ನಿರ್ದೇಶನಾಲಯದ ಕಚೇರಿಗೆ ಬಂದಿದ್ದ ರಾಹುಲ್ ಗಾಂಧಿ, ರಾತ್ರಿ 10 ಗಂಟೆಗೆ ಅಲ್ಲಿಂದ ನಿರ್ಗಮಿಸಿದರು.


**ಜನ್ಮ ದಿನ ಶುಭಾಶಯಗಳು**



ಹಿರಿಯ ವರ್ತಕರಾದ
**ಎಸ್.ಟಿ. ಕುಸುಮ ಶೆಟ್ರು**
ಇವರಿಗೆ ಜನ್ಮದಿನ ಶುಭಾಶಯಗಳು

**ನಂದಿ ಬಸವರಾಜ್**
ಸದಸ್ಯರು, ದಾವಣಗೆರೆ ಕ್ಲಬ್, ದಾವಣಗೆರೆ
**ಹಾಗೂ ದಾವಣಗೆರೆ ಕ್ಲಬ್ ಸಿಬ್ಬಂದಿ ವರ್ಗ**



ssims
SPARSH
CENTRE FOR ACCIDENTS
BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**
**ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು**
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty
(Depuy, SPARSH India), Fellowship in Septic &
Aseptic Revision Joint Replacement surgery
(EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

ದಿನಾಂಕ : ಗುರುವಾರ, 16 ಜೂನ್ 2022
ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

**ನೋಂದಣಿಗಾಗಿ ಕರೆಮಾಡಿ: 96869 29090**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte